ಉಪಾಧ್ಯಕ್ಷರು:- Table ಮಾಡಿದ್ದಾರೆ. ನೀವು discussion initiate ಮಾಡಿ.

ಶ್ರೀ ವಿ. ಸುನೀಲ್ ಕುಮಾರ್:- ಮಾನ್ಯ ಮುಖ್ಯಮಂತ್ರಿಗಳು ಏಕಾಂಗಿ ಆಗಿದ್ದಾರೆಯೇ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಕಾರಜೋಳರವರೆ, ಮಾತನಾಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಶಿವಮೂರ್ತಿಯವರೆ, ಈಗ ಸಮಯ ಇಲ್ಲ, ತಾವು ಕುಳಿತುಕೊಳ್ಳಿ.

8. ವಿತ್ತೀಯ ಕಾರ್ಯಕಲಾಪಗಳು

2015-16ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):- ಮಾನ್ಯ ಉಪಾಧ್ಯಕ್ಷರೆ, 2015-16ನೇ ಸಾಲಿನ ಬಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಸೆಂಬ್ಲಿಯೊಳಗಿನ ಇವತ್ತಿನ ಈ ಸ್ಥಿತಿಗತಿಯನ್ನು ನೋಡಿದಾಗ ನನಗೆ ಒಂದು ಹಳೆಯ ಜೋಕ್ ನೆನಪಾಗುತ್ತಿದೆ. ಒಂದು ಊರಿನಲ್ಲಿ ಒಬ್ಬ ಬೊಮ್ಮಣ್ಣ ಎಂಬುವವನು ಇದ್ದನಂತೆ. ಆತ ಆ ಊರಿನಲ್ಲಿ ಪುಢಾರಿ. ಆತ ಆ ಊರಿನಲ್ಲಿ ಬಹುಸಂಖ್ಯಾತರ ವರ್ಗಕ್ಕೆ ಸೇರಿದವನು. ಆ ಊರಿನಲ್ಲಿರುವ ಇಸ್ಪಿಟ್ ಕ್ಲಬ್‌ಗಳು ಅವನದೇ, Real estate ದಂಧೆಯೂ ಅವನದೇ, ಸಾರಾಯಿ ಅಂಗಡಿಯು ಅವನದೇ, hair cutting saloon ಕೂಡ ಅವನದೇ. ಅವನ ನೇತೃತ್ವದಲ್ಲಿ, ಅವನ ಒಡೆತನದಲ್ಲೇ ಇವೆಲ್ಲಾ

ನಡೆಯುವಂಥವುಗಳು. ಒಂದು ದಿನ ಆಕಸ್ಮಾತ್ ಆಗಿ ಆತನಿಗೆ ತಿಮ್ಮ ಎಂಬುವವನು ಭೇಟಿ ಆಗುತ್ತಾನೆ. ತಿಮ್ಮನು ಆತನಿಗೆ, ಏನ್ ಬೊಮ್ಮಣ್ಣ ನೀನು ಇಷ್ಟೆಲ್ಲಾ ದಂಧೆಗಳನ್ನು ಮಾಡುತ್ತಿದ್ದೀಯಾ, ಊರಿನಲ್ಲಿ ಪುಢಾರಿಯಾಗಿದ್ದೀಯಾ, ನಿನ್ನನ್ನು ಕೇಳುವವರು ಯಾರು ಇಲ್ಲವಲ್ಲ ಎಂದು ಕೇಳುತ್ತಾನೆ. ಆಗ 'ನೋಡು ತಿಮ್ಮಣ್ಣ, ಯಾವ ನನ್ಮಗ ನನ್ನನ್ನು ಕೇಳುತ್ತಾನೆ. ಅವನನ್ನು ನಾನು ನೋಡಿಕೊಳ್ಳುತ್ತೇನೆ' ಎಂದು ಬೊಮ್ಮಣ್ಣ ಹೇಳುತ್ತಾನೆ. 'ಯಾವ ನನ್ಮಗ ನನ್ನನ್ನು ಕೇಳುತ್ತಾನೆ' ಅಂದರೆ ಅವನನ್ನು ಕೇಳುವಂಥ ತಾಕತ್ತು ಇರುವವನು ಈ ಊರಿನಲ್ಲಿ ಯಾರು ಹುಟ್ಟಿಲ್ಲವೆಂದು ಅರ್ಥ. ಅಷ್ಟು ಮಾತನಾಡಿ ಬೊಮ್ಮಣ್ಣ ಬೀಡಿ ಸೇದು, ಚಹಾ ಕುಡಿಯುವಷ್ಟರಲ್ಲಿ ಸರ್ಕಾರ ಅಸೆಂಬ್ಲಿ ಚುನಾವಣೆಯನ್ನು ಘೋಷಣೆ ಮಾಡುತ್ತದೆ. ಸರ್ಕಾರ ಅಸೆಂಬ್ಲಿ ಚುನಾವಣೆಯನ್ನು ಘೋಷಣೆ ಮಾಡಿದೆ ಎಂದು ತಿಮ್ಮ ಹೇಳಿದ. ಆಗ ಬೊಮ್ಮಣ್ಣ ನಾನು ಚುನಾವಣೆಗೆ ನಿಲ್ಲಬಹುದಲ್ಲವೇ? ಎಂದು ಕೇಳುತ್ತಾನೆ. ಆಗ ತಿಮ್ಮ ನೀನು ಚುನಾವಣೆಗೆ ಅವಶ್ಯವಾಗಿ ನಿಲ್ಲಬಹುದು, ನಿನ್ನ ತಲೆಗೂ ಒಂದು ಓಟು ಇದೆ ಎಂದು ಹೇಳುತ್ತಾನೆ. ಬೊಮ್ಮಣ್ಣ ಚುನಾವಣೆಗೆ ತಯಾರಾಗಿ nomination ಎಲ್ಲವನ್ನೂ ಕೊಡುತ್ತಾನೆ. Nomination ಕೊಟ್ಟು ಬಂದ ಮೇಲೆ ಚುನಾವಣೆಗೆ ಪ್ರಚಾರ ಮಾಡಬೇಕಲ್ಲ. ಆತ ಊರಿನಲ್ಲಿ ಬಹುಸಂಖ್ಯಾತರ ವರ್ಗಕ್ಕೆ ಸೇರಿದವನು. ಊರಿನ ಎಲ್ಲ ಕಸುಬುಗಳು ಅವನದೇ ಅವನನ್ನು ತಡೆಯುವಂಥ ಶಕ್ತಿ ಯಾರಿಗೂ ಇರಲಿಲ್ಲ. ಆದ್ದರಿಂದ, ಆತ, ನನಗೆ ಯಾರು ಓಟು ಹಾಕುವುದಿಲ್ಲ, ಆ ಮಗನ ಮನೆಯನ್ನು ಸುಟ್ಟು ಬೂದಿ ಮಾಡಿಬಿಡುತ್ತೇನೆಂದು ಘೋಷಣೆ ಮಾಡಿದ. ಊರಿನಲ್ಲಿ ನಮ್ಮಂಥ ಕೈಲಾಗದ ಜನ, ಎಲ್ಲಿ ಆತನ ಗೊಡವಿಗೆ ಹೋಗಿ, ಮನೆ ಸುಡಿಸಿ, ಬೂದಿ ಮಾಡಿಕೊಂಡು ಬಯಲಿನಲ್ಲಿ ಕುಳಿತುಕೊಳ್ಳುವ ಬದಲು ಅವನಿಗೆ ಒಂದು ಓಟನ್ನು ಹಾಕಿ ಆರಿಸಿ ಕಳುಹಿಸೋಣ ಎಂದು ಹೇಳುತ್ತಾರೆ. ತಿಮ್ಮಣ್ಣ ಆತನಿಗೆ guide ಮಾಡಿ ಚುನಾವಣೆ ಪ್ರಚಾರ ಪ್ರಾರಂಭ ಆಯಿತು. ಚುನಾವಣೆ ಫಲಿತಾಂಶ ಕೂಡ ಬಂತು. ಬೊಮ್ಮಣ್ಣ ಚುನಾವಣೆಯಲ್ಲಿ ಆರಿಸಿ ಬಂದ. ಬೊಮ್ಮಣ್ಣ ಆರಿಸಿ ಬಂದ ಮೇಲೆ ಅಸೆಂಬ್ಲಿಗೆ ಬಂದ. ಮಾನ್ಯ ಕಾಗೋಡು ತಿಮ್ಮಪ್ಪನವರು ಅಧ್ಯಕ್ಷರಿದ್ದರು.

ಪ್ರಮಾಣವಚನವನ್ನು ಬೋಧನೆ ಮಾಡಿದರು. ಮರು ದಿನವೇ ಬಜೆಟ್ ಅಧಿವೇಶನ ಪ್ರಾರಂಭ ಆಯಿತು. ಬಜೆಟ್ ಅಧಿವೇಶನ ಪ್ರಾರಂಭ ಆದಮೇಲೆ ಅಸೆಂಬ್ಲಿಯಲ್ಲಿ 2-3 ದಿನ ಕುಳಿತ. ಆ ಬಜೆಟ್ ಮೇಲೆ serious ಆಗಿ ಮಾನ್ಯ ಜಯಚಂದ್ರರಂಥವರು, ಮಾನ್ಯ ರಮೇಶ್‌ಕುಮಾರ್ ರಂಥವರು, ಅಪ್ಪಾಜಿ ನಾಡಗೌಡರಂಥವರು, ಮಾನ್ಯ ಶಿವಮೂರ್ತಿ ಅಂಥವರು ಚರ್ಚೆ ಮಾಡಿದರು. ಅವನಿಗೆ ಏನೂ ತಿಳಿಯಲಿಲ್ಲ. ಒಂದು ದಿನ ಬೊಮ್ಮಣ್ಣ ಥಟ್ಟನೆ ಎಂದು ನಿಂತ. ಸಭಾಧ್ಯಕ್ಷರು ಬೋಮ್ಮಣ್ಣನ ಕಡೆಗೆ ನೋಡಿದರು. ಏಕೆಂದರೆ ಚರ್ಚೆ ನಡೆಯುತ್ತಿದೆ, ಏಕಾಏಕಿ ಎದ್ದು ನಿಂತಿದ್ದಾನೆಂದು ನೋಡಿದರು. ನೋಡಿದ ಮೇಲೆ ಅವನು ಹೇಳಿದನು, ಸ್ವಾಮಿ ನನಗೆ ತಿಳಿಯುವುದಿಲ್ಲ, ಹೊಳೆಯುವುದಿಲ್ಲ, ನಾನು ಹೊರಗಡೆ ಹೋಗುತ್ತೇನೆಂದು ಹೇಳಿ ಹೊರಗೆ ಹೋಗಿಬಿಟ್ಟನು. ಹೋದವನು, ಮರುದಿನ ಯುಗಾದಿ ಹಬ್ಬವಿತ್ತು, ಊರಿಗೆ ಹೋದನು. ಊರಿಗೆ ಹೋದ ನಂತರ, ಹೊಸದಾಗಿ ಎಂ.ಎಲ್.ಎ. ಆದ ಮೇಲೆ ಪ್ರಮಾಣವಚನ ಸ್ವೀಕಾರ ಮಾಡಿ ಬೊಮ್ಮಣ್ಣ ಬಂದಿದ್ದಾನೆ, ಬೊಮ್ಮಣ್ಣನಿಗೆ ಊರಿನಲ್ಲಿ ಎಲ್ಲರೂ ಕೇಳುವುದಕ್ಕೆ ಪ್ರಾರಂಭ ಮಾಡಿದರು. ನಮ್ಮ ಬೊಮ್ಮಾಯಿಯಂಥವರು, ಸವದಿಯಂಥವರು, ಸಿ.ಟಿ. ರವಿಯಂಥ ಒಂದಷ್ಟು ಮಂದಿ ಪ್ರಶ್ನೆ ಮಾಡಿದರು. ಏನು ಬೊಮ್ಮಣ್ಣ? ಸದನದಲ್ಲಿ ಎಲ್ಲರೂ ಏನೇನೋ ಪ್ರಶ್ನೆ ಕೇಳಿದರು, ಏನೇನೋ ಮಾತನಾಡಿದರು. ನೀನು ಬಾಯಿಯನ್ನೇ ತೆಗೆಯಲಿಲ್ಲವಲ್ಲ, ಸುಮ್ಮನೆ ಕುಳಿತಿದ್ದೀಯಲ್ಲ ಎಂದಿದ್ದಕ್ಕೆ, ಬೊಮ್ಮಣ್ಣನಿಗೆ 'ಹೌದಲ್ಲ ನಾನು ಏನೂ ಕೇಳಲಿಲ್ಲ'ವಲ್ಲವೆಂದು ತಲೆ ಕರೆದುಕೊಳ್ಳುತ್ತೇನೆ. ಅವನು ಮಾತನಾಡದೆ ಸುಮ್ಮನಾಗುತ್ತಾನೆ. ಹಬ್ಬ ಮುಗಿಸಿ ಮರುದಿವಸ ಸೋಮವಾರ ಸದನಕ್ಕೆ ಬರುತ್ತಾನೆ. ಬಂದ ನಂತರ ಕಾಗೋಡು ತಿಮ್ಮಪ್ಪನವರು ಪ್ರಶ್ನೋತ್ತರ ಪ್ರಾರಂಭ ಮಾಡಿದರು. ಎರಡು-ಮೂರು ಪ್ರಶ್ನೆಗಳಾಗಿದ್ದವು. ಬೊಮ್ಮಣ್ಣ ಥಟ್ಟನೆ ಎದ್ದು ನಿಂತು ಸ್ವಾಮಿ, ಈ ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಎಷ್ಟು? ಕರಡಿಗಳ ಸಂಖ್ಯೆ ಎಷ್ಟು? ಮತ್ತು ನರಿಗಳ ಸಂಖ್ಯೆ ಎಷ್ಟು? ಎಂದು ಕೇಳಿದ. ಕೇಳಿದ ನಂತರ ಕಾಗೋಡು ತಿಮ್ಮಪ್ಪನವರು as usual forest ಮಂತ್ರಿಗಳಿಗೆ ಹೇಳಿದರು. ಹೇ, ಅರಣ್ಯ ಮಂತ್ರಿಗಳೆ, ಬೊಮ್ಮಣ್ಣ

ಏನೋ ಪ್ರಶ್ನೆ ಕೇಳಿದ್ದಾನೆ, ಉತ್ತರ ಕೊಡಿ ಎಂದು ಹೇಳಿದರು. ಅವರು ಎದ್ದು, ಏನು ಪ್ರಶ್ನೆ? ಎಂದು ಕೇಳಿದರು. ಏಕೆಂದರೆ ನಿದ್ದೆಯೊಳಗಿಂದ ಎದ್ದರು, ಏನು ಪ್ರಶ್ನೆ? ಎಂದು ಕೇಳಿದರು. ಅಧ್ಯಕ್ಷರು ಇನ್ನೊಂದು ಬಾರಿ ಪ್ರಶ್ನೆ ಹೇಳಪ್ಪ ಎಂದರು. ಅದಕ್ಕೆ ಬೊಮ್ಮಣ್ಣ, 'ಸ್ವಾಮಿ, ಈ ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಎಷ್ಟು? ಕರಡಿಗಳ ಸಂಖ್ಯೆ ಎಷ್ಟು? ನರಿಗಳ ಸಂಖ್ಯೆ ಎಷ್ಟು? ಎಂದು ಮತ್ತೊಮ್ಮೆ ಕೇಳಿದ. ಹೀಗೆ ಕೇಳಿದ ಮೇಲೆ as usual ಉತ್ತರ, ನನ್ನ ಹತ್ತಿರ ಇಲ್ಲ, ತರಿಸಿ ಕೊಡುವುದಕ್ಕೆ 8 ದಿನಗಳ ಕಾಲಾವಕಾಶ ಬೇಕು ಎಂದು ಮಂತ್ರಿಗಳು ಹೇಳಿದ ಮೇಲೆ ಸಭಾಧ್ಯಕ್ಷರು ಹೇಳಿದರು, ಕಾಲಾವಕಾಶ ಕೊಡಬೇಕಾಗುತ್ತದೆ ಬೊಮ್ಮಣ್ಣ, ನೀನು ಥಟ್ಟನೆ ಎದ್ದು ನಿಂತು ಕೇಳಿದ್ದೀರಿ, ಅವರ ಹತ್ತಿರ ಮಾಹಿತಿ ಇರುವುದಿಲ್ಲ. ಏನು ಸ್ವಾಮಿ ಅರಣ್ಯ ಮಂತ್ರಿಗಳಿಗೆ ಹುಲಿಗಳೆಷ್ಟಿಯೆಂದು ಗೊತ್ತಿಲ್ಲ. ಕರಡಿಗಳೆಷ್ಟಿವೆಯೆಂದು ಗೊತ್ತಿಲ್ಲ, ನರಿಗಳೆಷ್ಟಿವೆಯೆಂದು ಗೊತ್ತಿಲ್ಲವೆಂದರೆ ಹೇಗೆ ಎಂದು ಬೊಮ್ಮಣ್ಣ ಕೇಳಿದ. ಅದಕ್ಕೆ ಸಭಾಧ್ಯಕ್ಷರು immediately ಈ ಮಾಹಿತಿಯನ್ನು ತರಿಸಿ ಎಂದು ಹೇಳಿದರು. ಎಲ್ಲಾ Divisional Commissioner ಗಳಿಗೆ telegraphically ಮಾಹಿತಿ ಕಳುಹಿಸಿ ಎಂದು ಪತ್ರ ಹೋಯಿತು. ಸದನ ನಡೆಯುತ್ತಿದೆ, ಲೇಟ್ ಮಾಡಿ, ಪತ್ರಗಳನ್ನು DC, AC, ತಹಸೀಲ್ದಾರ್, ವಿಲೇಜ್ ಅಕೌಂಟೆಂಟ್‌ಗಳಿಗೆ ಬರೆದು ಅವರಿಂದ ಉತ್ತರ ಬರುವುದು ತಡವಾಗುತ್ತದೆಂದು, Divisional Commissioner ನೇರವಾಗಿ ತಹಸೀಲ್ದಾರ್‌ಗೆ ಪತ್ರ ಬರೆದರು. 'Immediate' ಎಂದು ಹೇಳಿ ಸೀಲ್ ಹೊಡೆದು telegram ಕಳುಹಿಸಿದರು. ಕಳುಹಿಸಿ ಕೊಟ್ಟ ನಂ ತರ ಆ ಊರಿನಲ್ಲಿ ಒಬ್ಬ ಶಾನುಭೋಗನಿರುತ್ತಾನೆ. ಈ ಊರಿನಲ್ಲಿ ಕರಡಿ, ಹುಲಿ ಮತ್ತು ನರಿಗಳೆಷ್ಟಿವೆ ಎನ್ನುವ ಪ್ರಶ್ನೆ ಶಾನುಭೋಗನಿಗೆ ಹೋಯಿತು. ಅವನು ಬೆಳಿಗ್ಗೆಯಿಂದ 2–3 ಪ್ಯಾಕೆಟ್ ಸಿಗರೇಟ್ ಸೇದಿ, 8–10 ಬಾರಿ ಚಹಾ ಕುಡಿದು ತಲೆ ಕೆಡಿಸಿಕೊಂಡು ಕುಳಿತಿದ್ದನು. ಅಷ್ಟೊತ್ತಿಗೆ ಅವನ ಹತ್ತಿರ ತಿಮ್ಮ ಹೋದನು. ಏನು ಶಾನುಭೋಗರೆ ಇಷ್ಟೊಂದು ಸಿಗರೇಟ್ ಸೇದು ಬಗೆದಿದ್ದೀರಿ. ನಿಮ್ಮ ಕೋಣೆಯಲೆಲ್ಲಾ ಹೊಗೆ ತುಂಬಿದೆ, ಏನೋ ಗಹನವಾದ ವಿಚಾರದಲ್ಲಿದ್ದೀರಿ ಎಂದನು. ಆಗ ಶಾನುಭೋಗ ಹೇಳುತ್ತಾನೆ, ಅಸೆಂಬ್ಲಿಯಲ್ಲಿ

ನಮ್ಮ ಎಂ.ಎಲ್.ಎ. ಯವರಾದ ಬೊಮ್ಮಣ್ಣನವರು ಪ್ರಶ್ನೆ ಕೇಳಿದ್ದಾರೆ. ಏನೆಂದರೆ ಈ ರಾಜ್ಯದಲ್ಲಿ ಹುಲಿಯೆಷ್ಟು, ಕರಡಿಯೆಷ್ಟು, ನರಿಯೆಷ್ಟು ಎಂದು ಕೇಳಿದ್ದಾರೆ ಎಂದರು. ಅದೇನು ದೊಡ್ಡ ವಿಷಯವಿದೆ, ಅದಕ್ಕೆ ಏಕೆ ಇಷ್ಟೊಂದು ತಲೆ ಕೆಡಿಸಿಕೊಂಡು ಕುಳಿತಿದ್ದೀರಿ. ಬೆಳಗ್ಗೆಯೇ ನನ್ನನ್ನು ಕರೆದು ಒಂದು ಕಪ್ ಚಹಾ ಕುಡಿಸಿದ್ದರೆ ನಾನೇ ಹೇಳುತ್ತಿದ್ದೆನಲ್ಲ ಎಂದನು. ಇಲ್ಲ ಮಾರಾಯಾ, ನಾನು ಅರಣ್ಯಕ್ಕೆ ಹೋಗಿ ಎಣಿಸಿಕೊಂಡು ಬರಲೋ ಅಥವಾ ಪಾಲೆಕಾರರನ್ನು ಕಳುಹಿಸಿಲೇ ಎಂದು ವಿಚಾರ ಮಾಡುವುದಕ್ಕೆ ಹತ್ತಿದ್ದೇನೆ, ನೀನು ಏನು ಸುಲಭವಾಗಿ ಹೇಳಿಬಿಡುತ್ತಿದ್ದೀಯಲ್ಲ ಎಂದನು. ಬರೆದುಕೋ ನಾನು ಹೇಳುತ್ತೇನೆಂದು ತಿಮ್ಮ ಹೇಳಿದ. ಹೇಳು ಹಾಗಾದರೆ ಎಂದ, ಒಂದು ಹುಲಿ, ಒಂದು ಕರಡಿ, ಒಂದು ನರಿ ಎಂದನು. ಈ ಉತ್ತರವನ್ನು ಹೇಗೆ ಹೇಳುತ್ತೀಯಾ ನೀನು ಎಂದನು. ಈ ಊರಿನಲ್ಲಿ ಅಷ್ಟು ಗೊತ್ತಿಲ್ಲವೇನು ನಿನಗೆ ಎಂದು ತಿಮ್ಮ ಹೇಳಿದನು. ಹಾಗಾದರೆ ಹೇಳು ಎಂದು ಶಾನುಭೋಗ ಹೇಳಿದ. ಹುಲಿ ಎಂದರೆ ಬೊಮ್ಮಣ್ಣ ಎಂ.ಎಲ್.ಎ., ಕರಡಿ ಎಂದರೆ ನಮ್ಮ ಊರಿನ ಪಟೇಲ್ ಗೌಡ. ಮತ್ತು ಮೂರನೆಯದು ಯಾವುದು ಎಂದು ಕೇಳಿದ್ದಕ್ಕೆ ತಿಮ್ಮ ನಗುವುದಕ್ಕೆ ಪ್ರಾರಂಭ ಮಾಡಿದ. ಅಷ್ಟು ನಿನಗೆ ಗೊತ್ತಾಗಲಿಲ್ಲವೇನು, ನಿನಗಿಂತಲೂ ಬೇರೆ ನರಿ ಬೇಕೇ ಎಂದು ಹೇಳಿದ. ಎಂದರೆ, ಆ ಶಾನುಭೋಗನಿಗೆ ನರಿ ಎಂದನು. ಇವತ್ತು ನಾನು ಏಕೆ ಇದನ್ನು ಹೇಳಿದೆನೆಂದರೆ, ಬಜೆಟ್ ಅಧಿವೇಶನ ನಡೆಯುತ್ತಿದೆ, 32 ಜನ ಮಂತ್ರಿಗಳಿದ್ದಾರೆ, ಅವರೆಲ್ಲರೂ ಇರಬೇಕಲ್ಲವೇ, ಇವರಿಗೆ ಸಂಬಂಧ ಇದೆಯೋ ಅಥವಾ ಇಲ್ಲವೋ?

ಉಪಾಧ್ಯಕ್ಷರು:- ಇದ್ದಾರಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ಏನೂ ಸಂಬಂಧ ಇಲ್ಲ ಎನ್ನುವಂತೆ ಇದ್ದಾರೆ.

ಶ್ರೀ ಪಿ.ಎಂ. ಅಶೋಕ ಪಟ್ಟಣ:- ಸ್ವಾಮಿ, ಕೌನ್ಸಿಲ್‌ನಲ್ಲಿ ಕೆಲವರಿದ್ದಾರೆ, ಇಲ್ಲಿ ಕೆಲವರಿದ್ದಾರೆ ಸಂಬಂಧಪಟ್ಟ ಮಂತ್ರಿಗಳು answer ಮಾಡುವುದಕ್ಕೆ

ready ಇದ್ದಾರೆ. ನೀವು ನರಿ, ಕರಡಿ ಎಂದು ಅರಣ್ಯ ಮಂತ್ರಿಗಳಿಗೆ ಕೇಳುವ ಬದಲು ಆನೆಗಳೆಷ್ಟಿವೆ ಎಂದು ಕೇಳಿದ್ದರೆ ಹೇಳಿಬಿಡುತ್ತಿದ್ದರು. ನರಿ, ಕರಡಿ ಬದಲು ಆನೆಗಳೆಷ್ಟಿವೆ ಎಂದು ಕೇಳಿದರೆ Forest Minister ಉತ್ತರ ಹೇಳಿಬಿಡುತ್ತಾರೆ.

ಉಪಾಧ್ಯಕ್ಷರು:– ನೀವು ಬಜೆಟ್ ಮೇಲೆ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, 2015–16ನೇ ಸಾಲಿನ ಬಜೆಟ್‌ನ ಮೇಲೆ ಮಾತನಾಡುವುದಕ್ಕಿಂತ ಮುಂಚೆ ಒಂದಿಷ್ಟು ಅಂಕಿ–ಸಂಖ್ಯೆಗಳಿಗೆ ಹೋಗುತ್ತೇನೆ. 2008–09ರಲ್ಲಿ 54,450 ಕೋಟಿ ರೂಪಾಯಿಗಳ ಬಜೆಟ್ ಮಂಡನೆಯಾಗಿದೆ. 2009–10ರಲ್ಲಿ 70,376 ಕೋಟಿ ರೂಪಾಯಿಗಳ ಬಜೆಟ್, 2010–11ರಲ್ಲಿ 76,834 ಕೋಟಿ ರೂಪಾಯಿ, 2011–12ರಲ್ಲಿ 95,155 ಕೋಟಿ ರೂಪಾಯಿ, 2012–13ರಲ್ಲಿ 1 ಲಕ್ಷ 15 ಸಾವಿರ ಕೋಟಿ ರೂಪಾಯಿ, 2013–14ರಲ್ಲಿ 1 ಲಕ್ಷ 22 ಸಾವಿರ ಕೋಟಿ ರೂಪಾಯಿ ಮತ್ತು 2014–15ನೇ ಸಾಲಿನಲ್ಲಿ 1 ಲಕ್ಷ 37 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಮಂಡನೆಯಾಗಿದೆ. ನಾನು round figure ಹೇಳುತ್ತಿದ್ದೇನೆ.

Expenditure – wise ತೆಗೆದುಕೊಂಡರೆ 2008–09ರಲ್ಲಿ 83%, 2009–10ರಲ್ಲಿ 74%, 2010–11ರಲ್ಲಿ 79%, 2011–12ರಲ್ಲಿ 77%, 2012–13ರಲ್ಲಿ 72%, 2013–14ರಲ್ಲಿ 80% ಮತ್ತು ಈ ವರ್ಷ 2014–15ರಲ್ಲಿ 64% ಆಗಿದೆ.

ಮಾನ್ಯ ಉಪಾಧ್ಯಕ್ಷರೆ, ಈ ಅಂಕಿ ಸಂಖ್ಯೆಗಳನ್ನು ನೋಡಿದಾಗ ನಾವು ಬರಿ ಬಜೆಟ್ ಮಂಡನೆ ಮಾಡಿದ್ದೇವೆಂದು ಬೆನ್ನು ತಟ್ಟಿಕೊಳ್ಳುವುದಲ್ಲ. ನಾವು ಏನು ಮಾಡಬೇಕಾಗಿತ್ತು, 100% expenditure ಮಾಡಿ, ನಾವು plan ನಲ್ಲಿ ಖರ್ಚು ಮಾಡುವಂಥ ಪ್ರತಿ ಒಂದು ರೂಪಾಯಿಗೂ asset create ಆಗುವಂತೆ ನೋಡಿಕೊಂಡು, ರಾಜ್ಯವನ್ನು ಅಭಿವೃದ್ಧಿ ಪಥದತ್ತ ಒಯ್ಯಬೇಕಾಗಿತ್ತು. ಆದರೆ

ಆ ರೀತಿ ಆಗಲಿಲ್ಲ. ಈ ಅಂಕಿ ಸಂಖ್ಯೆಗಳನ್ನು ನೋಡಿದಾಗ ಎಲ್ಲೋ ಒಂದು ಕಡೆ ಆಡಳಿತದಲ್ಲಿ ವೈಫಲ್ಯ ಕಂಡು ಬರುತ್ತದೆ. ಈ ಸದನದ 224 ಜನ ಸೇರಿ ಬಜೆಟ್‌ಗೆ ಅನುಮೋದನೆ ಮಾಡಿಕೊಟ್ಟ ಮೇಲೆ, ಅದನ್ನು ಅನುಷ್ಠಾನ ಮಾಡುವುದಕ್ಕೆ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳ ಅವಶ್ಯಕತೆಯಿರುತ್ತದೆ. ಇದನ್ನು ನೋಡಿದಾಗ ಎಲ್ಲೋ ಒಂದು ಕಡೆ ದಕ್ಷತೆ ಕೊರತೆ ಕಾಣುತ್ತಿದೆ, ಪ್ರಾಮಾಣಿಕತೆ ಕೊರತೆ ಕಾಣುತ್ತಿದೆ. ಅದಕ್ಕಾಗಿ ನಾನು ಒಂದು ಸಣ್ಣ ಜೋಕ್ ಹೇಳಿ ಮುಂದೆ ಹೋಗುತ್ತೇನೆ. ನಮ್ಮ ಊರಿನ ಕಡೆ ಉತ್ತರ ಕರ್ನಾಟಕದಲ್ಲಿ ದೇವರ ಜಾತ್ರೆ ಎಂದು ಮಾಡುತ್ತೇವೆ. ಈ ಬಗ್ಗೆ ನಾಡಗೌಡರಿಗೆ ಗೊತ್ತಿದೆ, ಏಕೆಂದರೆ ಅವರೆಲ್ಲಾ ಧಣಿಗಳು. ಊರಿನಲ್ಲಿ 108 ಜಾತಿಗಳು, ಜಾತಿಗೊಂದು ದೇವರು, ಬಹಳ ಪ್ರಮುಖವಾಗಿ ದೀಪಾವಳಿ ಮತ್ತು ಯುಗಾದಿ ಸಂದರ್ಭದಲ್ಲಿ ಬಹಳ ದೊಡ್ಡ ದೊಡ್ಡ ದೇವರ ಜಾತ್ರೆ ಮಾಡುತ್ತಾರೆ. ದೀಪಾವಳಿ ಸಂದರ್ಭದಲ್ಲಿ ಹನುಮಂತ ದೇವರ ಜಾತ್ರೆ ಮಾಡುತ್ತೇವೆ. ಆಗ ಕಾರ್ತಿ ಎಂದು ಕರೆಯುತ್ತೇವೆ. ಊರಿನಲ್ಲಿ ಹುಡುಗರು ನಾಟಕ ಕಲಿಯುತ್ತಾರೆ. ಊರಿನಲ್ಲಿ ಹುಡುಗರೆಲ್ಲಾ ಸೇರಿ 2–3 ದಿನ ಹಳ್ಳಿಯಲ್ಲಿ ನಾಟಕ ಮಾಡುತ್ತಾರೆ. ನಾಟಕ ಮಾಡುವ ಸಂದರ್ಭದಲ್ಲಿ ಹೆಣ್ಣು ಪಾತ್ರ ಮಾಡುವುದಕ್ಕೆ ನಮ್ಮಲ್ಲಿ ಹೆಣ್ಣುಮಕ್ಕಳು ಸಿಗುವುದಿಲ್ಲ. ಅದಕ್ಕೇನು ಮಾಡುತ್ತಾರೆಂದರೆ ಬೇರೆ ಕಡೆಯಿಂದ ಕರೆದುಕೊಂಡು ಬರುತ್ತಾರೆ. ನಮ್ಮ ಜಿಲ್ಲೆಯ ಬಾದಾಮಿ ತಾಲ್ಲೂಕಿನಲ್ಲಿ ಹೆಣ್ಣುಮಕ್ಕಳು ಕಲಾವಿದರ ಸಂಖ್ಯೆ ಜಾಸ್ತಿಯಿದೆ. ಅವರು ನಾಟಕ ಮಾಡುವುದಕ್ಕೆ ಬರುತ್ತಾರೆ. ಅದಕ್ಕೆ ನಮ್ಮ ಒಬ್ಬ ಅಜ್ಜ ಇದ್ದ, ಅವನು ಏನು ಹೇಳುತ್ತಿದ್ದನೆಂದರೆ, ಏ ತಮ್ಮಾ, ಏ ಹುಡುಗರೆ, ನೀವು . . . . .

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಸನ್ಮಾನ್ಯ ಉಪಾಧ್ಯಕ್ಷರೆ, ಇದು ಊಟಕ್ಕಿಂತ ಉಪ್ಪಿನಕಾಯಿಯೇ ಜಾಸ್ತಿಯಾಗಿ ಹೋಯಿತು.

ಶ್ರೀ ಗೋವಿಂದ ಎಂ. ಕಾರಜೋಳ:– ಇಲ್ಲಿ ಕೇಳಿ ಸ್ವಲ್ಪ, ನೀವು ಕೇಳಿದ ಮೇಲೆ ಹೇಳಿ. ಅವನು ಏನು ಹೇಳುತ್ತಿದ್ದನೆಂದರೆ, ನಾಟಕದಲ್ಲಿ ಹೆಣ್ಣು ಚೆಂದವಿದ್ದರೆ ಊರಿನಲ್ಲಿ ಕಲಾಭಿಮಾನಿಗಳ ಸಂಖ್ಯೆ ಹೆಚ್ಚಾಗುತ್ತದೆಂದು ಹೇಳುತ್ತಿದ್ದ. ನಾನು ಏಕೆ ಈ ಉದಾಹರಣೆಯನ್ನು ಹೇಳುತ್ತಿದ್ದೇನೆಂದರೆ, ನೀವು ದಕ್ಷವಾದಂಥ, ಪ್ರಾಮಾಣಿಕವಾದಂಥ ಅಧಿಕಾರಿಗಳನ್ನು ಆಯಕಟ್ಟಿನ ಜಾಗದಲ್ಲಿ ಕೂಡಿಸಿ, ಹೊಸ ಹೊಸ ಕಾರ್ಯಕ್ರಮಗಳನ್ನು ಏನು ಘೋಷಣೆ ಮಾಡಿದ್ದೀರಿ, ಅದನ್ನು ಅನುಷ್ಠಾನಕ್ಕೆ ತಂದು ಸರ್ಕಾರದ ಜನಪ್ರಿಯತೆ ಹೆಚ್ಚಾಗಬೇಕು. ಜನಪ್ರಿಯತೆ ಹೆಚ್ಚಾಗಬೇಕಾದರೆ, Development department ಗಳಲ್ಲಿ ಮತ್ತು ಆಯಕಟ್ಟಿನ ಜಾಗಗಳಲ್ಲಿ ಸಮರ್ಪಕವಾಗಿ ನಿಭಾಯಿಸುವಂಥವರ ಕೈಯಲ್ಲಿ ಅಧಿಕಾರ ಕೊಡಬೇಕು, ಅದಕ್ಕಾಗಿ ನಾಟಕದಲ್ಲಿ ಹೆಣ್ಣು ಚೆಂದಿದ್ದರೆ, ಊರಿನಲ್ಲಿ ಕಲಾಭಿಮಾನಿಗಳ ಸಂಖ್ಯೆ ಹೆಚ್ಚಾಗುತ್ತದೆ ಎಂದು ನಾನು ಉದಾಹರಣೆ ಹೇಳಿದೆ. ನಿಮ್ಮ ಸರ್ಕಾರದ ನಾಟಕ ಚೆಂದಾಗಬೇಕಾದರೆ, ಒಳ್ಳೊಳ್ಳೆಯ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಬಹಳ ಮುಖ್ಯವಾದ ಇಲಾಖೆ, ಕೃಷಿ ಇಲಾಖೆ. 2014–15ನೇ ಸಾಲಿನಲ್ಲಿ ಯೋಜನಾ ವೆಚ್ಚ 52% ಆಗಿದೆ. ಯಾವ ಇಲಾಖೆಯಿಂದ ನಾವು ಬದುಕುತ್ತಿದ್ದೇವೆ, ದೇಶದ ಬೆನ್ನೆಲುಬು ರೈತ ಎಂದು ಹೇಳುತ್ತಿದ್ದೇವೆ, ಆ ರೈತನ ಬೆನ್ನೆಲುಬನ್ನು ಮುರಿಯುವುದು ನಿಮ್ಮ ಬಜೆಟ್ ಅನುಷ್ಠಾನ ನೋಡಿದಾಗ ಗೊತ್ತಾಗುತ್ತದೆ. ಪಶು ಸಂಗೋಪನೆ ಇಲಾಖೆ, ರೈತನಿಗೆ ಬೇಕಾದ ಪ್ರಾಣಿ ಸಂಪತ್ತುಗಳಾದ ಎತ್ತು, ಆಕಳು, ಎಮ್ಮೆ, ಕುರಿ, ಆಡು ಇಂಥವನ್ನು ಹೆಚ್ಚು ಮಾಡುವುದಾಗಬೇಕು. ಇದರಲ್ಲಿ expenditure ಇಲ್ಲ, ಸರಾಸರಿ ಕೇವಲ 57% ಖರ್ಚು ಆಗಿದೆ. ಮೂಲಭೂತ ಸೌಕರ್ಯ ಇಲಾಖೆಯಲ್ಲಿ 50% ವೆಚ್ಚ ಆಗಿದೆ. RDPR ಬಹಳ ಮಹತ್ವದ ಇಲಾಖೆ, ಮಹಾತ್ಮ ಗಾಂಧಿಜಿಯವರು ಗ್ರಾಮ ಸ್ವರಾಜ್ಯವಾಗಬೇಕು, ರಾಮರಾಜ್ಯವಾಗಬೇಕೆಂದೇನು ಹೇಳಿದರು, ಆ ಇಲಾಖೆಯಲ್ಲಿ ಇವತ್ತಿನ ತನಕ ವೆಚ್ಚ 72% ಆಗಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ, ನರೇಂದ್ರ ಸ್ವಾಮಿಯವರೆ, ನೀವೇ ಅಧ್ಯಕ್ಷರು, ಸರ್ವರಿಗೂ ಸಮಪಾಲು, ಸಮ ಬಾಳು, 62% ವೆಚ್ಚ ಆಗಿದೆ. ಇನ್ನು PWD ಇಲಾಖೆ

ಬಹಳ ಮಹತ್ವವಾದ ಇಲಾಖೆ, ಒಂದು ರಾಜ್ಯ ಅಭಿವೃದ್ಧಿಯಾಗಬೇಕಾದರೆ, ಸಂಪರ್ಕಕ್ಕೆ ರಸ್ತೆಗಳು ಬಹಳ ಮುಖ್ಯ. Communication ಬೇಕಾಗುತ್ತದೆ. ಇಲ್ಲಿ 2014–15ನೇ ಸಾಲಿನದು ಮುಗಿದು 2015–16ಕ್ಕೆ ಹೋಗುತ್ತಿದ್ದೇವೆ, ಇವತ್ತಿನವರೆವಿಗೂ Action Plan ಹೊರಗೆ ಬರಲಿಲ್ಲ, ನಿಮ್ಮ ಕ್ರಿಯಾ ಯೋಜನೆಯೇ ಆಗಲಿಲ್ಲ, ಇದು ನಿಮ್ಮ ಆಡಳಿತ. ಒಂದು ವರ್ಷದ್ದು ಕ್ರಿಯಾ ಯೋಜನೆ ಇಲ್ಲದೆ, 7,000 ಕೋಟಿ ನೀವು ಖರ್ಚು ಮಾಡುತ್ತೀರೆಂದರೆ, ನಾವು ಏನು ಹೇಳಬೇಕೋ ಗೊತ್ತಿಲ್ಲ. ಅಪೆಂಡಿಕ್ಸ್ E ಹೊರಗೆ ಬರಲೇ ಇಲ್ಲ, ಕ್ರಿಯಾ ಯೋಜನೆ ಬರಲೇ ಇಲ್ಲ. Water Resources Department ಸನ್ಮಾನ್ಯ ಮಂತ್ರಿಗಳು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ, 50 ವರ್ಷಗಳ ಬರಗಾಲದ ಹಣೆಪಟ್ಟಿಯಿರುವ ಬಿಜಾಪುರ ಜಿಲ್ಲೆಯಿಂದ ಬಂದವರು, ಇವರದು 71%. ವೆಚ್ಚ ಆಗಿದೆ. ಅಂಕಿ ಸಂಖ್ಯೆಗಳನ್ನು ಇಷ್ಟಕ್ಕೆ ಬಿಡುತ್ತೇನೆ, ಏಕೆಂದರೆ ಎಲ್ಲಾ ಇಲಾಖೆಯದು ಬೇಡ. ಕಳೆದ ವರ್ಷದ ಬಜೆಟ್ ಅನ್ನು ನೋಡಿದಾಗ, ಇನ್ನು ಕೇವಲ 8 ದಿವಸ ಮಾತ್ರ ಬಾಕಿ ಇದೆ. ಈಗಾಗಲೇ ಎಲ್ಲಾ ಇಲಾಖೆಗಳಲ್ಲಿ 10% ಬಜೆಟ್ ಅನ್ನು ಕಟ್ ಮಾಡಿದ್ದಾರೆ. ಕಳೆದ ವರ್ಷ ಮಂಡಿಸಿರುವುದರಲ್ಲಿ 10% ಈಗಾಗಲೇ ಕಟ್ ಮಾಡಿದ್ದಾರೆ. ದುಡ್ಡಿಲ್ಲದೆ ಬಜೆಟ್ ಮಂಡಿಸುವ ಕೆಲಸವಾಗಿದೆ. ಇವರು ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರಲ್ಲಿ 68000 ಕೋಟಿ ಗುರಿ ರೂ.ಗಳ ಗುರಿ ಇಟ್ಟುಕೊಂಡಿದ್ದರು, ಕೇವಲ 60,000 ಕೋಟಿ ರೂ.ಗಳು ಇದುವರೆವಿಗೆ ಸಂಗ್ರಹವಾಗಿದೆ. ಅದಕ್ಕೆ ನಮ್ಮ ಊರಿನ ಕಡೆ ಹೇಳುತ್ತಾರೆ, ನಮ್ಮ ನಾಡಗೌಡರ ಮನೆಯಲ್ಲಿ 50–60 ಎಮ್ಮೆಗಳಿವೆ. ಅದರ ನೆರೆಮನೆಯ ಒಬ್ಬ ಬಹಳ ಆಸೆ ಪಟ್ಟನಂತೆ. ಆತ ಮೀಸೆ ಬಿಟ್ಟು ಬಹಳ ಪೈಲ್ವಾನ್ ಇದ್ದ, ಬಹಳ ಆಳಿದ್ದ. ಗೌಡರ ಮನೆಯಲ್ಲಿ ಎರಡು ಎಮ್ಮೆ ಈಯಲಿಕ್ಕೆ ಹತ್ತಿದೆ, ಗೌಡರು ನಾಳೆ ನಮಗೆ ಮಜ್ಜಿಗೆ ಕೊಡುತ್ತಾರೆ. ಹಜಾಮರನ್ನು ಕರೆದು ಬೇಗನೆ ನನ್ನ ಮೀಸೆ ಬೋಳಿಸು ಎಂದು ಹೇಳಿದ. ಈಯುವುದೆಂದರೆ ನಿಮ್ಮ ಭಾಷೆಯಲ್ಲಿ ಏನು ಹೇಳುತ್ತಾರೋ ಗೊತ್ತಿಲ್ಲ, ಕರು ಹಾಕುವುದಕ್ಕೆ ಈಯುವುದೆನ್ನುತ್ತಾರೆ. ಎಮ್ಮೆ ಈಯುತ್ತದೆ, ನಾಳೆ ಮುಂಜಾನೆ ನನಗೆ ಕುಡಿಯುವುದಕ್ಕೆ ಮಜ್ಜಿಗೆ ಕೊಡುತ್ತಾರೆ, ಅದಕ್ಕೆ ಬೇಗನೆ ಮೀಸೆ

ಬೋಳಿಸು ಎಂದು ಹೇಳಿದ. ಮೀಸೆ ಬೋಳಿಸಿದ, ಗೌಡರ ಮನೆಯಿಂದ ಮಜ್ಜಿಗೆಯನ್ನೂ ಕೊಡಲಿಲ್ಲ, ಮೊಸರು ಕೊಡಲಿಲ್ಲ, ಮೀಸೆ ಕಳೆದುಕೊಂಡಿದ್ದು ಅಷ್ಟೇ ಆಯಿತು. ಹಾಗೆ ಆಗಿದೆ resources mobilization ಕತೆ. ಅಲ್ಲಿ, ಇಲ್ಲಿ ಬರುತ್ತದೆಂದು ಹೇಳಿ, ದೊಡ್ಡದೊಂದು ಬಜೆಟ್ ಮಂಡಿಸಿದ್ದೇವೆಂದು, ಇಡೀ ದೇಶದಲ್ಲೇ ದೊಡ್ಡ ಗಾತ್ರದ್ದು ಎಂದು ಈ ರೀತಿ ತೋರಿಸಿ, ಏನೂ ಬಾರದೆ ಮೀಸೆ ಬೋಳಿಸಿಕೊಂಡಂಥ ಪರಿಸ್ಥಿತಿ ಆಗಿದೆ. ಆನೇಕ ಆದ್ಯತಾ ವಲಯಗಳಿಗೆ ಕೊಟ್ಟಿದ್ದೀರಿ, ಎಲ್ಲಕ್ಕೂ ಆ ಭಾಗ್ಯ, ಈ ಭಾಗ್ಯವೆಂದು ಹೇಳಿದ್ದೀರಿ. ಇನ್ನೊಂದು ಮಹತ್ವವಾದುದು, ನಮ್ಮ ಉಮಾಶ್ರೀಯವರು ಇಲ್ಲೇ ಇದ್ದಾರೆ, ಕಳೆದ ವರ್ಷ ಕನ್ನಡ ಸಂಸ್ಕೃತಿ ಇಲಾಖೆಯದು 47% expenditure ಆಗಿದೆ. ಈ ಅಂಕಿ ಅಂಶ ಸರ್ಕಾರದ ನಿಮ್ಮ ಅಧಿಕಾರಿಗಳೇ ಕೊಟ್ಟಿದ್ದು, ನಾನೇನು ನಮ್ಮ ಮನೆಯಿಂದ ಪ್ರಿಂಟ್ ಮಾಡಿಕೊಂಡು ಬರುವುದಿಲ್ಲ. ಉಮಾಶ್ರೀ ಒಬ್ಬರು ಕಲಾವಿದರು, ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಕಲಾವಿದರು ಆಗಿದ್ದರಿಂದಲೇ ನಮ್ಮ ಜಿಲ್ಲೆಯಲ್ಲಿ ಆರಿಸಿ ಬಂದರು. ಅಲ್ಲಿ ನೇಕಾರರ ಸಂಖ್ಯೆ ಬಹಳ ಇದೆ, ಹೇಗೆ SC/ST ಗೆ reserve ಮಾಡಿದ್ದಾರೆ, ಹಾಗೆ ನೇಕಾರರಿಗೆ constituency reserve ಮಾಡುವಷ್ಟು ನೇಕಾರರ ಸಂಖ್ಯೆ ಅಲ್ಲಿದೆ, ಅವರ ಸಲುವಾಗಿ ಇವರೇನಾದರೂ ಹೊಸದಾಗಿ ಮಾಡುತ್ತಾರೆಂದು ತಿಳುದುಕೊಂಡಿದ್ದೆ, ಏನೂ ಇಲ್ಲ. ಜವಳಿ ಇಲಾಖೆ ಮೇಲೆ ಮಾತನಾಡುವಾಗ ಅದರ ವಿವರಕ್ಕೆ ಬರುತ್ತೇನೆ.

ಇನ್ನು ಜವಳಿ ಇಲಾಖೆಗೆ ಪ್ರತ್ಯೇಕ ಬಜೆಟ್ ಕೊಟ್ಟಿಲ್ಲ, ಕೈಗಾರಿಕೆ ಇಲಾಖೆಯಲ್ಲೇ ಸೇರಿಸಿದ್ದಾರೆ, ನಾನು ಟೋಟಲ್ ಮಾಡಿದ ಪ್ರಕಾರ, ಬಹಳ ಕಡಿಮೆಯಾಗಿದೆ, ಎಲ್ಲಾ ಟೋಟಲ್ ಮಾಡಿದಾಗ 130-140 ಕೋಟಿ ರೂ.ಗಳು ಅಷ್ಟೇ ಆಗುತ್ತದೆ. ನಮ್ಮ ಉಮಾಶ್ರೀಯವರು ನಮ್ಮ ಜಿಲ್ಲೆಯಿಂದ ಆರಿಸಿ ಬಂದಿದ್ದಾರೆ. ಒಬ್ಬ ಮಹಿಳೆ, ಬೆಂಗಳೂರಿನಿಂದ ಬಂದು, ಅಲ್ಲಿ ನಿಂತು, ಆ ಜನರ ಮನಸ್ಸನ್ನು ಗೆದ್ದು ಆರಿಸಿ ಬಂದಿರುವುದು ಬಹಳ ಹೆಮ್ಮೆಯ ವಿಚಾರ. ಅವರಿಂದ ನಾನೇನು ನಿರೀಕ್ಷೆ ಮಾಡುತ್ತಿದ್ದೆ ಎಂದರೆ; ನಮ್ಮ ಇಳಕಲ್ ಸೀರೆಗಳಿಗೆ ಬಹಳ ಪ್ರಸಿದ್ಧಿ, ಗುಳೇದಗುಡ್ಡದಲ್ಲಿ ಕುಬಸದ ಕಣ ಬಹಳ ಪ್ರಸಿದ್ಧ.

ಕುಬಸವೆಂದರೆ ಮಂಗಳೂರಿನವರಿಗೆ ಗೊತ್ತಾಗುತ್ತದೆಯಲ್ಲವೇ? ಕುಬಸದ ಕಣ ಬಹಳ ಪ್ರಸಿದ್ಧ. ಚಿಂತಾಮಣಿ, ಕೊಳ್ಳೇಗಾಲ, ಮೊಳಕಾಲ್ಮೂರು, ಇಳಕಲ್, ಉಡುಪಿ, ಗುಳೇದಗುಡ್ಡದ ಕಣಗಳು ಸೇರಿ ಈ ವರ್ಷಕ್ಕೆ ಎಷ್ಟು ಬಜೆಟ್ ಕೊಟ್ಟಿದ್ದಾರೆಂದರೆ, 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನೇಕಾರರು 50 ಲಕ್ಷ ಜನರಿರಬಹುದು, ಅವರ ಅಭಿವೃದ್ಧಿಗೆ ಎಷ್ಟು ಕೊಟ್ಟಂತಾಯಿತು? ಒಂದು ವರ್ಷಕ್ಕೆ Per head ₹ 4 ಕೊಟ್ಟಂತಾಯಿತು. ನಾನು ಹೇಳುವುದೇನೆಂದರೆ, ಈ ದೇಶವೇ ಮೆಚ್ಚುವಂಥ ಸೀರೆಗಳನ್ನು ಇಳಕಲ್‌ನಲ್ಲಿ ಉತ್ಪಾದನೆ ಮಾಡುತ್ತಾರೆ. ಕಕ್ಕಿಪರಾಸ್ ರೇಷ್ಮೆ ಸೀರೆ, ಗೋಮಿ ಬಾರ್ಡರ್ ರೇಷ್ಮೆ ಸೀರೆ, ಗೋಮಿ ಚಮಕಾ ಸೀರೆ, ರಾಗಾವಳಿ ರೇಷ್ಮೆ ಸೀರೆ–ಅವರು ಆರಿಸಿ ಬಂದಾಗ ಉಮಾಶ್ರೀ ಅವರಿಗೆ ಉಡಿಸಿದ್ದರು, ಕೊಂಡಿ ರೇಷ್ಮೆ ಸೀರೆ, ಮಡಿ ಸೀರೆ, ಮಡಿ ಸೀರೆ ಎಂದರೆ ಪೂಜೆ ಮಾಡುವಾಗ ಮತ್ತು ಲಗ್ನದಲ್ಲಿ ಅಕ್ಷತೆ ಹಾಕುವ ಸಂದರ್ಭದಲ್ಲಿ ಉಪಯೋಗಿಸುತ್ತಾರೆ. ಕರಿ ಚಂದ್ರಕಾಳ ಸೀರೆ, ಕೆಂಪಗಿನ ಹೆಣ್ಣು ಮಕ್ಕಳು ಈ ಸೀರೆಯನ್ನು ಉಟ್ಟರೆ ನಮ್ಮ ಕಡೆಯಲ್ಲಿ ಸಾಕ್ಷಾತ್ ಕೊಲ್ಲಾಪುರದ ಲಕ್ಷ್ಮಿ ಕಂಡಂತೆ ಕಾಣುತ್ತಾರೆ, ಅದು ಬಹಳ ಅದ್ಭುತವಾದ ಸೀರೆ. ಕ್ಯಾದಿಗೆ ಬಾರ್ಡರ್ ಸೀರೆ, ಎಳ್ಳು ಹೂವು ಕಡ್ಡಿ ಸೀರೆ, ಪುಟಾಣಿ ಡಿಸೈನ್ ಸೀರೆ, ಅಂದರೆ ಪುಟಾಣಿ ತರವೇ ಡಿಸೈನ್ ಮಾಡಿರುತ್ತಾರೆ. ಮಧುಕುಡಿ ಡಿಸೈನ್ ಸೀರೆ, ಶರ್ಟಿಂಗ್ ವೆರೈಟಿ ಸೀರೆ, ಇದು ಹೊಸದಾಗಿ ಬಂದಿದೆ. . . .

ಉಪಾಧ್ಯಕ್ಷರು:– ಈ ಡಿಟೇಲ್ಸ್ ಎಲ್ಲಾ ಹೇಗೆ ಕಲೆಕ್ಟ್ ಮಾಡಿದಿರಿ? ಡಿಟೇಲ್ಸ್ ಎಲ್ಲ ಬಹಳ ಚೆನ್ನಾಗಿ ಕಲೆಕ್ಟ್ ಮಾಡಿದ್ದೀರಿ.

ಶ್ರೀ ಲಕ್ಷ್ಮಣ ಸವದಿ:– ಇವರ ಸ್ನೇಹಿತರೊಬ್ಬರು ಸೀರೆ ಅಂಗಡಿ ಇಟ್ಟುಕೊಂಡಿದ್ದಾರೆ, ಅವರಿಂದ ತೆಗೆದುಕೊಂಡಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಏಕೆ ಹೇಳುತ್ತಿದ್ದೇನೆಂದರೆ, ಇವೆಲ್ಲಾ ಉದ್ಯೋಗಗಳು ಮುಳುಗಿ ಹೋಗುತ್ತಿವೆ. ಅದಕ್ಕಾಗಿ ಇವುಗಳನ್ನು ನೆನಪು ಮಾಡಿಕೊಡುತ್ತಿದ್ದೇನೆ. ಕಾಟನ್ ಸೀರೆ, ಕಾಟನ್ ಸೀರೆಗೆ ರೇಷ್ಮೆ ಸೆರಗು ಹಚ್ಚುತ್ತಾರೆ. ಗಾಯತ್ರಿ ರೇಷ್ಮೆ ಸೀರೆ, ಅದಕ್ಕೆ ಟೋಪ್ ತನಿ ಸೀರೆ ಎಂದು

ಹೇಳುತ್ತೇವೆ. ಕುಬುಸದ ಕಣದ ಬಗ್ಗೆ ಹೇಳಬೇಕೆಂದರೆ, ನೂಲಿನ ಕುಬುಸದ ಕಣ ಬರುತ್ತದೆ, ಚಮ್ಕಾ ಕುಬುಸದ ಕಣನೂ ಬರುತ್ತದೆ, ರೇಷ್ಮೆ ಕುಬುಸದ ಕಣನೂ ಬರುತ್ತದೆ, ಅದರಲ್ಲಿ ಸುಮಾರು ಏಳು ವೆರೈಟಿ ಇವೆ. ತೇರಿನ ಕುಬುಸದ ಕಣ, ಸೂಜಿಗೆ ಮಲ್ಲಿಗೆ ಕುಬುಸದ ಕಣ, ರುಂಡ ಮಾಲಿ ಕುಬುಸದ ಕಣ, ರುಂಡ ಮಾಲಿ ಎಂದರೆ ಆ ಕುಬುಸದ ಕಣದ ಮೇಲೆ ಮನುಷ್ಯನ ಕುತ್ತಿಗೆ ಚಿತ್ರ ಅಷ್ಟೇ ಪ್ರಿಂಟ್ ಮಾಡಿರುತ್ತಾರೆ. ಕೋರ್ಟ್ ಕಛೇರಿ ಕುಬುಸದ ಕಣ, ಏಲಕ್ಕಿ ಕುಬುಸದ ಕಣ ಎಂದು ಇದೆ, ನಾನು ಸರ್ಕಾರದಿಂದ ಏನು ನಿರೀಕ್ಷೆ ಮಾಡಿದ್ದೆ ಎಂದರೆ; ಸರ್ಕಾರ ಈ ಬಜೆಟ್‌ನಲ್ಲಿ ನೇಕಾರರಿಗೆ ಸಹಾಯ ಮಾಡುವ ದೃಷ್ಟಿಯಿಂದ ಬಾಗಲಕೋಟೆಯಲ್ಲಿ ಒಂದು ನೂಲಿನ ಡಿಪೋ ಪ್ರಾರಂಭ ಮಾಡುತ್ತಾರೆಂದು ಆಸೆ ಇಟ್ಟುಕೊಂಡಿದ್ದೆ. ಆದರೆ ಮಾಡಲಿಲ್ಲ. ಈಗಾದರೂ ಮಾನ್ಯ ಸಚಿವರಾದ ಶ್ರೀಮತಿ ಉಮಾಶ್ರೀಯವರಲ್ಲಿ ಒಂದು ವಿನಂತಿ ಮಾಡುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿ, ಉತ್ತರ ಕೊಡುವಾಗ ಘೋಷಣೆ ಮಾಡಿಸಿ. ಎರಡನೆಯದು ಕೈ ಮಗ್ಗ ಮತ್ತು ವಿದ್ಯುತ್ ಮಗ್ಗ ಇವೆ. ಕೈ ಮಗ್ಗ ಉತ್ತರ ಕರ್ನಾಟಕದಲ್ಲಿ ಜಾಸ್ತಿ ಇವೆ. ಅದಕ್ಕೆ ಪ್ರತ್ಯೇಕವಾದ ಎರಡು ನಿಗಮಗಳೇ ಇವೆ. ಆ ನಿಗಮ ಯಾವುದಕ್ಕೂ ಕೆಲಸಕ್ಕೆ ಬಾರದು. ಆ ನಿಗಮಗಳ ಪರಿಸ್ಥಿತಿ ಹೇಳಬೇಕೆಂದರೆ, ಹೊರಗಡೆಯಿಂದ ತಂದು ನಮ್ಮ ಮಕ್ಕಳಿಗೆ ಯೂನಿಫಾರಂ ಕೊಡುವುದು ಮಾಡುತ್ತಾರೆ. ಅವರು ನೇಯಿಸುವುದಿಲ್ಲ, ನೇಕಾರರಿಗೆ ಹಚ್ಚಿ ಕೆಲಸ ಮಾಡಿಸುವುದಿಲ್ಲ. ಈಚಲಕರಂಜಿಗೆ ಹೋಗುತ್ತಾರೆ, ಮಹಾರಾಷ್ಟ್ರದ ಸೊಲ್ಲಾಪುರಕ್ಕೆ ಹೋಗುತ್ತಾರೆ, ಆಂಧ್ರಪ್ರದೇಶಕ್ಕೆ ಹೋಗುತ್ತಾರೆ. ಅಲ್ಲಿಂದ ತೆಗೆದುಕೊಂಡು ಬಂದು, ಕಮಿಷನ್ ತೆಗೆದುಕೊಂಡು ಇಲ್ಲಿ ಸ್ಕೂಲ್ ಮಕ್ಕಳಿಗೆ ಸಪ್ಲೈ ಮಾಡುವ ಕೆಲಸ ಮಾಡುತ್ತಾರೆ. ನೇಕಾರರು ಬದುಕಬೇಕು ಎನ್ನುವ ದೃಷ್ಟಿಯಿಂದ ನಿಗಮಗಳನ್ನು ಪ್ರಾರಂಭ ಮಾಡಿ ಸುಮಾರು 35 ವರ್ಷಗಳ ಮೇಲಾಯಿತು. ಆ ನಿಗಮಗಳನ್ನು ಪುನಶ್ಚೇತನ ಮಾಡಬೇಕು. ದುಡಿಯುವ ಕೈಗಳಿಗೆ ಕೆಲಸ ಕೊಡಬೇಕು. ನೇಕಾರರಿಗೆ ನೂಲು ಕೊಡಬೇಕು, ವೇಜಸ್ ಕೊಡಬೇಕು. ಆ ಕೆಲಸ ಇವತ್ತು ಆಗುತ್ತಿಲ್ಲ. ನೇಕಾರರಿಗೆ death claim ವಿಮಾ ಮಾಡುತ್ತೇವೆ. ಅದಕ್ಕೆ ಕೇವಲ 60,000 ರೂ.

ಕೊಡುತ್ತಾರೆ. On duty ಅವರು ಸತ್ತರು ಎಂದರೆ death claim ಎಂದು ಕೇವಲ 60,000 ರೂ. ಕೊಡುತ್ತಾರೆ. ಕನಿಷ್ಟ ಅದನ್ನು ಒಂದು ಎರಡು ಲಕ್ಷ ರೂ.ಗಳಿಗಾದರೂ ಹೆಚ್ಚಿಸಿ. 60,000 ರೂ.ಗಳಲ್ಲಿ ಏನು ಬರುತ್ತದೆ? 60,000 ರೂ.ಗಳಲ್ಲಿ ಏನೂ ಬರುವುದಿಲ್ಲ. ನೇಕಾರ ಸತ್ತು ಹೋದವನ ಮಕ್ಕಳಿಗೆ at least ಒಂದಿಷ್ಟು ಗಂಜಿಗಾದರೂ ಆಗಬೇಕು. ಅದನ್ನು ಎರಡು ಲಕ್ಷ ರೂಪಾಯಿಗಳಿಗೆ ಹೆಚ್ಚು ಮಾಡಬೇಕು. ಮಾನ್ಯ ಸಚಿವರು ಇದನ್ನು ಬರೆದುಕೊಳ್ಳಬೇಕು. ನಿಮ್ಮ ಸಲುವಾಗಿ ಹೇಳುತ್ತಿದ್ದೇನೆ. ನೀವು ಕೂತಿದ್ದೀರಿ ಎಂದು ಇದನ್ನು ಮೊದಲು ತೆಗೆದುಕೊಂಡೆ. ಮಾನ್ಯ ಸಭಾಧ್ಯಕ್ಷರೆ, ರೈತರಿಗೆ ಯಾವ ರೀತಿ 0% ಮೇಲೆ ಸಾಲ ಕೊಡುತ್ತೀರಿ, ಅದೇ ರೀತಿ ನೇಕಾರರಿಗೂ ಕೊಡಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಕುಶಲಕರ್ಮಿಗಳಿದ್ದಾರೆ. ಈ ಯಾಂತ್ರಿಕ ಯುಗದಲ್ಲಿ ಕುಂಬಾರ, ಕಂಬಾರ ಮತ್ತು ಚಮ್ಮಾರ ಅವರ ಉದ್ಯೋಗ ಬಂದ್ ಆಗಿದೆ. ಚಮ್ಮಾರ ಇವರು ಚಪ್ಪಲಿ ಮತ್ತು ತೊಗಲಿನ ಸಾಮಗ್ರಿಗಳನ್ನು ತಯಾರು ಮಾಡತಕ್ಕಂಥವರು, ಅವರ ಉದ್ಯೋಗ ಬಂದ್ ಆಗಿದೆ. ಅವರಿಗೆ ಉದ್ಯೋಗ ಕೊಡುವುದಕ್ಕೆ ಈ ಬಜೆಟ್‌ನಲ್ಲಿ 50 ಕೋಟಿ ಅಥವಾ ನೂರು ಕೋಟಿ ರೂ.ಗಳನ್ನು ಕೊಟ್ಟು ಎಲ್ಲಾ ಕುಶಲ ಕರ್ಮಿಗಳೇನಿದ್ದಾರೆ, ಅವರನ್ನು ಜೀವಂತವಾಗಿಡಬೇಕು. ಸಾವಿರಾರು ವರ್ಷಗಳಿಂದ ಕುಲ ಕಸಬನ್ನೇ ಅವಲಂಬಿಸಿ ಏನು ಬದುಕುತ್ತಿದ್ದಾರೆ ಅವರಿಗೆ ಬದುಕುವುದಕ್ಕೆ ಒಂದು ಅವಕಾಶ ಮಾಡಿ ಕೊಡಿ. ನೇಕಾರರಿಗೆ ಬೇರೆ ಉದ್ಯೋಗ ಬರುವುದಿಲ್ಲ. ಅವರು ಒಕ್ಕಲುತನ ಮಾಡುವುದಕ್ಕಾಗುವುದಿಲ್ಲ. ಮತ್ತೊಂದು ಕೆಲಸಕ್ಕೆ ಹೋಗುವುದಕ್ಕಾಗುವುದಿಲ್ಲ. ಅವರು ಕೇವಲ ನೇಕಾರಿಕೆಯಿಂದ ಬದುಕುತ್ತಾರೆ. ಮಾನ್ಯ ಸಚಿವರು ಹೇಳಬೇಕು. ನೇಕಾರರನ್ನು ಎಷ್ಟು ಜನರನ್ನು ತೂಗಿದರೂ 37 ಕೆ.ಜಿ. ಗಿಂತ ಅವರ ತೂಕ ಹೆಚ್ಚಾಗುವುದಿಲ್ಲ ಒಂದು ಹೊತ್ತು ಊಟ ಸಿಗುತ್ತದೆ. ಇನ್ನೊಂದು ಹೊತ್ತು ಊಟ ಸಿಗುವುದಿಲ್ಲ. ಹಾಗೆಯೇ ಮಗ್ಗದ ಮುಂದೆ ಉಪವಾಸ ಕೂರುತ್ತಾರೆ ಹೊರತು ಅವರಿಗೆ ಬೇರೆ ಉದ್ಯೋಗ ಬರುವುದಿಲ್ಲ. ಇದು ಸಾವಿರಾರು ವರ್ಷಗಳಿಂದ ಮನೆತನದ ಉದ್ಯೋಗ ಆಗಿದೆ. ನೇಕಾರರು ಎಂದರೆ ನೇಕಾರ ಜಾತಿಯವರು ಆ

ಉದ್ಯೋಗ ಮಾಡುವುದಿಲ್ಲ, ಎಲ್ಲಾ ಜಾತಿಯವರು ಆ ಉದ್ಯೋಗ ಅವಲಂಬಿಸಿ ಬದುಕುತ್ತಿದ್ದಾರೆ. ಅವರ ಸಲುವಾಗಿ ಸರ್ಕಾರ ಏನಾದರೂ ಹೊಸ ಯೋಜನೆಗಳನ್ನು ಘೋಷಣೆ ಮಾಡಬೇಕು. ಆದರೆ ಘೋಷಣೆ ಇಲ್ಲ. ದುಡಿಯುವ ಕೈಗಳಿಗೆ ನೀವು ಕೆಲಸ ಕೊಡದೆ ಹೋದರೆ, ಕೇವಲ ಒಂದು ರೂಪಾಯಿಗೆ ಕಿಲೋ ಅಕ್ಕಿ ಕೊಡುವುದರಿಂದ ಅವರ ಬದುಕಾಗುವುದಿಲ್ಲ. ಅವರಿಗೆ ದುಡಿಯತಕ್ಕಂತಹವರಿಗೆ ಉದ್ಯೋಗ ಸೃಷ್ಟಿ ಮಾಡುವುದು ನಿಮ್ಮ ಬಜೆಟ್‌ನಲ್ಲಿ ಎಲ್ಲಿಯೂ ಕಾಣುತ್ತಿಲ್ಲ. ಅದನ್ನು ನೀವು ಮಾಡಿ. ಅವರಿಗೆ ಟ್ರೈನಿಂಗ್ ಕೊಡಿ. ಕೈಮಗ್ಗದವರನ್ನು ವಿದ್ಯುತ್ ಮಗ್ಗಕ್ಕೆ ಪರಿವರ್ತನೆ ಮಾಡುವುದಕ್ಕೆ ಪ್ರಯತ್ನ ಮಾಡಿ. ಅವರು ಗೌರವದಿಂದ ಬದುಕುತ್ತಾರೆ. 'ಯಶಸ್ವಿನಿ' ಯೋಜನೆಯಲ್ಲಿ ರೈತರು ವಿಮಾ ಕಂತು ಕಟ್ಟಬೇಕೆಂದರೆ 250 ರೂ. ಇದೆ. ಆದರೆ ನಮ್ಮ ನೇಕಾರರಿಗೆ 750 ರೂ. ಮಾಡಿದ್ದಾರೆ. ಯಾರು ತಿಂಗಳಿನಿಂದ ಉಪವಾಸ ಇದ್ದಾನೆ, ಅವನ ಮನೆಗೆ ತಂಗಳು ರೊಟ್ಟಿ ಕೇಳುವುದಕ್ಕೆ ಹೋದ ಹಾಗಾಗಿದೆ. ಅವರ ಹತ್ತಿರ ದುಡ್ಡೇ ಇರುವುದಿಲ್ಲ. ಅಂತಹವರಿಗೆ 750 ರೂ. ಮಾಡಿದ್ದಾರೆ. ಮಾನ್ಯ ಸಚಿವರಿಗೆ ನಾನೇನು ಸಲಹೆ ಮಾಡುತ್ತೇನೆ, ಅದನ್ನು 250 ರೂ.ಗೆ ಇಳಿಸಿ. ಕೃಷಿ ಇಲಾಖೆ ಬಗ್ಗೆ ಹೇಳಬೇಕೆಂದರೆ, 2014–15ನೇ ಸಾಲಿನಲ್ಲಿ ಕೃಷಿ ಇಲಾಖೆಯಲ್ಲಿ plan expenditure 50% ಗೆ ಬಂದು ನಿಂತಿದೆ ಎಂದರೆ ಇವರು ಯಾವ ರೀತಿ ಕೃಷಿ ಅಭಿವೃದ್ಧಿ ಮಾಡುತ್ತಾರೆ? ಮಾಡುವುದಕ್ಕೆ ಸಾಧ್ಯವೇ? ಮಾನ್ಯ ಜಯಚಂದ್ರರವರೇ, ನೀವು ಸರ್ಕಾರದ ಕೃಷಿ ಮಂತ್ರಿ ಆಗಿದ್ದಂತಹವರು. ಇಷ್ಟು ಸಾಕಾ ಪ್ರತಿಷ್ಠೆಗೆ ಬಿದ್ದು, ಎಲ್ಲರೂ ಊರಿಗೊಂದೊಂದು ವಿಶ್ವವಿದ್ಯಾಲಯ ಪ್ರಾರಂಭ ಮಾಡಿಸಿ, ಎಲ್ಲಾ ಜಿಲ್ಲೆಗಳಲ್ಲಿಯೂ ವಿಶ್ವವಿದ್ಯಾಲಯಗಳು ಆಗಿವೆ. ಒಬ್ಬನೇ ಒಬ್ಬ ವೈಸ್ ಛಾನ್ಸಲರ್, ಒಂದೇ ಒಂದು ಹೊಸ ವೆರೈಟಿ ಹುಡುಕಿ ತೆಗೆಯಲಿಲ್ಲ, 10 ವರ್ಷಗಳಲ್ಲಿ. ಅವರು ಖರ್ಚು ಮಾಡಿ ವೈಸ್ ಛಾನ್ಸಲರ್ ಆಗಿ ಬಂದು, contractor ಆಗುತ್ತಾರೆ. ಅವರ ಕೆಲಸ ಏನು? ಬಿಲ್ಡಿಂಗ್ ಕಟ್ಟಿಸುವುದು, ಏನೇನು ಸಾಮಗ್ರಿಗಳು ಬೇಕು, furniture, equipments ಮತ್ತೊಂದು, ಅವುಗಳನ್ನು ಖರೀದಿ ಮಾಡಿ, ಕಮಿಷನ್ ತೆಗೆದುಕೊಂಡು

ಆರಾಮವಾಗಿದ್ದು, ಅವಧಿ ಮುಗಿಸಿಕೊಂಡು ಮನೆಗೆ ಹೋಗುವುದು. ಯಾರ್ಯಾರು eligible ಇದ್ದಾರೆ, ಯಾರಿಗೆ ಆ ಶಕ್ತಿ ಇದೆ, ಅಂತಹವರನ್ನು ಗುರುತಿಸಿ ಕೃಷಿ ವಿಶ್ವವಿದ್ಯಾಲಯಕ್ಕೆ ನೇಮಕ ಮಾಡಿ. ಹೊಸ ವೆರೈಟಿಗಳನ್ನು ಹುಡುಕಿ ತರಲಿ. ನಮ್ಮ ಜಮಖಂಡಿ ತಾಲ್ಲೂಕಿನಲ್ಲಿ ಒಬ್ಬ ಇಂಜಿನಿಯರ್ ಅವರ ತಂದೆ ಸತ್ತ ಮೇಲೆ ಇಂಜಿನಿಯರಿಂಗ್ ಓದಿ ಇಂಜಿನಿಯರ್ ಆಗಿದ್ದ, ರಾಜೀನಾಮೆ ಕೊಟ್ಟು ಬಂದು ಸಾವಯವ ಕೃಷಿ ಮಾಡುತ್ತಿದ್ದಾನೆ. ಅವನ ಕಬ್ಬು ಈ ವರ್ಷ 32 ಗಣಿಕೆ ಆಗಿದೆ. 32 ಗಣಿಕೆ ಅಂದರೆ 140 ಟನ್ ಪ್ರತಿ ಎಕರೆಗೆ ಬೆಳೆಯುತ್ತಿದ್ದಾನೆ. ನಿಮ್ಮ ವಿಶ್ವವಿದ್ಯಾನಿಲಯದಲ್ಲಿ ಏನು ಎ.ಸಿ. ರೂಮ್‌ನಲ್ಲಿ ಕೂತಿದ್ದಾರೆ, ಅವರನ್ನು ಅವನ ಹತ್ತಿರ ಟ್ರೈನಿಂಗ್ ಕಳುಹಿಸಿ, ಅವನು ಒಂದೇ ಒಂದು ಹಿಡಿ ರಸಾಯನಿಕ ಗೊಬ್ಬರ ಉಪಯೋಗ ಮಾಡುವುದಿಲ್ಲ, ಬೆಳೆಗಳಿಗೆ ಕ್ರಿಮಿನಾಶಕ ಸಿಂಪಡಿಸುವುದಿಲ್ಲ. ಅವನ ಹತ್ತಿರ ಆರು ದನಗಳು, ಎಮ್ಮೆ, ಆಕಳು, ಎತ್ತು ಇವೆ. ನಾಲ್ಕು ಆಡುಗಳು ಇವೆ, ಹತ್ತು ಕುರಿಗಳನ್ನು ಸಾಕಿದ್ದಾನೆ. ಆಡಿನ ಉಚ್ಚೆ, ಹಿಕ್ಕೆ, ದನದ ಸಗಣಿ ಎಲ್ಲಾ ಸೇರಿ ಒಂದು ಟ್ಯಾಂಕ್‌ಗೆ ಹಾಕಿ, ಅದನ್ನು ಕಲಿಸಿ, ಅದು ತಿಳಿ ಆದ ಮೇಲೆ ಅದನ್ನು 40-40 ಲೀಟರ್‌ನ ಕ್ಯಾನ್‌ಗಳಿಗೆ ತುಂಬುತ್ತಾನೆ. ಅದನ್ನು ಒಯ್ದು ಡ್ರಿಪ್ ಮುಖಾಂತರ ಬೆಳೆಗಳಿಗೆ ಬಿಡುತ್ತಾನೆ. ಇಷ್ಟೇ ಅವನು ಮಾಡುವುದು. ಬೇರೆ ಏನೂ ಖರ್ಚು ವೆಚ್ಚ ಇಲ್ಲ. ಇವತ್ತು ಕೃಷಿ ವಿಶ್ವವಿದ್ಯಾಲಯದವರಿಗೆ ಹೇಳಿದರೆ, ಹೋದ ಸಾರಿ ಗೋಧಿ ಇಳುವರಿ ಬಹಳ ಕಡಿಮೆ ಆಯಿತು ಎಂದರೆ, ಯೂರಿಯಾ ಸ್ವಲ್ಪ ಹೆಚ್ಚು ಹಾಕಿ ಎಂದು ಹೇಳಿ, ಮೇಲೆ ಯೂರಿಯ ಚೆಲ್ಲುವುದಕ್ಕೆ ಹೇಳುತ್ತಾರೆ. ಬುಟ್ಟಿ ಒಳಗೆ ಹಾಕಿಕೊಂಡು ಒಗಿಯುವುದನ್ನು ನೀವು ಟಿ.ವಿ.ಗಳಲ್ಲಿ ನೋಡಿರಬಹುದು. ಒಕ್ಕಲುತನ ಮಾಡುವ ರೀತಿ ಅದಲ್ಲ. ಸರ್ಕಾರ ರೈತರಿಗೆ ಕೆಲವು ವ್ಯವಸ್ಥೆಗಳನ್ನು ಮಾಡಬೇಕಾಗುತ್ತದೆ. ಖರ್ಚಿಲ್ಲದೇ ಅಗ್ರಿಕಲ್ಚರ್ ಮಾಡತಕ್ಕಂಥದ್ದು ಆಗಬೇಕು. ಎಕ್ಸ್‌ಪೆಂಡೀಚರ್ ಕಡಿಮೆಯಾದರೆ ಮಾತ್ರ ರೈತರಿಗೆ ಲಾಭವಾಗುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ರೈತರಿಗೆ implements ಕೊಟ್ಟಿದ್ದಾರೆ, ಬಹುಷ: ನಮ್ಮ ಸವದಿ ಸಾಹೇಬರು ತೆಗೆದುಕೊಂಡಿರುತ್ತಾರೆ, ನಮ್ಮ ರಾಜಗೌಡರು ತೆಗೆದುಕೊಂಡಿರುತ್ತಾರೆ. implements ಅನ್ನು subsidy ಯೊಳಗೆ ಕೊಡುತ್ತಾರೆ.

ಈ ರೀತಿಯಲ್ಲಿ ರೋಟಾವೇಟರ್ ಕೊಡುತ್ತಾರೆ. ಈ ರೋಟಾವೇಟರ್‌ಗೆ ಸಬ್ಸಿಡಿ 65 ಸಾವಿರ ರೂ.ಗಳಿದೆ. ಆ ರೋಟಾವೇಟರ್‌ನ್ನು ಇವರು ಎಷ್ಟಕ್ಕೆ ಖರೀದಿ ಮಾಡುತ್ತಾರೆಂದರೆ SPD rate ನಲ್ಲಿ 1,30,000/- ರೂ.ಗಳಿಗೆ ಖರೀದಿ ಮಾಡುತ್ತಾರೆ. ನಾವು ದುಡ್ಡು ತೆಗೆದುಕೊಂಡು ಮಾರ್ಕೆಟ್‌ನಲ್ಲಿ ಖರೀದಿ ಮಾಡುವುದಕ್ಕೆ ಹೋದರೆ ಅದು 95,000/- ರೂ.ಗಳಿಗೇ ಸಿಗುತ್ತದೆ. ನಿಮ್ಮ ಸಬ್ಸಿಡಿ ಅಧಿಕಾರಿಗಳ ಕಮಿಷನ್‌ಗೇ ಹೋಗುತ್ತದೆ, ನಿಮ್ಮ ಅಧಿಕಾರಿಗಳೇ ತೆಗೆದುಕೊಂಡು ಬಿಡುತ್ತಾರೆ. ಯಾರು ಪೇಮೆಂಟ್ ಹಿಡಿದುಕೊಂಡು ಕುಳಿತಿದ್ದಾರೆ ಅವರಿಗೆ ಹೋಗುತ್ತದೆ, ಅಧಿಕಾರಿಗಳಿಗೆ ಹೋಗುತ್ತದೆ. ರೈತನಿಗೆ ಏನು ಲಾಭವಾಗುತ್ತದೆ. ಹೇಳಿ? ಅದೇ ರೀತಿ ಕಬ್ಬಿಣದ ನೇಗಿಲನ್ನು ಕೊಡುತ್ತಾರೆ. ಅದಕ್ಕೆ 37,000/- ರೂಪಾಯಿ ಸಬ್ಸಿಡಿ ಕೊಡುತ್ತಾರೆ. ಸರ್ಕಾರದ್ದು ಅದರ ರೇಟ್ 72,000/- ರೂಪಾಯಿ. ಅದು ಮಾರ್ಕೆಟ್‌ನಲ್ಲಿ 55,000/-ರೂ.ಗಳಿಗೇ ಸಿಗುತ್ತದೆ. ಏಕೆ ಇದನ್ನೆಲ್ಲವನ್ನು ನಿಮಗೆ ನೋಡುವುದಕ್ಕಾಗುವುದಿಲ್ಲ? ಏಕೆ ಇದನ್ನು ಬಂದ್ ಮಾಡುವುದಕ್ಕಾಗುವುದಿಲ್ಲ?

ಉಪಾಧ್ಯಕ್ಷರು:- ಇದು ಮೊದಲಿನಿಂದಲೂ ಬಂದಿರುವ ಪ್ರಾಕ್ಟಿಸೇ ಅಥವಾ ಈ ಸರ್ಕಾರ ಬಂದ ಮೇಲೆ ನಡೆದಿರುವಂಥದ್ದೇ?

ಶ್ರೀ ಗೋವಿಂದ ಎಂ. ಕಾರಜೋಳ್:- ಮಾನ್ಯ ಉಪಾಧ್ಯಕ್ಷರೆ, ತಾವು ಏನು ಹೇಳಿದಿರಿ?

ಉಪಾಧ್ಯಕ್ಷರು:- ಮೊದಲಿನಿಂದಲೂ ಸರ್ಕಾರಗಳಲ್ಲಿ ಈ ರೀತಿಯಾಗಿ ನಡೆದುಕೊಂಡು ಬಂದಿದೆಯೋ ಅಥವಾ ಈ ಸರ್ಕಾರ ಬಂದಮೇಲೆ ಬಂದಿದೆಯೇ?

ಶ್ರೀ ಗೋವಿಂದ ಎಂ. ಕಾರಜೋಳ್:- ನಾನು ಹೇಳಿದ್ದು, ಕಳೆದ ಹತ್ತು ವರ್ಷಗಳದ್ದು ತೆಗೆದುಕೊಂಡಿದ್ದೇನೆ. ಕಳೆದ ಹತ್ತು ವರ್ಷದಲ್ಲಿ ಕೆಟ್ಟ ಪ್ರವೃತ್ತಿ ಪ್ರಾರಂಭವಾಗಿದೆಯೆಂದು ನಾನು ಹೇಳಿದ್ದೇನೆ. ಎಲ್ಲರನ್ನು, ನಮ್ಮನ್ನು ಸೇರಿಸಿಕೊಂಡಂತೆಯೇ ಈ ಕಡೆ, ಆ ಕಡೆಯವರು ಎಂದೇನಲ್ಲ, ನಾವೂ ಅಧಿಕಾರದ್ದಲ್ಲಿದ್ದೆವು, ಅವರೂ ಇದ್ದಾರೆ, ಈ ಕಡೆಗೆ ಬರಬಹುದು, ಆ ಕಡೆಗೆ

ಬರಬಹುದು, ನಾನು ಯಾವುದೇ ಒಂದು ಭಾವನೆಯಿಂದ ಹೇಳಲಿಲ್ಲ ಅಥವಾ ಜಯಚಂದ್ರರವರು Agriculture Minister ಇದ್ದಾಗ ಆಯಿತು ಎಂದು ನಾನು ಹೇಳಿಲಿಲ್ಲ, ಅಥವಾ ಕೃಷ್ಣಬೈರೇಗೌಡರು ಇದ್ದಾಗ ಆಗಿದೆಯೆಂದು ಹೇಳಲಿಲ್ಲ. ನಾನು ವ್ಯವಸ್ಥೆ ಬಗ್ಗೆ ಮಾತನಾಡುತ್ತಿದ್ದೇನೆ. ಈ ಅಧಿಕಾರಿಗಳು ಎನ್ನತಕ್ಕಂಥವರೇನಿದ್ದಾರಲ್ಲ, ಇವರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಇದನ್ನು ಏಕೆ ಕಂಟ್ರೋಲ್ ಮಾಡುವುದಕ್ಕೆ ನಿಮಗೆ ಆಗುತ್ತಿಲ್ಲ? ಇನ್ನು ರೈತರುಗಳಿಗೆ ಬೀಜಗಳನ್ನು ಇವರು ಕೊಡುತ್ತಾರೆ. ಎಷ್ಟೊಂದು ರೈತರು ಗೋಳಾಡುತ್ತಾರೆಂದರೆ, ಕಳಪೆ ಬೀಜ ಕೊಟ್ಟರು, ನಾನು ಐದು ಎಕರೆಯಲ್ಲಿ ಬೆಳೆ ಹಾಕಿದ್ದೆ, ಹತ್ತು ಎಕರೆಯಲ್ಲಿ ಬೆಳೆದಿದ್ದೆ, ಬೀಜದ ಗುಣಮಟ್ಟ ಸರಿಯಾಗಿಲ್ಲದೆ ಬೆಳೆಯಾಗಲಿಲ್ಲವೆನ್ನುತ್ತಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಈ ಸಬ್ಸಿಡಿ ವ್ಯವಸ್ಥೆಯೇನಿದೆಯಲ್ಲ, ನೇರವಾಗಿ ನೀವು ರೈತನ ಅಕೌಂಟ್‌ಗೆ ಹಾಕಿಬಿಡಿ. ಯಾರು ತೆಗೆದುಕೊಳ್ಳುತ್ತೇನೆ ಎಂದು ಮುಂದೆ ಬರುತ್ತಾನೋ ಅವನ ಕಡೆಯಿಂದ ನೀವು ಅರ್ಜಿಯನ್ನು ತೆಗೆದುಕೊಳ್ಳಿ ಮತ್ತು ಪರಿಶೀಲನೆ ಮಾಡಿ.

ಶ್ರೀ ಲಕ್ಷ್ಮಣ ಎಸ್. ಸವದಿ:- ಕಾರಜೋಳ್‌ರವರೆ, ಒಂದ್ನಿಮಿಷ, ರೈತರ ಅಕೌಂಟ್‌ಗೆ ಸಬ್ಸಿಡಿ ಹಣ ಹಾಕಬೇಕು, ರೈತನ ಅಕೌಂಟ್ ಮುಖಾಂತರವೇ ಇದನ್ನು ಪರ್ಚೇಸ್ ಮಾಡಬೇಕು ಎನ್ನುವ ಸಲಹೆಯನ್ನು ಮಾನ್ಯ ಕಾರಜೋಳ್‌ರವರು ಕೊಡುತ್ತಿದ್ದಾರೆ. ಇಲ್ಲಿಯೂ ಒಂದು ಜಾಣತನವನ್ನು ಅಧಿಕಾರಿಗಳು ಮಾಡುತ್ತಾರೆ. ಈಗ ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ 'ಕೃಷಿ ಭಾಗ್ಯ' ಎನ್ನುವ ಒಂದು ಯೋಜನೆಯನ್ನು ಹಾಕಿದ್ದಾರೆ. ಕೃಷಿ ಭಾಗ್ಯ ಯೋಜನೆಯೊಳಗೆ ರೈತರಿಗೆ ನೀರಿನ ಹೊಂಡಗಳನ್ನು ಮಾಡುವುದಕ್ಕೆ ಸಬ್ಸಿಡಿ ಕೊಡುತ್ತಿದ್ದಾರೆ. ಕೃಷಿ ಹೊಂಡದ size ಎಷ್ಟಿರಬೇಕು ಎಂಬುದನ್ನು ಇವರು fix ಮಾಡುತ್ತಾರೆ. ಎಷ್ಟು ಅಗಲ ಇರಬೇಕು? ಎಷ್ಟು ಎತ್ತರವಿರಬೇಕು? ಎಷ್ಟು ಆಳವಿರಬೇಕು? ಎನ್ನತಕ್ಕಂಥದ್ದನ್ನು ನಿಗದಿ ಮಾಡುತ್ತಾರೆ. ಕೃಷಿ ಹೊಂಡ ಮಾಡಲು ಹಣವನ್ನು ಅವನ ಅಕೌಂಟ್‌ಗೇ ಜಮಾ ಮಾಡುತ್ತಾರೆ. ಅಲ್ಲಿ ಏನೊಂದು ಬುದ್ಧಿವಂತಿಕೆಯನ್ನು ಅಧಿಕಾರಿಗಳು use ಮಾಡುತ್ತಾರೆಂದರೆ, ಆ

ರೈತ ಹಣವನ್ನು ಪಡೆದುಕೊಂಡು ತನ್ನ ಖಾಸಗಿ ಟ್ರ್ಯಾಕ್ಟರೋ, ಜೆ.ಸಿ.ಬಿ. ಯನ್ನೋ ಏನೋ ಹಾಕಿ ತೆಗೆಯುತ್ತಾನೆ. ತೆಗೆದ ಮೇಲೆ ಅದಕ್ಕೆ ಪ್ಲಾಸ್ಟಿಕ್ ಕವರ್ ಹಾಕುತ್ತಾರೆ, ನೀರು ಅದರಲ್ಲಿ ಸೋರಬಾರದೆಂದು. ಅದನ್ನೇನು ಮಾಡುತ್ತಾರೆಂದರೆ, ಇಂಥ ಏಜೆನ್ಸ್ ಮುಖಾಂತರವೇ ತೆಗೆದುಕೊಳ್ಳಬೇಕು ಎಂದು ಹೇಳಿ, ಇಡೀ ರಾಜ್ಯದಲ್ಲಿ ನಾಲ್ಕು ಏಜೆನ್ಸಿಗಳನ್ನು ಫಿಕ್ಸ್ ಮಾಡಿದ್ದಾರೆ. ಒಂದೊಂದು ಡಿವಿಷನ್‌ಗೆ ಒಂದೊಂದು ಏಜೆನ್ಸಿ. ಅವರು ರೇಟ್ ಫಿಕ್ಸ್ ಮಾಡಿದ್ದಾರೆ. ಆ ಏಜೆನ್ಸಿಯದ್ದು ಪ್ಲಾಸ್ಟಿಕ್ ಫ್ಯಾಕ್ಟರಿ ಏನೂ ಇಲ್ಲ. ಎಲ್ಲೋ ಒಂದು ಕಡೆಯಿಂದ ಅವನು ತರುತ್ತಾನೆ. ಎಲ್ಲೋ ಬೇರೆ ಕಡೆಯಿಂದ ಕೊಂಡು ತಂದು, 300 mm ಎಂದು ಇವರು fix ಮಾಡಿದ್ದಾರೆ, ಅದರ ಜಾಡು ಎಷ್ಟಿರಬೇಕು, ಅದರ ದಪ್ಪ ಎಷ್ಟಿರಬೇಕೆಂದು fix ಮಾಡಿದ್ದಾರೆ. ಆ 300 mm plastic ಅನ್ನೇ ಅಲ್ಲಿ ಹಾಕಬೇಕು. ಅದರ ರೇಟ್ ಎಷ್ಟೆಂದರೆ 95 ರೂ.ಗಳು. ತನ್ನ ಅಕೌಂಟ್‌ನಿಂದ ಹಣ ತೆಗೆದುಕೊಂಡು ಹೋಗಿ ಆ ಏಜೆನ್ಸಿಗೆ ಕೊಡುವುದು, ನಮ್ಮ ಬೆಳಗಾವಿ ಡಿವಿಷನ್‌ನಲ್ಲಿ ಒಂದು ಏಜೆನ್ಸಿ ಫಿಕ್ಸ್ ಮಾಡಿದ್ದಾರೆ. 95 ರೂ.ಗೆ per square metre ಎಂದು rate fix ಮಾಡಿದ್ದಾರೆ. ಅಷ್ಟು ಹಣ ಅವನು ಕೊಡಬೇಕು. ಅದೇ ಪ್ಲಾಸ್ಟಿಕ್ ಅನ್ನು ಅವನು ಯಾವುದೋ ಒಂದು ಫ್ಯಾಕ್ಟರಿಯಿಂದ ತರುತ್ತಾನಲ್ಲ, ಅಲ್ಲಿಂದಲೇ ನಾವು ನೇರವಾಗಿ ಅದನ್ನು ಖರೀದಿ ಮಾಡಿ ತೆಗೆದುಕೊಂಡರೆ ಕೇವಲ 55 ರೂ.ಗಳಿಗೆ ಒಂದು ಮೀಟರ್ ಸಿಗುತ್ತದೆ. ನೀವು ಹೇಳುವುದಕ್ಕೆ ಹೊರಟಿದ್ದೀರಲ್ಲ ಕಾರಜೋಳ್ ಸಾಹೇಬರೆ, ನೀವು ಚಾಪೆ ಕೆಳಗಡೆ ನುಗ್ಗಿದರೆ, ಅಧಿಕಾರಿಗಳು ರಂಗೋಲೆ ಕೆಳಗಡೆ ನುಗ್ಗುವವರಿದ್ದಾರೆ. ಅದನ್ನೂ ಸ್ವಲ್ಪ ಆಲೋಚನೆ ಮಾಡಿ ಮಾತನಾಡಿ.

ಉಪಾಧ್ಯಕ್ಷರು:- ಕಾರಜೋಳ್‌ರವರೆ, ತಾವು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ್:- ಮಾನ್ಯ ಉಪಾಧ್ಯಕ್ಷರೆ, ನನ್ನ ಸಲಹೆ ಏನೆಂದರೆ, ರೈತನಿಗೆ ಇವತ್ತು ಡ್ರಿಪ್ ಇರಿಗೇಶನ್‌ಗೆ ಸಬ್ಸಿಡಿ ಕೊಡುತ್ತಿದ್ದೀರಿ. ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್‌ಗೆ ಕೊಡುತ್ತಿದ್ದೀರಿ, ಅವರಿಂದ ಅರ್ಜಿ ತೆಗೆದುಕೊಂಡು ಸ್ಯಾಂಕ್ಷನ್ ಮಾಡಿ, ಅವನ ಅಕೌಂಟ್‌ಗೆ ಕೊಡತಕ್ಕಂಥ ವ್ಯವಸ್ಥೆ

ಮಾಡಿ. ಅಂದರೆ ರೈತರಿಗೆ ಅನುಕೂಲವಾಗುತ್ತದೆ, ಸರ್ಕಾರದ ಯೋಜನೆಗಳ ಲಾಭ ಮುಟ್ಟುತ್ತದೆ, ರೈತ ನೆಮ್ಮದಿಯಿಂದ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ರೈತರಿಗೆ ಕೊಡಬೇಕಾದ ಕಬ್ಬಿನ ಬಾಕಿ 2013 ರಿಂದ 2014–15 ರವರೆಗೆ ಅಂದರೆ ಇವತ್ತಿನವರೆಗೆ ಎಲ್ಲಾ ಫ್ಯಾಕ್ಟರಿಗಳವರು ಸೇರಿಸಿ 4 ಸಾವಿರ ಕೋಟಿ ರೂ.ಗಳ ಬಾಕಿಯನ್ನು ಇಟ್ಟುಕೊಂಡಿದ್ದಾರೆ. 4 ಸಾವಿರ ಕೋಟಿ ರೂ.ಗಳನ್ನು ರೈತರಿಗೆ ಕೊಡಬೇಕು. ಇವತ್ತಿನವರೆಗೆ ಕೊಟ್ಟಿಲ್ಲ. ರೈತರು ಕಣ್ಣೀರು ಹಾಕುತ್ತಿದ್ದಾರೆ. ಸಾಲಸೋಲ ಮಾಡಿ ಬೆಳೆ ಬೆಳೆದಿದ್ದಾರೆ. ಅವರಿಗೆ ಹಣವನ್ನು ಕೊಡಿಸತಕ್ಕಂಥ ಜವಾಬ್ದಾರಿ ಯಾರದ್ದು ಮಾನ್ಯ ಜಯಚಂದ್ರ ಸಾಹೇಬರೆ, ರೈತರ ಬಿಲ್ ನಾಲ್ಕು ಸಾವಿರ ಕೋಟಿ ರೂ.ಗಳು ಇವತ್ತಿಗೂ ಬಾಕಿಯಿದೆ. ಕೊಡಿಸುವವರು ಯಾರು? ಸರ್ಕಾರಕ್ಕೆ ಏಕೆ ಕೊಡಿಸುವುದಕ್ಕೆ ಆಗುತ್ತಿಲ್ಲ? ಯಾವ ಕಾರಣಕ್ಕೆ ಕೊಡಿಸುವುದಕ್ಕೆ ಆಗುತ್ತಿಲ್ಲ? ನಮಗೆ ಸಂಶಯ ಬರುತ್ತದೆ, ಆ ಸಂಶಯಕ್ಕೆ ಎಡೆಮಾಡಿಕೊಡಬೇಡಿ, ರೈತರಿಗೆ ಕಣ್ಣೀರು ಹಾಕಿಸುವುದಕ್ಕೆ ಬಿಡಬೇಡಿ, ರೈತ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಬಿಡಬೇಡಿ. ಈ ಕೂಡಲೇ ಸರ್ಕಾರ ಮಧ್ಯಸ್ಥಿಕೆ ವಹಿಸಿ ರೈತರಿಗೆ ಕೊಡಿಸುವಂಥ ವ್ಯವಸ್ಥೆ ಮಾಡಿ. ಕೊಡಿಸುವುದಕ್ಕೆ ನಿಮ್ಮ ಕಡೆಯಿಂದ ಆಗುವುದಿಲ್ಲ, ಅವರ ಜೋಡಿ ನಾವು ನಿಷ್ಠುರ ಆಗುವುದಕ್ಕೆ ಆಗುವುದಿಲ್ಲ, ಅವರು ನಮ್ಮದು ಬಾಂದವ್ಯ ಬಹಳ ಚೆನ್ನಾಗಿದೆ ಎನ್ನುವುದಾದರೆ, ಸರ್ಕಾರದ ಖಜಾನೆಯಿಂದ ಕೊಡಿ. ಹೇಗಿದ್ದರೂ 1 ಲಕ್ಷದ 42 ಸಾವಿರ ಕೋಟಿ ರೂ.ಗಳ ಬಜೆಟ್ ಮಂಡಿಸಿದ್ದೀರಿ, ಅದರಿಂದ ನಾಲ್ಕು ಸಾವಿರ ಕೋಟಿ ರೂ.ಗಳನ್ನು ತೆಗೆದು ಕೊಟ್ಟುಬಿಡಿ. ನೀವು ಆಮೇಲೆ ಅವರ ಕಡೆಯಿಂದ ತೆಗೆದುಕೊಳ್ಳಿ ಅಥವಾ ಬಿಟ್ಟುಬಿಡಿ. ಅದನ್ನು ಕೊಟ್ಟು ರೈತರ ಋಣ ತೀರಿಸಿ. ಪಾಪ ಕಷ್ಟಪಟ್ಟು ರೈತರು ಕಬ್ಬನ್ನು ಬೆಳೆದಿದ್ದಾರೆ. ಇವತ್ತು ಅವರಿಗೆ ಕೊಡದೇ ಹೋದರೆ ಸರ್ಕಾರ ರೈತರಿಗೆ ದ್ರೋಹ ಮಾಡಿದಂತದಾಗುತ್ತದೆ ಎಂದು ನಾವು ಹೇಳಬೇಕಾಗುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ. ಇನ್ನು ಆರೋಗ್ಯ ಇಲಾಖೆ ಬಗ್ಗೆ ಹೇಳಬೇಕೆಂದರೆ, ಆರೋಗ್ಯ ಸಚಿವರೆ ನಾನು ನನ್ನ ಅನುಭವದಲ್ಲಿ ಮಾತನಾಡುತ್ತೇನೆ, ಸುಮ್ಮನೆ ಏನಾದರೂ ಮಾತನಾಡುತ್ತೇನೆ ಎಂದು ತಿಳಿದುಕೊಳ್ಳಬೇಡಿ. ಸೌತ್ ಆಫ್ರಿಕಾದಲ್ಲಿ

ವರ್ಣಭೇದ ನೀತಿಯಿದೆ. ಆ ವರ್ಣಭೇದ ನೀತಿಗೆ Apartheid ಎಂದು ಹೇಳುತ್ತಾರೆ. Apartheid ಎಂದರೆ ಅಭಿವೃದ್ಧಿ ಮಾಡು ಎಂದು ಹೇಳಿ ಅವರ ಭಾಷೆಯಲ್ಲಿ ಅರ್ಥ. ನಾವು ಕನ್ನಡದಲ್ಲಿ ಹೇಗೆ 'ಅಭಿವೃದ್ಧಿ' ಎಂದು ಹೇಳುತ್ತೇವೋ ಅದೇ ರೀತಿ ಅವರ ಭಾಷೆಯಲ್ಲಿ Apartheid ಎನ್ನುತ್ತಾರೆ. ಕರಿಯರಿಗೇ ಒಂದು ನೀತಿ, ಬಿಳಿಯರಿಗೇ ಒಂದು ನೀತಿ. ಅತ್ಯಂತ ಅಮಾನವೀಯ ನೀತಿಯದು. ವಿಶ್ವದಲ್ಲಿ ಯಾವುದಾದರೂ ರಾಷ್ಟ್ರದಲ್ಲಿ ಈ ನೀತಿಯಿದೆಯೆಂದರೆ ಅದು ಸೌತ್ ಆಫ್ರಿಕಾದಲ್ಲಿದೆ. ನೀವು ಹೋಗಿ ಬಂದಿದ್ದೀರೆಂದು ಕಾಣಿಸುತ್ತದೆ. ಅದಕ್ಕಾಗಿ ನಿಮಗೆ ನಾನು ಹೇಳುತ್ತಿದ್ದೇನೆ. ಆ ನೀತಿಯೇನೆಂದರೆ, ಬಿಳಿಯರನ್ನು ಅಭಿವೃದ್ಧಿ ಮಾಡು, ಕರಿಯರನ್ನು ಶೋಷಣೆ ಮಾಡು. ಬಿಳಿಯರನ್ನು ಅಭಿವೃದ್ಧಿ ಮಾಡಿ ಖುಷಿ ಪಡುವುದು, ಕರಿಯರಿಗೆ ಶೋಷಣೆ ಮಾಡಿ, ಅವರಿಗೆ ಕಣ್ಣೀರು ಹಾಕಿಸಿ, ಅದೊಂದು ರೀತಿಯಲ್ಲಿ ಆನಂದ ಪಡುವುದು. ಇಂಥ ಒಂದು ನೀತಿಯದು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 67 ವರ್ಷಗಳು ದಾಟಿದೆ. ಉತ್ತರ ಕರ್ನಾಟಕದಲ್ಲಿ ಮನುಷ್ಯರು ಇದ್ದಾರೆಂಬುದು ನಿಮಗೆ ತಿಳಿದೇ ಇಲ್ಲವೇನು? ಮಾನ್ಯ ಆರೋಗ್ಯ ಸಚಿವರೆ. ತುಮಕೂರು ದಾಟಿದ ಮೇಲೆ, ಚಿತ್ರದುರ್ಗ ದಾಟಿದ ಮೇಲೆ, ಮನುಷ್ಯರು ಇದ್ದಾರೆಂಬುದು ನಿಮಗೆ ಗೊತ್ತಿಲ್ಲವೇನು? ಅಲ್ಲೇನು ಕಾಡುಪ್ರಾಣಿಗಳು ಇವೆಯೆಂದು ತಿಳಿದುಕೊಂಡಿದ್ದೀರೇನು? ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ, ಈ ಸರ್ಕಾರಕ್ಕೆ ಶಾಪ ಕೊಡುತ್ತೇನೆ. ನನಗೆ H_1N_1 ಆಯಿತು. ನಿಮ್ಮ ಆರೋಗ್ಯ ಇಲಾಖೆಯ ಒಬ್ಬ ಅಧಿಕಾರಿ, ನಿಮ್ಮ ಕಮಿಷನರ್ ಹಿಡಿದು ಹಳ್ಳಿಯೊಳಗಿರತಕ್ಕಂಥ ಮೆಡಿಕಲ್ ಆಫೀಸರ್‌ವರೆಗೂ ಇವತ್ತಿನವರೆಗೂ ನಿಮಗೆ ಏನಾಗಿತ್ತು ಎಂದು ಯಾರೂ ನನ್ನನ್ನು ಕೇಳಲಿಲ್ಲ. ನಾನು ಈ ಮನೆಯ ಸದಸ್ಯ, ನಾನು ಕೂಡ ಈ ಸದನದಲ್ಲಿ ಹಿರಿಯ ಸದಸ್ಯನಾಗಿದ್ದೇನೆ, ಒಂದು ಪಕ್ಷದಲ್ಲಿ ಮುಖಂಡರ ಲೈನ್‌ನಲ್ಲಿ ಕುಳಿತಿದ್ದೇನೆ. ಇವರಿಗೇನಾದರೂ ಮನುಷ್ಯತ್ವ ಇದೆಯೇ ಸರ್ಕಾರ ನಡೆಸುವುದಕ್ಕೆ ನೀವು ಯೋಗ್ಯರೇ ಎಂಬುದನ್ನು ಆಲೋಚನೆ ಮಾಡಿ. ನನಗೆ H_1N_1 ಆಯಿತು, 27 ನೇ ತಾರೀಖಿಗೆ ಮುಧೋಳದಲ್ಲಿ ಜ್ವರ ಬಂತು. ನನ್ನ ಮಗನ classmate ಒಬ್ಬ ಅಲ್ಲಿ ಡಾಕ್ಟರ್

ಇದ್ದಾನೆ. ನಾನು ಅವನನ್ನು ಫೋನ್ ಮಾಡಿ ಕರೆಸಿಕೊಂಡೆ. ಅವನು ಮೆಡಿಕಲ್ ಆಫೀಸರ್ ಅಲ್ಲ, ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಾನೆ. ಆತ ಬಂದು ನೋಡಿದ. ಜ್ವರ ಎಂದ ಕೂಡಲೇ ಕೆಲವು ಟ್ಯಾಬ್ಲೆಟ್ಸ್ ಕೊಟ್ಟ, ಕೆಮ್ಮಿಗೆ ಸ್ವಲ್ಪ ಔಷಧ ಕೊಟ್ಟ, ಅದನ್ನು ತೆಗೆದುಕೊಂಡೆ. ನಂತರ ಅವನು usual ಆಗಿ ಸೀನಿಯರ್ ಡಾಕ್ಟರ್‌ಗಳಿಗೆ consult ಮಾಡಿ ಕೇಳಿದ. ಮಾರನೇ ದಿವಸ ಮತ್ತೆ ಬಂದು ಅಂಕಲ್ ನಿಮಗೆ ಆರಾಮಾಗಿದೆ ಏನು? ಎಂದು ಕೇಳಿದ. ಅದಕ್ಕೆ ನಾನು ಜ್ವರ ನಿಂತಿದೆ, ಈಗ ಏನಿಲ್ಲ, ಆರಾಮಾಗಿದ್ದೇನೆ ಎಂದು ಹೇಳಿದೆ. ಹಾಗಾದರೆ ಕೆಮ್ಮುತ್ತೀರಲ್ಲ ಏಕೆ? ಎಂದು ಕೇಳಿದ. ನಾನು ಅದಕ್ಕೆ ಏಕೋ ಗೊತ್ತಿಲ್ಲಪ್ಪ, ಇನ್ನು ಏನಾದರೂ ಸ್ವಲ್ಪ antibiotic ಕೊಡು ಎಂದು ನನ್ನ ತಿಳುವಳಿಕೆ ಪ್ರಕಾರ ಅವನಿಗೆ ಹೇಳಿದೆ. ಆತ ಏಕೋ ನನಗೆ ಸಂಶಯ ಬರುತ್ತಿದೆ, ನೀವು ಇಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಮಾಡಿದ್ದೀರಿ, ನಾನು ಪೇಪರ್ ನೋಡಿದಾಗ ನಾಲ್ಕೈದು ದಿವಸ ಪೇಪರ್‌ನಲ್ಲಿ ನಿಮ್ಮ ಫೋಟೋಗಳು ಇದ್ದವು, ನೀವು ಅಲ್ಲಿ ಇಲ್ಲಿ slum ನಲ್ಲಿ ಹೋಗಿ ಬಂದಿದ್ದೀರಿ. ಮುಧೋಳದಲ್ಲಿ H_1N_1 ಪ್ರಾರಂಭವಾಗಿದೆ, ಈಗಾಗಲೇ ನಾಲ್ಕು ಜನರಲ್ಲಿ notice ಆಗಿದೆ. ಅದಕ್ಕೆ ಸ್ವಲ್ಪ ಟೆಸ್ಟ್ ಮಾಡಬೇಕೆಂದು ಹೇಳಿದ, ನಾನು ಮಾಡು ಎಂದು ಹೇಳಿದೆ. ಅವನು ಅದಕ್ಕೆ ನಮ್ಮ ಹತ್ತಿರ ವ್ಯವಸ್ಥೆ ಇಲ್ಲ, ಸರ್ಕಾರಿ ಆಸ್ಪತ್ರೆಯಲ್ಲಿ ಒಬ್ಬ ಟ್ರೇನಿಂಗ್ ತೆಗೆಮುಕೊಂಡಿರುವವನು ಇದ್ದಾನೆ ಎಂದು ಹೇಳಿದ. ಆ ಟ್ರೇನಿಂಗ್ ತೆಗೆದುಕೊಂಡಿರುವವನನ್ನು ಕರೆದುಕೊಂಡು ಬಂದು, 28ನೇ ತಾರೀಖು ಸಂಜೆ throat swab ತೆಗೆದುಕೊಂಡು ಹೋದರು. Tarining ತೆಗೆದುಕೊಂಡಿರುವವನನ್ನು ನಿಮ್ಮ ಸರ್ಕಾರಿ ಅಧಿಕಾರಿಗಳಿಗೆ ಗೊತ್ತು ಮಾಡಿ ಕರೆದುಕೊಂಡು ಬರಬೇಕಾಗುತ್ತದೆ, ಅವನನ್ನು ಹಾಗೆ ಕರೆದುಕೊಂಡು ಬಂದಿಲ್ಲ. ಉತ್ತರ ಕರ್ನಾಟಕದಲ್ಲಿ laboratory ಗಳು ಎಲ್ಲಿಯೂ ಇಲ್ಲ. ಬೆಂಗಳೂರಿನಲ್ಲಿ ಮೂರು laboratory ಗಳು ಇವೆ ಎಂದು ನಾನು ಕೇಳಿದ್ದೇನೆ. ಒಂದು ಮಣಿಪಾಲ್ ಆಸ್ಪತ್ರೆಯಲ್ಲಿ, ಇನ್ನೊಂದು ನಿಮ್ಹಾನ್ಸ್‌ನಲ್ಲಿ, ಮತ್ತೊಂದು ಪ್ರೈವೇಟ್ ಆಸ್ಪತ್ರೆಯಲ್ಲಿ ಇದೆ. ನಮ್ಮ ರಾಜ್ಯದಲ್ಲಿ H_1N_1 ಟೆಸ್ಟ್ ಮಾಡುವುದಕ್ಕೆ ನಮ್ಮ ಸರ್ಕಾರದಲ್ಲಿ ಇರುವಂಥಾದ್ದು ಒಂದೇ ಒಂದು laboratory. ನಾನು

ಮಹಾರಾಷ್ಟ್ರಕ್ಕೆ ಹೋಗಬೇಕಾಗಿತ್ತು ಕೊಲ್ಲಾಪುರದ ಗಢ್‌ಹಿಂಗ್ಲೇಜ್‌ದಲ್ಲಿ ಕಾರ್ಯಕ್ರಮ ಇತ್ತು, ಅದನ್ನು ಮುಗಿಸಿಕೊಂಡು 3ನೇ ತಾರೀಖಿಗೆ ನಾನು ಬೆಂಗಳೂರು ಮುಟ್ಟಿದೆ. ನಾನು 4ನೇ ತಾರೀಖು ಬೆಳಿಗ್ಗೆ 7 ರಿಂದ 8 ಗಂಟೆ ಸಮಯದಲ್ಲಿ ವಾಕಿಂಗ್ ಮಾಡುತ್ತಿದ್ದೆನು. 8 ಗಂಟೆ 5 ನಿಮಿಷಕ್ಕೆ ನನಗೆ ಮಣಿಪಾಲ್ ಆಸ್ಪತ್ರೆಯಿಂದ ಫೋನ್ ಬರುತ್ತದೆ. ಅವರು ನಿಮ್ಮ throat swab samples ತೆಗೆದುಕೊಂಡಿದ್ದರೆ? ಎಂದು ಕೇಳಿದರು. ಅದಕ್ಕೆ ನಾನು 'ಹೌದು' ಎಂದು ಹೇಳಿದೆ. ಅಂಕಲ್ ನಿಮಗೆ H_1N_1 positive ಬಂದಿದೆ, ನೀವು ತಕ್ಷಣ treatment ಗೆ ಹೋಗಿ, ಇಲ್ಲವೆಂದರೆ ನಮ್ಮ ಆಸ್ಪತ್ರೆಗೆ ಬನ್ನಿ, ನಾವು treatment ಪ್ರಾರಂಭ ಮಾಡುತ್ತೇವೆಂದು ಹೇಳಿದರು. ನಾನು ಬಂದು ಆಸ್ಪತ್ರೆಯಲ್ಲಿ ಮಲಗಿಕೊಂಡೆನು. ಅವರು ಮಾಹಿತಿಯನ್ನು laboratory ಒಳಗಡೆ ತೆಗೆದುಕೊಂಡರೋ, ಎಲ್ಲಿ ತೆಗೆದುಕೊಂಡರೋ, ಎಲ್ಲಾ ಮಾಹಿತಿಯನ್ನು ತೆಗೆದುಕೊಂಡರು. ಟಿ.ವಿ.ಯಲ್ಲೆಲ್ಲಾ ಗೋವಿಂದ ಕಾರಜೋಳ ರವರಿಗೆ H_1N_1 ಬಂದಿದೆ ಎಂದು ಹಾಕುವುದಕ್ಕೆ ಪ್ರಾರಂಭ ಮಾಡಿದರು. ಇಡೀ ರಾಜ್ಯದಲ್ಲಿ ಜನ ಆತಂಕದಿಂದ ಫೋನ್ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಐದು ದಿವಸ ನಾನು ಪ್ರೈವೇಟ್ ಆರ್‌ಎಂವಿ ಆಸ್ಪತ್ರೆಯಲ್ಲಿ ಮಲಗಿಕೊಂಡೆನು. ಅದಕ್ಕೆ ಹತ್ತು ಟ್ಯಾಬ್ಲೆಟ್ಸ್ ಬರುತ್ತದೆ, ಅದನ್ನು ಐದು ದಿವಸ ಬೆಳಿಗ್ಗೆ ಒಂದು, ಸಾಯಂಕಾಲ ಒಂದು ತೆಗೆದುಕೊಳ್ಳಬೇಕೆಂದು ಹೇಳಿದರು. ಆ ಟ್ಯಾಬ್ಲೆಟ್ ಹೆಸರು ಟ್ಯಾಮಿಫ್ಲೂ ಎಂದು ಹೇಳಿದರು. ಆ ಟ್ಯಾಬ್ಲೆಟ್ ಮಾರ್ಕೆಟ್‌ನಲ್ಲಿ ಸಿಗುತ್ತಿಲ್ಲ. ಮತ್ತೆ ಅದನ್ನು ಹುಡುಕಾಡಿ, ಸರ್ಕಾರಿ ಆಸ್ಪತ್ರೆಯಿಂದ ತೆಗೆದುಕೊಂಡು ಬಂದು, ಡಾಕ್ಟರ್ ಚಿಕಿತ್ಸೆ ಕೊಟ್ಟರು. ಅವತ್ತಿನಿಂದ ಇವತ್ತಿನವರೆಗೂ ಜನ ಸಾಮಾನ್ಯರಿಗೆ, ದುಡಿದುಕೊಂಡು ತಿನ್ನುವ ಹಳ್ಳಿ ಜನರಿಗೆ, ಇವರೇನು treatment ಕೊಡುತ್ತಾರೆ? ಇವರು ಕೊಡುವುದಕ್ಕೆ ಸಾಧ್ಯವೇ ಇಲ್ಲ. ಇವರು ಜನರನ್ನು ಕೊಲ್ಲುತ್ತಾರೆ. ದೇವರ ದಯೆಯಿಂದ ಬೇಸಿಗೆ ಬಂದಿದ್ದು, ಆ ವೈರಸ್ ಬಿಸಿಲಿಗೆ ಸತ್ತು ಹೋಗುತ್ತದೆ. ಜನ ಬದುಕುತ್ತಾರೆ, ಇಲ್ಲವೆಂದರೆ ಬದುಕುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಉಪಾಧ್ಯಕ್ಷರೆ, ನಾನು ಏಕೆ ಈ ಮಾತನ್ನು ನೋವಿನಿಂದ ಹೇಳುತ್ತೇನೆಂದರೆ ಒಬ್ಬರಿಗಾದರೂ ಕಳಕಳಿ ಅಥವಾ ಕಾಳಜಿ ಇದೆಯೇ?

ಒಬ್ಬರಾದರೂ ಫೋನ್ ಮಾಡಬೇಕಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನಿಮಗೆ ಜ್ವರ ಬಂದಿದೆ ಎಂದು ಹೇಳುತ್ತಿದ್ದಾರೆ, ಹೇಗಿದ್ದೀರಿ ಎಂದು ನನಗೆ ಕೇಳಿದರು, ಅದಕ್ಕೆ ನಾನು ಈಗ ಅರಾಮಾಗಿದೆ ಎಂದು ಹೇಳಿದೆ. ನಾನು ಏಕೆ ಈ ಮಾತನ್ನು ಹೇಳಿದೆ ಎಂದರೆ ನನ್ನದೇ ಪರಿಸ್ಥಿತಿ ಈ ರೀತಿಯಾದರೆ, ನಮ್ಮ ಹಳ್ಳಿಯ ಅನಕ್ಷರಸ್ಥ ಜನ, ಮುಂದಿನ ಊರು ಗೊತ್ತಿರಲಾದಂಥ ಜನ, ಹೇಗೆ ಬದುಕುವುದಕ್ಕೆ ಸಾಧ್ಯವಿದೆ? ನಾನು ಸ್ನೇಹಿತರಾದ ಯು.ಟಿ. ಖಾದರ್‌ರವರಿಗೆ ಹೇಳುವುದಕ್ಕೆ ಬಯಸುತ್ತೇನೆ. ನಿಮ್ಮ ಅಧಿಕಾರಿಗಳಿಗೆ, ನಮ್ಮ ಕಡೆ ಕುದುರೆಗಳಿಗೆ ಹೊಡೆಯುವುದಕ್ಕೆ ಗೋಡ್ರಾಕ್ ಎಂದು ಚರ್ಮದಿಂದ ಮಾಡುತ್ತಿದ್ದರು, ಅದರಿಂದ ಹೊಡೆದರೆ ಮೈಮೇಲೆ ತೂತು ಬೀಳುತ್ತಿತ್ತು, ಅಂತಹದೊಂದು ಗೋಡ್ರಾಕ್ ಮಾಡಿ, ಕುದುರೆಗೆ ಹೊಡೆದ ಹಾಗೆ ಹೊಡೆದು, ಅವರಿಗೆ ಕೆಲಸಕ್ಕೆ ಹಚ್ಚಿರಿ. ಅವರು ಏನು ಕೆಲಸ ಮಾಡುತ್ತಾರೆ? ಲಕ್ಷ ಲಕ್ಷ ರೂಪಾಯಿ ಪಗಾರ ಕೊಡುತ್ತೇವೆ, ಸೌಲಭ್ಯಗಳನ್ನು ಕೊಡುತ್ತೇವೆ, ಏನು ಕೆಲಸ ಮಾಡುತ್ತಾರೆ ಅವರು. ನಾನು ಬಹಳ ನೋವಿನಿಂದ ಹೇಳುತ್ತೇನೆ. ಇವರು ಆರೋಗ್ಯ ಇಲಾಖೆಯಿಂದ 'ಎಲ್ಲರಿಗೂ ಎಲ್ಲೆಡೆಯೂ ಆರೋಗ್ಯ' ಎಂದು ಘೋಷಣೆ ಮಾಡುತ್ತಾರೆ. ಅದು ಎಲ್ಲಿಯೂ ಇಲ್ಲ. ಇಲ್ಲಿ ನಮ್ಮ ಲೋಕೋಪಯೋಗಿ ಮಂತ್ರಿಗಳು ಇದ್ದಾರೆ, ಅವರೊಬ್ಬರಿಗೆ ಬಿಟ್ಟು ಅವರ ಮನೆಯಲ್ಲಿ ಎಲ್ಲರಿಗೂ H_1N_1 ಆಗಿದೆ. ಅವರ ಮನೆಯಲ್ಲಿ ಎರಡೂವರೆ ವರ್ಷದ ಮಗುವಿಗೂ ಕೂಡ H_1N_1 ಆಗಿದೆ. ನಾನು ಆಸ್ಪತ್ರೆಯಲ್ಲಿ ಮಲಗಿಕೊಂಡಾಗ ಎಲ್ಲರೂ ಕೂಡ ಅವರಿಗೂ ಆಗಿದೆ ಎಂದು ಹೇಳಿದರು. ಅವರು ದೊಡ್ಡವರು ಇದ್ದಾರೆ, ಒಂದೂವರೆ ಲಕ್ಷ, ಅಥವಾ ಎರಡು ಲಕ್ಷ ರೂಪಾಯಿ ಖರ್ಚು ಮಾಡಿ ಆರೋಗ್ಯ ಸುಧಾರಣೆ ಮಾಡಿಸಿಕೊಂಡಿದ್ದಾರೆ, ಅವರು ಹೊರಗಡೆ ಎಲ್ಲಿಯೂ ಹೇಳಿಲ್ಲ ಎಂದು ನಾನು ಹೇಳಿದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಮಹದೇವಪ್ಪನವರಿಗೆ ಆಗಲಿಲ್ಲ.

ಶ್ರೀ ಗೋವಿಂದ ಎಂ ಕಾರೋಳ:– ಮಹದೇವಪ್ಪನರೊಬ್ಬರಿಗೆ ಬಿಟ್ಟು ಎಂದು ಹೇಳಿದೆನಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಅದರ ಗುಟ್ಟೇನು ಎಂದು ಕೇಳಬೇಕಲ್ಲ.

ಡಾ॥ ಹೆಚ್.ಸಿ. ಮಹದೇವಪ್ಪ:– Resistance power ಜಾಸ್ತಿ ಇದ್ದುದ್ದರಿಂದ ಅದರ ಆಟ ನಡೆಯಲಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನೀವು ಅದರ ಬಗ್ಗೆ ಹೇಳಿಕೊಳ್ಳುವ ಅವಶ್ಯಕತೆಯಿಲ್ಲ, ನಿಮ್ಮ ಪವರ್ ಏನು ಎಂದು ಇಡೀ ರಾಜ್ಯಕ್ಕೆ ಗೊತ್ತಿದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಪಿ.ಹೆಚ್.ಸಿ.ಗಳ ಪರಿಸ್ಥಿತಿ ಏನಾಗಿದೆ ಎಂದರೆ, ಇವರು ಬಜೆಟ್‌ನಲ್ಲಿ ಇಟ್ಟಿರುವುದು. . .

ಡಾ॥ ಹೆಚ್.ಸಿ. ಮಹದೇವಪ್ಪ:– Resistance power ಜಾಸ್ತಿ ಇದ್ದರೆ, ಆ virus ಹರಡುವುದಿಲ್ಲ. Preliminary stage ನಲ್ಲಿ identify ಮಾಡಿ diagnose ಮಾಡಿದರೆ easy ಆಗಿ treatment ಕೊಡಬಹುದು. ಇಲ್ಲಿ ಏನಾಗಿದೆ ಎಂದರೆ it is a mightier form of influenza. ಇದು ಗಾಳಿಯಿಂದ ಪ್ರಸಾರವಾಗುತ್ತದೆ. ಎಲ್ಲಾ ಜನ H_1N_1 ಎಂದು ಗಾಬರಿಯಾಗುತ್ತಾರೆ. ಸಾಕಷ್ಟು ಟ್ಯಾಮಿಫ್ಲೂ ಟ್ಯಾಬ್ಲೆಟ್ಸ್ ಸರ್ಕಾರ ಕೊಡುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಹಾಗೂ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ 'Government will standby our people to protect their health' ಎಂದು ಹೇಳಿದ್ದಾರೆ. ನಮ್ಮ ಮಾನ್ಯ ಹಿರಿಯ ಮುಖಂಡರಾದಂತಹ ಕಾರಜೋಳ ರವರಿಗೂ ಆಗಿತ್ತು ಎಂದು ನಾನು ಕೇಳಿದೆ. ಆಮೇಲೆ ಅದಕ್ಕೆ ಗಾಬರಿ ಆಗುವುದು ಬೇಕಿಲ್ಲ. ನಮ್ಮ ಮೊಮ್ಮಗ 18 ತಿಂಗಳು. ಆ ಮಗುವಿಗೆ ಆಗಿದೆ. ನಾನು ಗಾಬರಿಯಾಗಲಿಲ್ಲ. ಅದಕ್ಕೆ throat swab test ಮಾಡಿಸಿದೆವು. ಅದಕ್ಕೆಂದು ನಾರಾಯಣ ನೇತ್ರಾಲಯ, ನಿಮ್ಹಾನ್ಸ್ ಮತ್ತು ಮಣಿಪಾಲ್ ಮೂರು ಕಡೆ ಸೆಂಟರ್ ಇವೆ. ಇನ್ನೂ ನಾಲ್ಕಾರು ಕಡೆ ಪ್ರಾರಂಭ ಮಾಡಬೇಕೆಂದು ಸರ್ಕಾರ ಯೋಜನೆ ಮಾಡಿ ಕ್ರಮ ತೆಗೆದುಕೊಳ್ಳುತ್ತಿದೆ, sufficient tablets ಇದೆ. ಇದನ್ನು preliminary stage ನಲ್ಲಿ diagnose ಮಾಡಿ,

ಮುಖ್ಯವಾಗಿ ಅದಕ್ಕೆ pulmonary ಹಾಗೂ respiratory ಬಗ್ಗೆ ಸರಿಯಾಗಿದೆಯೇ ಎಂದು ನೋಡಿಕೊಳ್ಳಬೇಕು. ಇಲ್ಲದಿದ್ದರೆ ಅದು ನ್ಯೂಮೋನಿಯವಾದರೆ ಆತಂಕ ಪಡುವಂಥಾದ್ದು ಆಗುತ್ತದೆ. H_1N_1 ಬಂದ ತಕ್ಷಣ ಆತಂಕ ಪಡುವ ಅವಶ್ಯಕತೆಯಿಲ್ಲ. ಸರ್ಕಾರ ಸಾಕಷ್ಟು ಟ್ಯಾಮಿಫ್ಲೂ ಟ್ಯಾಬ್ಲೆಟ್ ಅನ್ನು stock ಇಟ್ಟುಕೊಂಡಿದ್ದಾರೆ. ಅದಕ್ಕೆ ಗಾಬರಿಯಾಗದ ರೀತಿಯಲ್ಲಿ ಹೆಚ್ಚು ಪ್ರಚಾರ ಕೊಡಬೇಕು. ಮಾನ್ಯ ಶಾಸಕರು ಗುಣಮುಖರಾಗಿದ್ದಾರೆ, ಸಂತೋಷ. ಅದಕ್ಕೆ ಗಾಬರಿ ಪಡಬೇಕಾದಂತಹ ಅಗತ್ಯವಿಲ್ಲ. ಅದರ ಮುಖಾಂತರ H_1N_1 ಗೇನೂ ಹೆದರಬೇಡಿ, ಗಾಬರಿಯಾಗಬೇಕಾದಂತಹ ಅಗತ್ಯವಿಲ್ಲ, ಇದು ವಾಸಿ ಮಾಡುವುದಕ್ಕೆ ಯೋಗ್ಯವಾಗಿರುವಂತಹ ಕಾಯಿಲೆ. ಪದೇ ಪದೇ ವೈರಸ್ ತನ್ನ strain ಅನ್ನು ಕಾಲಕಾಲಕ್ಕೆ ಬದಲಾವಣೆ ಮಾಡುತ್ತಿರುತ್ತದೆ ಎಂದು ಜನರಿಗೆ ಈ ವೇದಿಕೆ ಮುಖಾಂತರ ಸರ್ಕಾರ ತಿಳಿಸುವುದಕ್ಕೂ ಸಾಧ್ಯವಾಯಿತು. ಸರ್ಕಾರ ಅಗತ್ಯವಿರುವಂತಹ ಔಷಧಿಗಳನ್ನು ಸಂಪೂರ್ಣವಾಗಿ ಸಂಗ್ರಹ ಮಾಡಿಕೊಂಡು ಜನರ ಆರೋಗ್ಯವನ್ನು ರಕ್ಷಣೆ ಮಾಡುತ್ತದೆ ಎಂದು ಈ ಸದನದ ಮೂಲಕ ಹೇಳುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ:- ಡಿಡಿಟಿ ಹೊಡೆಯುವುದಕ್ಕೆ ಪ್ಯಾರಾ ಮೆಡಿಕಲ್ ಸ್ಟಾಫ್ ಇಲ್ಲ. ನೀವು ಹೇಗೆ eradicate ಮಾಡುತ್ತೀರಿ?

ಡಾ|| ಹೆಚ್.ಸಿ. ಮಹದೇವಪ್ಪ:- ಹಿಂದೆ ಬಹಳಷ್ಟು ವರ್ಷಗಳ ಕಾಲ ನೀವೂ ಕೂಡ ಅಲ್ಲಿಯೇ ಕೆಲಸ ಮಾಡಿದವರು. ನಿಮಗೆ ಅನುಭವ ಇದೆ. ಈಗ ಇರುವಂತಹ 50 ಸಾವಿರ ಪ್ಯಾರಾ ಮೆಡಿಕಲ್ ಸ್ಟಾಫ್ ಹುದ್ದೆಗಳಲ್ಲಿ 45 ರಿಂದ 48 ಸಾವಿರ ಪ್ಯಾರಾ ಮೆಡಿಕಲ್ ಸ್ಟಾಫ್ ಕೆಲಸ ಮಾಡುತ್ತಿದ್ದಾರೆ. ಇನ್ನು 4-5 ಸಾವಿರ ಹುದ್ದೆಗಳು ಖಾಲಿ ಇವೆ.

ಶ್ರೀ ಎಂ.ಟಿ. ಕೃಷ್ಣಪ್ಪ:- ಸ್ಯಾಂಕ್ಷನ್ಡ್ ಪೋಸ್ಟ್ ಇಲ್ಲವಲ್ಲ.

ಡಾ|| ಹೆಚ್.ಸಿ. ಮಹದೇವಪ್ಪ:- ಆರೋಗ್ಯ ಇಲಾಖೆಯಲ್ಲಿರುವಂತಹ ಹುದ್ದೆಗಳನ್ನು ತುಂಬುವುದಕ್ಕೆ ಯಾವ ಕಾಲದಲ್ಲೂ ಆರ್ಥಿಕ ಇಲಾಖೆಯಿಂದ ಯಾವುದೇ ನಿರ್ಬಂಧ ಇರುವುದಿಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ:- ಸಚಿವರಿಗೆ ಕೇಳಿ, ಎಷ್ಟು ಪೋಸ್ಟ್ ಖಾಲಿ ಇದೆ ಎಂದು ಹೇಳುತ್ತಾರೆ.

ಡಾ॥ ಹೆಚ್.ಸಿ. ಮಹದೇವಪ್ಪ:- ನಾನು ಅವರನ್ನು ಕೇಳದೆ ರಫ್ ಆಗಿ ಹೇಳಿದೆ.

ಉಪಾಧ್ಯಕ್ಷರು:- ಕಾರಜೋಳರವರೆ ಮಾತನಾಡಿ.

ಶ್ರೀ ಗೋವಿಂದ ಎಂ ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ಕಳೆದ ವರ್ಷ ಆರೋಗ್ಯ ಇಲಾಖೆಯಲ್ಲಿ 3,063 ಕೋಟಿ ರೂಪಾಯಿಗಳ ಬಜೆಟ್ ಇತ್ತು. ಕಳೆದ ತಿಂಗಳ ಕೊನೆಯವರೆಗೂ ಅವರು 1,672 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 2,071 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. Almost 55% expenditure ಆದ ಹಾಗೆ ಆಗಿದೆ. ನಾನು ಕೇಳುವುದೇನೆಂದರೆ, ನೀವು ದುಡ್ಡು ಇಟ್ಟಿದ್ದೀರಿ, ಆದರೆ ಆ ಹಣವನ್ನು ಖರ್ಚು ಮಾಡಿ ಜನರಿಗೆ ಆರೋಗ್ಯ ಕೊಡಬೇಕಲ್ಲ. ಮೆಡಿಕಲ್ ಆಫೀಸರ್ಸ್ ಅಂದರೆ ಏನಾಗಿದೆ ಎಂದರೆ ಅವರು ಸರ್ಕಾರದ ಆಸ್ಪತ್ರೆಯಲ್ಲಿ ಕುಳಿತು ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟ ಆಗಿದೆ. ಇನ್ನು ಕೆಲವರು ಖಾಸಗಿ ಆಸ್ಪತ್ರೆಗೆ ಹೋಗಿ ಎಂದು ಚೀಟಿ ಬರೆದು ಕಳುಹಿಸುತ್ತಾರೆ. ಅಲ್ಲಿ ಹೋಗಿ ಚಿಕಿತ್ಸೆ ಕೊಡುತ್ತಾರೆ. ನನ್ನ ಕ್ಷೇತ್ರದಲ್ಲಿ ಬಹಳ ಅಪಘಾತಗಳು ಜಾಸ್ತಿಯಾಗುತ್ತವೆ.

ಉಪಾಧ್ಯಕ್ಷರು:- ಸರ್ಕಾರಿ ವೈದ್ಯರು ಪ್ರೈವೇಟ್ ಪ್ರಾಕ್ಟೀಸ್ ಮಾಡಬಾರದು ಎಂದು ಹಿಂದೆ ಒಂದು ಸರ್ಕಾರಿ ಆದೇಶ ಇತ್ತು. ಅದನ್ನು re-invoke ಮಾಡುವುದು ಒಳ್ಳೆಯದು.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ನಾನು ಈಗ ಅದನ್ನೇ ಹೇಳುತ್ತಿದ್ದೇನೆ. ಅಲ್ಲಿ ಕುಳಿತು ಹಣ ಕೊಟ್ಟವರಿಗೆ ಒಂದಷ್ಟು practice ಮಾಡಿ, ಏನಾದರೂ ಕೊಟ್ಟು ಕಳುಹಿಸುತ್ತಾರೆ. ಅದು ಇಲ್ಲವೆಂದರೆ ಖಾಸಗಿ ಆಸ್ಪತ್ರೆಗೆ ಬಾ ಎಂದು ಹೇಳುತ್ತಾರೆ ಮತ್ತು ಒಂದು delivery ಯನ್ನೂ

ಸುರಕ್ಷಿತವಾಗಿ ಮಾಡುವುದಿಲ್ಲ, Cesarean ಮಾಡುತ್ತಾರೆ. ಇದಕ್ಕೆ ನಮ್ಮ ಹಳ್ಳಿಗಳಲ್ಲಿ ಸೂಲಗಿತ್ತಿಯರು ಇದ್ದರು.

ಶ್ರೀ ಯು.ಟಿ. ಖಾದರ್:- ಮಾನ್ಯ ಉಪಾಧ್ಯಕ್ಷರೆ, ಅವರು ಅವರ ಕ್ಷೇತ್ರಕ್ಕೆ ಸೀಮಿತವಾಗಿ ಹೇಳುತ್ತಿದ್ದಾರೆಯೇ? ಅಥವಾ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಹೇಳುತ್ತಿದ್ದಾರೆಯೇ? ಎಂಬುದು ಗೊತ್ತಾಗುತ್ತಿಲ್ಲ. ಬಹಳಷ್ಟು ಕಡೆಗಳಲ್ಲಿ ವ್ಯವಸ್ಥೆ ಚೆನ್ನಾಗಿ ಇದೆ, ಯಾರು ಕೆಲಸ ಮಾಡುತ್ತಿಲ್ಲವೆಂದು ಹೇಳುವುದು ಬೇಡ. ಕೆಲವು ಕಡೆಗಳಲ್ಲಿ 10% ಲೋಪದೋಷಗಳು ಇರುತ್ತದೆ. ಕೆಲಸ ಮಾಡುವವರೂ ಕೂಡ ಕೆಲಸ ಮಾಡದ ರೀತಿಯಲ್ಲಿ ಮಾಡುವಂತಹ ಪರಿಸ್ಥಿತಿ ಆಗುವುದು ಬೇಡ, ಏಕೆಂದರೆ ಕೆಲಸ ಮಾಡುವರಿಗೆ inspiration ಆಗುವ ಬದಲು ಕೆಲಸ ಮಾಡುವವನಿಗೆ ಕೆಲಸ ಮಾಡುತ್ತಿಲ್ಲ ಎಂದರೆ ಅವನೂ ಸಹ ಸುಮ್ಮನೆ ಕುಳಿತುಕೊಳ್ಳುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ:- ತಾವು ಕುಳಿತುಕೊಳ್ಳಿ, ಆ ರೀತಿ ಏನೂ ಆಗುವುದಿಲ್ಲ. ನಮ್ಮ ಮನೆಯಲ್ಲಿ ಐದು ಜನ ಡಾಕ್ಟರ್ ಇದ್ದಾರೆ. ನನ್ನ ಮಕ್ಕಳು ಇಬ್ಬರು ಡಾಕ್ಟರ್ ಆಗಿದ್ದಾರೆ. ಒಬ್ಬ Super Specialist ಆಗಿದ್ದಾರೆ, ಇಬ್ಬರು Assistant Surgeon ಇದ್ದರು, ಅವರು ಇಬ್ಬರೂ ರಾಜೀನಾಮೆ ಕೊಟ್ಟು ಬಂದಿದ್ದಾರೆ. ಅದು ನಿಮಗೆ ಗೊತ್ತಿಲ್ಲ ಒಬ್ಬ Super Specialist in Surgical Oncology ಇಲ್ಲೇ Vydegi Medical College ನಲ್ಲಿ ಮಾಡಿದ್ದಾನೆ. ನಾನು ಏನು ಹೇಳುತ್ತಿದ್ದೇನೆಂದರೆ, caesarean ಮಾಡುವುದು ಒಂದೇ ಕೆಲಸವೇ? ನಮ್ಮ ಹಳ್ಳಿಯಲ್ಲಿ ಸೂಲಗಿತ್ತಿಯರು ಇದ್ದರು. ಅವರಿಗೆ ಏನು ಕೊಡುತ್ತಿರಲಿಲ್ಲ, ಅದು ಪುಣ್ಯದ ಕೆಲಸವೆಂದು ಅವರು ಬಾಣಂತನ ಮಾಡಿಸುತ್ತಿದ್ದರು. ಇವರಿಗೆ ಏನಾಗಿದೆ? ಇವರಿಗೆ P.G., ಮಾಡಿಸಿ, ಓದಿ, ಸರ್ಕಾರದ ಸವಲತ್ತುಗಳನ್ನು ಕೊಟ್ಟು ಮಾಡಿದರೂ, caesarean ಮಾಡಬೇಕೆಂದು ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸಿದರೆ, ಇವರಿಗೆ ಏನು ಹೇಳಬೇಕು? ಆಸ್ಪತ್ರೆಗಳು ಸುಲಿಗೆ ಕೇಂದ್ರಗಳು ಆಗಿವೆ, ಅವು ಆಸ್ಪತ್ರೆಗಳಾಗಿ ಇಲ್ಲ. ನನ್ನ ಕ್ಷೇತ್ರದಲ್ಲಿ accident ಗಳು ಜಾಸ್ತಿ ಆಗುತ್ತದೆ, ಆಕ್ಸಿಡೆಂಟ್ ಆಗಿ 6

ಗಂಟೆ, 8 ಗಂಟೆಗಳಾದ ಮೇಲೆ post mortem ಮಾಡುವುದಕ್ಕೆ ಬರುವುದಿಲ್ಲ. ಸತ್ತವರ ಕುಟುಂಬದವರು ಹೆಣಕ್ಕಾಗಿ ಅಳುತ್ತಿದ್ದರೆ, ನಮ್ಮ ಕಡೆ ದುಗ್ಗಾಣಿಗೆ ಅಳುತ್ತಿದ್ದನೆಂದು ಹೇಳುತ್ತಾರೆ. ಅದನ್ನು ಇಲ್ಲಿ ಹೇಳಬಾರದು, ದುಗ್ಗಾಣಿ ಎಂದರೆ ದುಡ್ಡಿಗೆ ಅಳುವುದು, ಅವರು ಸತ್ತವರ ಹೆಣಕ್ಕೆ ಅತ್ತರೆ, ಇವನು ದುಗ್ಗಾಣಿಗೆ ಅಳುತ್ತಿದ್ದ. ಹೆಣ ಕೊಯ್ಯುವವರು ಬಹುಶ: Class-IV servant ಇರುತ್ತಾನೆ, ಅವನು ಡಾಕ್ಟರ್ direction ನಲ್ಲಿ ಹೆಣವನ್ನು ಕೊಯ್ಯುತ್ತಾನೆ. ಅವನಿಗೆ ಹಣ ಕೊಡದಿದ್ದರೆ ಆ ಕೆಲಸಕ್ಕೆ ಕೈ ಹಾಕುವುದಿಲ್ಲ. ಅವನಿಗೆ ಹಣ ಕೊಡಲಿಲ್ಲವೆಂದರೆ, ಹೆಣವನ್ನು open ಮಾಡಿಕೊಂಡು ಹಾಗೆ ಕುಳಿತಿರುತ್ತಾನೆ, ಅವನಿಗೆ ಹಣ ಕೊಟ್ಟ ನಂತರ ಹೊಲಿಗೆ ಹಾಕಿದ ಮೇಲೆ, ಮತ್ತೆ ಡಾಕ್ಟರ್‌ಗೆ ಎಂದು ಕೇಳುತ್ತಾನೆ. ಈಗ ಸತ್ತ ಹೆಣಕ್ಕೂ ಹಣ ಕೊಡುವಂಥ ಕೆಟ್ಟ ಪರಿಸ್ಥಿತಿ ಇದೆ. ಮಾನ್ಯ ಆರೋಗ್ಯ ಮಂತ್ರಿಯವರೆ, ತಾವು ಒಳ್ಳೆಯವರು ಇರಬಹುದು. ತಮ್ಮ ಒಳ್ಳೆತನ ಅಷ್ಟೇ ಸಾಕಾಗುವುದಿಲ್ಲ. ತಾವು ಸ್ಥಳಗಳಿಗೆ ಹೋಗಿ check ಮಾಡಿ, ಏಕೆ ವಿಳಂಬವಾಯಿತೆಂದು ಕೇಳಿ? ಏಕೆ ಶೋಷಣೆಯಾಯಿತೆಂದು ಕೇಳಿ? ಆ ಕೆಲಸ ಮಾಡಿದಾಗ ಮಾತ್ರ ಸರ್ಕಾರ...

ಶ್ರೀ ಯು.ಟಿ. ಖಾದರ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತಮ ಸಲಹೆ ಕೊಡುತ್ತಿದ್ದಾರೆ. ನಾನು ಸ್ವೀಕಾರ ಮಾಡುತ್ತೇನೆ. ನಾನು ಒಬ್ಬನೇ ರಾಜ್ಯದ 253 PHC ಕೇಂದ್ರಗಳನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಅಲ್ಲಲ್ಲಿ ನಮ್ಮ ಶಾಸಕ ಮಿತ್ರರು ಹೋಗಿ check ಮಾಡಿಕೊಂಡು writing ನಲ್ಲಿ complaint ಕೊಡಿ. ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಲ್ಲೇ ಶಾಸಕ ಮಿತ್ರರು ತಿಂಗಳಿಗೆ ಒಮ್ಮೆ ಮೀಟಿಂಗ್ ಮಾಡಿದರೆ, ಬಹಳಷ್ಟು ಸಮಸ್ಯೆಗಳು ಕಡಿಮೆಯಾಗುತ್ತದೆ, ಏನಾದರೂ ಹೆಚ್ಚು-ಕಡಿಮೆ ಇದ್ದರೆ writing ನಲ್ಲಿ ಕೊಟ್ಟರೆ, ಅಂಥವರ ಮೇಲೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ನಾನು ಈ ವಿಷಯವಾಗಿ ಮಾನ್ಯ ಆರೋಗ್ಯ ಸಚಿವರಿಗೆ ಸಾಕಷ್ಟು letter ಗಳನ್ನು ಕೊಟ್ಟಿದ್ದೇನೆ. ಯಾರೋ ಒಬ್ಬರು ಸೋತವರು, ಗೋವಿಂದ

ಕಾರಜೋಳರವರು ರಾಜಕಾರಣ ಮಾಡುತ್ತಾರೆ, ಅದರ ಸಲುವಾಗಿ ಕೊಟ್ಟಿದ್ದಾರೆಂದ ಕೂಡಲೇ ಅವರನ್ನು retention ಮಾಡುತ್ತಾರೆ. ಅದಕ್ಕೆ ಏಕೆ ಲೆಟರ್ ಕೊಡಬೇಕು? ಯಾವುದು ಸರಿ ಇಲ್ಲವೆಂದು ಕೊಟ್ಟಿದ್ದೇವೆ, ಅವರನ್ನು ಸರಿ ಮಾಡುವ ಕೆಲಸವನ್ನು ಮಾಡಬೇಕೋ? ಇಲ್ಲ ರಾಜಕಾರಣ ಮಾಡಿ, Ex-MLA ಹೇಳುತ್ತಾರೆಂದು ಅಲ್ಲಿ ಕೊಡಬೇಕೋ? ಈ ಪರಿಸ್ಥಿತಿ ಆದರೆ ಆರೋಗ್ಯ ಸುಧಾರಣೆ ಆಗುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ ಏನಾಗಿದೆಯೆಂದರೆ, ನಮ್ಮ ಉಸ್ತುವಾರಿ ಮಂತ್ರಿಗಳು, ಶಾಸಕರ ಜೊತೆಗೆ ಇಂಜಿನಿಯರ್‌ಗಳು ಹೋಗಬಾರದು ಎಂದು ಹೇಳುತ್ತಾರೆ. ಅಂತಹ ಪರಿಸ್ಥಿತಿ ಆಗಿದೆ. ಇಂಜಿನಿಯರ್‌ಗಳು ಶಾಸಕರ ಜೊತೆಗೆ ಹೋಗಬಾರದು, ಗುದ್ದಲಿ ಪೂಜೆ ಮಾಡಬಾರದು, ಈ ಪರಿಸ್ಥಿತಿ ನಮ್ಮಲ್ಲಿ ಒದಗಿ ಬಂದಿದೆ.

ಶ್ರೀ ಕೆ.ಜೆ. ಜಾರ್ಜ್:- ತಾವು ಏನು ಹೇಳಿದಿರಿ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಯವರು ಕೇಳಿಸಿಕೊಳ್ಳಲಿಲ್ಲವೆಂದು ಹೇಳುತ್ತಿದ್ದಾರೆ. ಪುನ: ಹೇಳುತ್ತೇನೆ. ಶಾಸಕರು ಎಲ್ಲೇ ಹೋಗುವುದಿದ್ದರೂ ಕೂಡ JE ಗಳೂ ಕೂಡ ಅವರೊಡನೆ ಹೋಗಬಾರದೆಂದು ಆದೇಶವಿದೆ. ನಾವು ಈ ಪರಿಸ್ಥಿತಿಯಲ್ಲಿ ಹೇಗೆ ಕೆಲಸ ಮಾಡಬೇಕೆಂಬುದನ್ನು ಯೋಚನೆ ಮಾಡಿ. ನಾನು privilege motion move ಮಾಡಬೇಕೆಂದು ಯೋಚನೆ ಮಾಡಿದೆ. ನಾನು ಅವರ ಜೊತೆಗೆ ಮಾತನಾಡಿದ ಮೇಲೆ, ಅದನ್ನು ಸರಿಪಡಿಸುತ್ತೇನೆಂದು ಹೇಳಿದರು. ಅದನ್ನು ಯಾವಾಗ ಸರಿಪಡಿಸುತ್ತಾರೆಂಬುದು ಗೊತ್ತಿಲ್ಲ, ಇಲ್ಲವೆಂದರೆ ಸೋತು ಹೋದ candidate ಅನ್ನು ಕರೆದುಕೊಂಡು ಬಂದು, ನೀವು ಕುಳಿತುಕೊಂಡು ಕೆಲಸ ಮಾಡಿಸಿ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಉಪಾಧ್ಯಕ್ಷರೆ, ನಾನು ಕೊಡಗಿನ ಉಸ್ತುವಾರಿ ಸಚಿವನಾಗಿದ್ದೇನೆ. ಶಾಸಕರು ಹೋಗುವ ಕಡೆಗೆ, ಯಾವುದೇ ಅಧಿಕಾರಿಗಳು ಹೋಗಬಾರದೆಂದು ನಾನು ಆದೇಶ ಹೊರಡಿಸಿಲ್ಲ. ನಾನು

ನಿಮ್ಮ ಜೊತೆಗೆ ಮಾತನಾಡಿದ್ದೇನೆ. ಈಗಾಗಲೇ ನಾವು ಒಂದನೇ ತಾರೀಖಿಗೆ meeting fix ಮಾಡಿಕೊಂಡಿದ್ದೇವೆ. ಶಾಸಕರ ಜೊತೆಗೆ ಅಧಿಕಾರಿಗಳು ಹೋಗಲೇ ಬೇಕಾಗುತ್ತದೆ. ಅವರು ಹೋಗಿ ಯಾವ್ಯಾವ ಕಾಮಗಾರಿಗಳು ಆಗುತ್ತಿವೆ ಎನ್ನುವ ಬಗ್ಗೆ ವಿವರಣೆ ಕೊಡಬೇಕಾಗುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ನಾನು ವಿಧಾನ ಸಭೆಗೆ ನಾಲ್ಕನೇ ಬಾರಿಗೆ ಆರಸಿ ಬಂದಿದ್ದೇನೆ. ನಾನು ಜೆ.ಡಿ.(ಎಸ್). ಸರ್ಕಾರದಲ್ಲೂ ನೋಡಿದ್ದೇನೆ, ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ನೋಡಿದ್ದೇನೆ, ನಮ್ಮ ಸರ್ಕಾರದಲ್ಲೂ ನೋಡಿದ್ದೇನೆ. ಆದರೆ ಈ ಸರ್ಕಾರ ಬಂದ ಮೇಲೆ ಈ ರೀತಿಯ ಕೆಲಸವನ್ನು ಮಾಡುತ್ತಿದ್ದಾರೆ. ತಾವು direction ಕೊಡಬೇಕು.

ಉಪಾಧ್ಯಕ್ಷರು:– Deny ಮಾಡಿದರಲ್ಲ. Direction ಕೊಡುತ್ತೇನೆ ಎಂದು ಅವರು ಹೇಳಿದರು.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ನಾನು ನನ್ನ ಮಾತನ್ನು ಬೇಗ ಮುಗಿಸುತ್ತೇನೆ, ಏಕೆಂದರೆ ತಾವು ಟೈಮ್ ಆಯಿತೆಂದು ಹೇಳುತ್ತೀರಿ.

ಉಪಾಧ್ಯಕ್ಷರು:– ತಾವು ಇನ್ನು 15 ನಿಮಿಷಗಳಲ್ಲಿ ಮುಗಿಸಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನೂ ಏನು ಮಾತನಾಡಿಲ್ಲ.

ಉಪಾಧ್ಯಕ್ಷರು:– ತಾವು ಬೇರೆ ಕಥೆ ಎಲ್ಲಾ ಹೇಳಿದರೆ ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಕಥೆ ಹೇಳಿಲ್ಲ, ಉದಾಹರಣೆಗಳನ್ನು ಹೇಳಿದೆ.

ಉಪಾಧ್ಯಕ್ಷರು:– ತಾವು ಏನಾದರೂ ಕಥೆ ಹೇಳಿದರೆ, ನಿಮ್ಮ ಸಮಯ ಹೋಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ಇಲ್ಲ, ಬೇಗ ಮುಗಿಸುತ್ತೇನೆ. ಇದುವರೆಗೆ Plan, non-plan expenditure 65% ಆಗಿದೆ. ಈ ವರ್ಷ 2015–16ನೇ ಸಾಲಿಗೆ ಆರೋಗ್ಯ ಇಲಾಖೆಗೆ 6,107 ಕೋಟಿ ರೂ.ಗಳ ಬಜೆಟ್ ಕೊಟ್ಟಿದ್ದಾರೆ. ಅದಕ್ಕೆ ನನ್ನ ಸಲಹೆ ಏನೆಂದರೆ ಜನರಿಗೆ ಉತ್ತಮವಾದಂಥ ಸೌಲಭ್ಯಗಳನ್ನು ಕೊಡಿ, ಡಾಕ್ಟರ್‌ಗಳನ್ನು ಕೊಡಿ, ಅವರನ್ನು ಹೊಡೆದು ಕೆಲಸ ಮಾಡುವಂತೆ ಮಾಡಿ, ಆ ರೀತಿ ಆದಾಗ ಜನರು ಆರೋಗ್ಯವಂತರಾಗಿ ಬದುಕುವುದಕ್ಕೆ ಸಾಧ್ಯವಿದೆ. ಹಿಂದೆ ಅನೇಕ ಜನರು ಮಂತ್ರಿಗಳಾಗಿ ಕೆಲಸ ಮಾಡಿದಂಥವರನ್ನು ನೆನಪು ಮಾಡಿಕೊಳ್ಳುತ್ತೇವೆ. ಹಿಂದೆ PWD Minister ಮಾನ್ಯ ಚನ್ನಬಸಪ್ಪನವರು ಇದ್ದರು, ಅವರು ದಕ್ಷರಾಗಿ ಕೆಲಸ ಮಾಡಿದರು. ಆರೋಗ್ಯ ಸಚಿವರಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದಂಥ ಸಂದರ್ಭದಲ್ಲೂ ನೋಡಿದ್ದೇವೆ, ಮತ್ತೆ ಬೇರೆಯವರನ್ನು ನೋಡಿದ್ದೇವೆ, ಇಂದಿನ PWD Minister ಆರೋಗ್ಯ ಸಚಿವರಾಗಿದ್ದರು, ಅವರು ನಾನು ಒಂದೇ party ಯಲ್ಲಿದ್ದೆವು. ನೀವು ಎಲ್ಲೋ ಒಂದು ಕಡೆ ಬಹಳ mild ಆಗಿದ್ದೀರಿ, ಮಂಗಳೂರಿನ ಜನರು ಹಾಗೆ ಏನೋ, ತಾವು mild ಆಗಬೇಡಿ, ಇಲ್ಲವೆಂದರೆ ತಾವು ಭೀಮಾ ನದಿ ಕಡೆಗೆ ಬನ್ನಿ, ಅಲ್ಲಿ ನಾವು ತಾವು ಹೇಗಿರಬೇಕೆಂದು ಒಂದು ತಿಂಗಳು training ಕೊಡುತ್ತೇವೆ. ಅದಕ್ಕೆ ನಾನು ಹೇಳುವುದೇನೆಂದರೆ, ಅವರನ್ನು ಜಡಿದು ಕೆಲಸ ತೆಗೆದುಕೊಳ್ಳತಕ್ಕಂಥ ಕೆಲಸ ಮಾಡಿ.

ಇನ್ನು ಅಬಕಾರಿ ಇಲಾಖೆಗೆ ಈ ವರ್ಷ 15,200 ಕೋಟಿ ರೂ.ಗಳ ಆದಾಯ ಬರಬೇಕೆಂದು ಸರ್ಕಾರದ ನಿರೀಕ್ಷೆ ಇದೆ. ಇದರಲ್ಲಿ ಎಷ್ಟು ಸೋರಿಕೆ ಇದೆಯೆಂದರೆ, ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ನಾಲ್ಕೈದು ರೀತಿಯ ಲೈಸನ್ಸ್‌ಗಳನ್ನು ಕೊಡುತ್ತಾರೆ. CL–2 ಎಂದು ಇದೆ, ಕಿರಾಣಿ ಅಂಗಡಿಗಳಲ್ಲಿ ಸಾಮಾನುಗಳನ್ನು ಹೇಗೆ ಇಟ್ಟು ಮಾರಾಟ ಮಾಡುತ್ತೇವೆ, ಆ ರೀತಿಯಲ್ಲಿ ಬಾಟಲ್‌ಗಳನ್ನು ಇಟ್ಟು ಮಾರಾಟ ಮಾಡಲು CL-2 ಲೈಸೆನ್ಸ್ ಕೊಡುತ್ತಾರೆ. CL–9 ಎಂದು Bar & Restaurant, ಕೊಡುವ ಲೈಸೆನ್ಸ್ ಇದೆ, CL–7 ಎಂದು ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟಂಥ ಲೈಸನ್ಸ್ ಇದೆ. ಅಂದರೆ

ಇದನ್ನು ಲಾಡ್ಜಿಂಗ್‌ನವರಿಗೆ ಕೊಡುತ್ತಾರೆ. CL–4 ಎಂದು ಕ್ಲಬ್‌ಗಳಿಗೆ ಕೊಡುವಂಥದ್ದು ಇದೆ, ಇಲ್ಲಿ ಯಾರು ಇಸ್ಪೀಟ್‌ಗಳನ್ನು ಆಡುತ್ತಾ ಕುಡಿಯುವವರಿಗೆ ಕೊಡುವಂಥದ್ದು, ಇನ್ನು CL-6A ಎಂದು ಇದೆ, ಸರ್ಕಾರದ Tourism Department ನದು, wayside Hotels ಎಂದು ಇದೆ ಇಲ್ಲಿಗೆ CL-6A ಲೈಸನ್ಸ್ ಕೊಡತ್ತಾರೆ. CL-2 ಲೈಸನ್ಸ್ ಕೊಡುವ ಸ್ಥಳದಲ್ಲಿ ಕುಡಿಯುವುದಕ್ಕೆ ಅವಕಾಶವಿಲ್ಲ, ಅವರು ತೆಗೆದುಕೊಂಡು ಮನೆಗೆ ಹೋಗಬೇಕು. ಆದರೆ ಅಲ್ಲಿ ಆ ರೀತಿ ಆಗಿರುವುದಿಲ್ಲ, ಮುಂದೆ ಮಾರಾಟ ಮಾಡುತ್ತಾನೆ, ಹಿಂದೆ ಒಂದು ಪರದೆ ಕಟ್ಟಿರುತ್ತಾನೆ, ಅದರ ಹಿಂದೆ 8–10 ಜನ ಕುಳಿತು ಕುಡಿಯುತ್ತಿರುತ್ತಾರೆ. ಇನ್ನು ಬಹಳ ಅವಸರದಲ್ಲಿ ಬಸ್ ಸ್ಟ್ಯಾಂಡ್‌ಗೆ ಹೋಗುತ್ತಿರುತ್ತಾನೆ, ರೈಲ್ವೆ ಸ್ಟೇಷನ್‌ಗೆ ಹೋಗುತ್ತಿರುತ್ತಾನೆ. ಅವನು ಒಂದು ಕ್ವಾರ್ಟರ್ ತೆಗೆದುಕೊಂಡು ಗಟಗಟ ಕುಡಿದು, ಅಲ್ಲೇ ಅಂಗಡಿ ಮುಂದೆ ಖಾಲಿ ಬಾಟಲ್ ಬಿಸಾಕಿ, ಇನ್ನೊಂದು ಬಾಟಲ್ ಅನ್ನು ಜೇಬಿನಲ್ಲಿಟ್ಟುಕೊಂಡು ಹೋಗುತ್ತಾನೆ, ಇದು CL-2 ಲೈಸನ್ಸ್ ಪರಿಸ್ಥಿತಿಯಾಗಿದೆ. ಇನ್ನು CL-9ಗೆ ಟೈಮ್ ಇಲ್ಲ, ರಾತ್ರಿ ಒಂದು ಗಂಟೆ, ಎರಡು ಗಂಟೆ, ಹೊಡೆದಾಟವಾಗುತ್ತಿದೆಯೆಂದು ಪೋಲೀಸ್‌ನವರಿಗೆ ಫೋನ್‌ಗೆ ಮಾಡಿದಾಗ, ಕುಡಿದು ಹೊಡೆದಾಡಿದ್ದಾರೆಂದು ನಮಗೆ ಗೊತ್ತಾಗುತ್ತದೆ. ಇದಕ್ಕೆ ಏನಾದರೂ ಒಂದು ಟೈಮ್ ನಿಗದಿ ಮಾಡಬೇಕಲ್ಲಾ, 10 ಗಂಟೆ ಅಥವಾ 11 ಗಂಟೆಗೆ ಬಂದ್ ಮಾಡಬೇಕು. ಈ ರೀತಿ ಮಾಡಿದರೆ ಇನ್ನೂ ಹೆಚ್ಚಿನ ಆದಾಯ ಬರುವುದಕ್ಕೆ ಸಾಧ್ಯವಿದೆ. ಪ್ರವಾಸೋದ್ಯಮ ಇಲಾಖೆಯ ಹೆಸರಿನಲ್ಲಿ concession ಮೇಲೆ ತೆಗೆದುಕೊಳ್ಳುತ್ತಿದ್ದಾರೆ.

ಉಪಾಧ್ಯಕ್ಷರು:– ಹಳ್ಳಿಗಳಲ್ಲಿ ಲೈಸನ್ಸ್ ಇಲ್ಲದೇ ಇರುವ ಅಂಗಡಿಗಳ ಬಗ್ಗೆ ಹೇಳಲಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ನಾನು ಲೈಸನ್ಸ್ ಇಲ್ಲದೇ ಇರುವ ಬಗ್ಗೆ ಇನ್ನೂ ಮುಂದಕ್ಕೆ ಹೇಳುತ್ತೇನೆ. ಎಲ್ಲಾ ಕಡೆ ಡಾಬಾಗಳಲ್ಲಿ ಲೈಸನ್ಸ್ ಇಲ್ಲದೇ ಮಾರಾಟ ಮಾಡುತ್ತಾರೆ. ನಮ್ಮಲ್ಲಿ ತರಕಾರಿ ಮಾರಾಟ ಮಾಡುವ ಹೆಣ್ಣು ಮಕ್ಕಳು ಇದ್ದಾರೆ. ಇವರು ಸೊಪ್ಪನ್ನು ಮೇಲೆ

ಇಟ್ಟು, ಕೆಳಗಡೆ ಬಾಟಲ್‌ಗಳನ್ನು ಇಟ್ಟಿರುತ್ತಾರೆ. ಅದನ್ನು ಮಾರಾಟ ಮಾಡುವುದಕ್ಕೆ ತಲೆ ಮೇಲೆ ಇಟ್ಟುಕೊಂಡು ತಿರುಗಾಡುತ್ತಿರುತ್ತಾರೆ. ಯಾರೂ ಕೇಳುವವರೇ ಇಲ್ಲ. ಇನ್ನು ಕೆಲವರು ID Liquor ಅಂದರೆ, ಅವರದೇ ಸ್ವಂತ ಭಟ್ಟಿಯನ್ನು ಇಟ್ಟಿರುತ್ತಾರೆ. ಅವರನ್ನೂ ಕೇಳುವವರೇ ಇಲ್ಲ. ಈ ಇಲಾಖೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ಇದೆ. ಒಂದು ಅಂಗಡಿಗೆ ಒಬ್ಬ ಗಾರ್ಡ್‌ಗೆ ಪ್ರತಿ ತಿಂಗಳೂ ಎರಡು ನೂರು ರೂಪಾಯಿ ಕೊಡುತ್ತಾರೆ, ಒಬ್ಬ ಸಬ್ ಇನ್ಸ್‌ಪೆಕ್ಟರ್‌ಗೆ ಒಂದು ತಿಂಗಳಿಗೆ ಒಂದು ಸಾವಿರದ ಐದುನೂರು ರೂಪಾಯಿ ಕೊಡುತ್ತಾರೆ, ಇನ್ಸ್‌ಪೆಕ್ಟರ್‌ಗೆ ಎರಡು ಸಾವಿರ ರೂಪಾಯಿ ಕೊಡುತ್ತಾರೆ, D.C.-Excise ಇವರಿಗೆ ಒಂದು ಸಾವಿರ ರೂಪಾಯಿ ಕೊಡುತ್ತಾರೆ, Deputy Superintendent-Excise ಇವನಿಗೆ ಒಂದು ಸಾವಿರ ರೂಪಾಯಿ ಕೊಡುತ್ತಾರೆ, ವಿಭಾಗ ಮಟ್ಟದಲ್ಲಿರುವ Joint Commissioner ಗೆ ಸಾರಾಯಿ ಅಂಗಡಿ, ಬಾರ್‌ಗಳವರ ಕಡೆಯಿಂದ ಪ್ರತಿ ತಿಂಗಳಿಗೆ ಒಂದು ಸಾವಿರ ರೂಪಾಯಿ ಕೊಡುತ್ತಾರೆ. D.C.-Squad ಎಂದು ಇದೆ, ಅವರದ್ದು ಬಹಳ ದೊಡ್ಡ ರೇಟ್. ಅವರು ಯಾವಾಗ ಬೇಕಾದರೂ, ಯಾರ ಮನೆಗೆ ಬೇಕಾದರೂ ಹೋಗಿ ಚೆಕ್ ಮಾಡುತ್ತಾರೆ. ಚೆಕ್ ಮಾಡಿ, ಮನೆಯಲ್ಲಿಟ್ಟು ಮಾರುತ್ತಿದ್ದರು ಎಂದು ಒಂದು ಕೇಸ್ ತೆಗೆದುಕೊಂಡು ಬರುತ್ತಾರೆ. ಅವರಿಗೆ ತಿಂಗಳಿಗೆ ಎರಡೂವರೆ ಸಾವಿರ ರೂಪಾಯಿ ಕೊಡುತ್ತಾರೆ. ಅವರದೇ highest rate. ಸರ್ಕಾರದವರು ಬಹಳ ಸದುದ್ದೇಶದಿಂದ 'ಅಬಕಾರಿ ಮತ್ತು ಲಾಟರಿ ನಿಷೇಧ ದಳ' ಎಂದು ಮಾಡಿದ್ದಾರೆ. ಇದರಲ್ಲಿ ನಿಮ್ಮ ಪೊಲೀಸರು ಇರುತ್ತಾರೆ. ಅವರು ಬಹಳ ಅದ್ಭುತ ಇದ್ದಾರೆ. ಕಳ್ಳಭಟ್ಟಿ ಸಾರಾಯಿ ತಯಾರು ಮಾಡುವವರನ್ನು ಹಿಡಿಯುವ ಸಲುವಾಗಿ, ಅದನ್ನು ಸಾಧ್ಯವಾದಷ್ಟೂ ನಿಯಂತ್ರಣಕ್ಕೆ ತರುವ ಸಲುವಾಗಿ ಅವರನ್ನು ನೇಮಿಸಿರುತ್ತಾರೆ. ಹೊರಗಡೆ ರಾಜ್ಯದ ಲಾಟರಿಯನ್ನು ನಮ್ಮ ರಾಜ್ಯದಲ್ಲಿ ತಂದು ಮಾರಲು ಅಧಿಕೃತವಾಗಿ ಅನುಮತಿ ಕೊಟ್ಟಿಲ್ಲ. ಆದರೆ ಅನಧಿಕೃತವಾಗಿ ಎಲ್ಲ ರಾಜ್ಯದ ಲಾಟರಿಗಳು ಇಲ್ಲಿ ಮಾರಾಟವಾಗುತ್ತವೆ. ಅದನ್ನು ನಿಲ್ಲಿಸುವ ಸಲುವಾಗಿ ಇರುವಂಥ ಒಂದು ವ್ಯವಸ್ಥೆ ಈ ದಳ. ಅವರು ಪ್ರತಿ ತಿಂಗಳು, ಪ್ರತಿಯೊಂದು ಅಂಗಡಿಗೆ ಹೋಗಿ ಎರಡು ಸಾವಿರ

ರೂಪಾಯಿ ವಸೂಲು ಮಾಡುತ್ತಾರೆ. ಅಂಗಡಿಗಳಿಗೆ ಹೋಗಲು ಅವರಿಗೆ ಏನೂ ಅಧಿಕಾರವಿಲ್ಲ. ಅವರು ಅಂಗಡಿಗಳಿಗೆ, ಬಾರ್‌ಗಳಿಗೆ ಹೋಗಲೇಬಾರದು. ಆದರೆ ಅವರು ಹೋಗಿ ಎರಡು ಸಾವಿರ ರೂಪಾಯಿ ವಸೂಲು ಮಾಡುತ್ತಾರೆ. ಇಷ್ಟೆಲ್ಲ ಆಗಿ ಲೈಸೆನ್ಸ್ ರಿನ್ಯೂವಲ್‌ಗೆ ನಾಲ್ಕು ಲಕ್ಷದ ಹದಿನೆಂಟು ಸಾವಿರ ರೂಪಾಯಿ ಪ್ರತಿ ವರ್ಷ ಖರ್ಚಾಗುತ್ತದೆ. ಇಷ್ಟೆಲ್ಲ ಕೊಟ್ಟರೂ ಮತ್ತೆ ಲೈಸೆನ್ಸ್ ರಿನ್ಯೂವಲ್ ಮಾಡುವ ಸಮಯದಲ್ಲಿ, ಒಂದು ಅಂಗಡಿಗೆ ಅರವತ್ತೈದು ಸಾವಿರ ರೂಪಾಯಿ ಖರ್ಚು ಬರುತ್ತದೆ. ಗಾರ್ಡ್ ಹಿಡಿದುಕೊಂಡು ಮೇಲಿನವರೆಗೆ ಕೊಡಬೇಕು. ಹೀಗಾಗಿ ಈ ಅಬಕಾರಿ ಇಲಾಖೆಯಲ್ಲಿ ಬಹಳಷ್ಟು ಅವ್ಯವಹಾರ, ಸೋರಿಕೆ ನಡೆಯುತ್ತಿದೆ. ಅದಕ್ಕಾಗಿ ಸರ್ಕಾರಕ್ಕೆ ನಾನು ಏನು ಹೇಳಲು ಬಯಸುತ್ತೇನೆ ಎಂದರೆ, ಈ ವ್ಯವಸ್ಥೆಯಲ್ಲಿ ಬದಲಾವಣೆ ತನ್ನಿ. Motor Vehicle Tax ತುಂಬಿಸಿಕೊಂಡ ಹಾಗೆ ಏಕೆ ನೀವು ಇದನ್ನೂ ಇಲ್ಲಿಯೇ ತುಂಬಿಸಿಕೊಳ್ಳಬಾರದು? ಒಮ್ಮೆ ಲೈಸೆನ್ಸ್ ಕೊಟ್ಟಮೇಲೆ ಇಲ್ಲೇ ನೀವು ಚಲನ್ ತುಂಬಿ ಹಣ ಕಟ್ಟಿದರೆ ಮುಗಿಯಿತು, due date ಗೆ license automatic ಆಗಿ ರಿನ್ಯೂ ಆಗುತ್ತದೆ ಎಂದರೆ ಆಗುವುದಿಲ್ಲವೇನು? ಪ್ರತಿ ವರ್ಷ verification ಮಾಡಬೇಕು ಎಂದು ಏಕೆ ಇಟ್ಟಿದ್ದಾರೆ ಎಂದರೆ ಸ್ಕೂಲು, ಕಾಲೇಜುಗಳು, ದೇವಸ್ಥಾನಗಳು ಮತ್ತು ಹರಿಜನ ಕೇರಿಗಳ ಪಕ್ಕದಲ್ಲಿ ಇವುಗಳು ಇರಬಾರದು ಎನ್ನುವುದನ್ನು ನೋಡುವುದಕ್ಕಾಗಿ ಇಟ್ಟಿದ್ದಾರೆ. ಆದರೆ ಎಸ್.ಸಿ. ಕಾಲೋನಿಗಳಲ್ಲಂತೂ invariably ಸಾರಾಯಿ ಅಂಗಡಿಗಳನ್ನು ಕೊಟ್ಟಿದ್ದಾರೆ. ಇದನ್ನೇನಾದರೂ ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಸರ್ಕಾರಕ್ಕೆ ಹದಿನೈದು ಸಾವಿರ ಕೋಟಿಯಲ್ಲ, ಇಪ್ಪತ್ತೈದು ಸಾವಿರ ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಅದಕ್ಕೆ ನಿಮ್ಮ ಬದ್ಧತೆಯನ್ನು ತೋರಿಸಿ, ವಸೂಲು ಮಾಡಿ, ಆಡಳಿತವನ್ನು ಬಿಗಿಗೊಳಿಸಿ. ಇಲ್ಲದಿದ್ದರೆ ಒಂದು ಕೆಲಸ ಮಾಡಿ, licensed surveyor ಗಳಿಗೆ ಕೊಟ್ಟಿರುವ ಹಾಗೆ Excise Department ನವರಿಗೆ ಒಂದು ಅಂಗಡಿಗೆ ಇಷ್ಟು ಎಂದು ಕೊಟ್ಟರೆ, ಅವರಿಗೆ ಸರ್ಕಾರದಿಂದ ಕೊಡುವ ಸಂಬಳ–ಸಾರಿಗೆ, T.A., D.A., ಮತ್ತೊಂದು ಎಂದು ಏನು ಕೊಡುತ್ತೀರಿ,

ಅದು ಸರ್ಕಾರ ಕ್ಕೆ ಉಳಿಯುತ್ತದೆ. ಅದನ್ನಾದರೂ ಮಾಡಿ. ಇಲ್ಲಿ ಬಹಳ ಅವ್ಯವಹಾರವಿದೆ.

ಇನ್ನು ಗೃಹ ಇಲಾಖೆಯ ಬಗ್ಗೆ ಹೇಳುವುದಾದರೆ, 2014-15ನೇ ಸಾಲಿನಲ್ಲಿ ಗೃಹ ಇಲಾಖೆಗೆ 322 ಕೋಟಿ ರೂಪಾಯಿಗಳ ಅನುದಾನ ಕೊಟ್ಟಿದ್ದರು. ಅದರಲ್ಲಿ ಇದುವರೆಗೆ 193 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ, 154 ಕೋಟಿ ರೂಪಾಯಿಗಳು ವೆಚ್ಚವಾಗಿದೆ. ಅಂದರೆ 47% ವೆಚ್ಚವಾಗಿದೆ. So far the expenditure is 47%. ನಾನು ಏನು ಹೇಳುತ್ತೇನೆ ಎಂದರೆ ಪೊಲೀಸ್ ಇಲಾಖೆಯಲ್ಲಿ transfer posting ಬಹಳ ಮಹತ್ವದ್ದು. ಯಾರ್ಯಾರಿಗೆ ಶಕ್ತಿ ಇದೆ ಅವರು ಆಯಕಟ್ಟಿನ ಜಾಗಗಳಿಗೆ ಹೋಗಿ ಕುಳಿತುಕೊಳ್ಳುತ್ತಾರೆ. ಅಲ್ಲಿ ಹೋಗಿ ಅವರು ಕುಳಿತರು ಎಂದರೆ ಅವರು ಪೊಲೀಸ್ ಕೆಲಸವನ್ನೇ ಮಾಡುವುದಿಲ್ಲ. ಒಬ್ಬ ಪೊಲೀಸ ಸಬ್ ಇನ್ಸ್‌ಪೆಕ್ಟರ್, ಒಂದು ಪೊಲೀಸ್ ಠಾಣೆಗೆ ರಿಪೋರ್ಟ್ ಮಾಡಿಕೊಂಡಾಗ, ಅವನು ಏನು ನೋಡಬೇಕೆಂದರೆ, ಆ ಏರಿಯಾದಲ್ಲಿ ರೌಡಿಗಳ ಸಂಖ್ಯೆ ಎಷ್ಟಿದೆ? ಹೊಸ ಕುಟುಂಬಗಳು ಎಷ್ಟು ಬಂದವು? ಅಥವಾ ಹೋದವು? ಇಸ್ಪೀಟ್ ಕ್ಲಬ್‌ಗಳು ಎಷ್ಟಿವೆ? ಸಾರಾಯಿ ಅಂಗಡಿಗಳು ಎಷ್ಟಿವೆ? ಅವರೆಲ್ಲ ಏನು ಮಾಡುತ್ತಿದ್ದಾರೆ ಎನ್ನುವುದನ್ನೆಲ್ಲ ನೋಡಿ ಪ್ರತಿನಿತ್ಯವೂ ಡೈರಿಯಲ್ಲಿ ಎಂಟ್ರಿ ಮಾಡಿ ವರದಿ ಕಳುಹಿಸುವುದು ಆಗಬೇಕು. ಆದರೆ ಅದನ್ನು ಯಾರು ಮಾಡುತ್ತಿಲ್ಲ. ಪೊಲೀಸ್‌ಗಿರಿನೇ ಇಲ್ಲ. ತನ್ನ ಕೈಕೆಳಗೆ ಕೆಲಸ ಮಾಡುವಂಥ ಕಾನ್ಸ್‌ಟೇಬಲ್‌ಗಳಾಗಲೀ, ಬೇರೆಯವರಾಗಲೀ, ಟ್ರಾಫಿಕ್ ಡ್ಯೂಟಿ ಹಾಕಿದವನಿಗೆ, ಮಫ್ತಿಯಲ್ಲಿದ್ದು ಇಂಟೆಲಿಜೆನ್ಸ್ ವರ್ಕ್ ಮಾಡುವವನಿಗೆ, ಇವರೆಲ್ಲರಿಗೂ ಏನೂ ಕೆಲಸ ಹಚ್ಚುವುದಿಲ್ಲ. ಅವರೆಲ್ಲರಿಗೂ ಏನು ಕೆಲಸ ಹಚ್ಚಿದ್ದಾರೆ ಎಂದರೆ ಅವರು ಹೋಗಿ ರಸ್ತೆಯಲ್ಲಿ ನಿಲ್ಲುವುದು, ಗಾಡಿಗಳನ್ನು ತಡೆಯುವುದು, ಅವನು ಲೀಗಲ್ ಆಗಿದ್ದಾನೋ, ಇಲ್ಲೀಗಲ್ ಆಗಿದ್ದಾನೋ, ಯಾವುದನ್ನೂ ನೋಡದೇ ಅವನಿಂದ ವಸೂಲು ಮಾಡುವುದು, ಅವನನ್ನು ಕಳುಹಿಸುವುದು ಆಗಿದೆ. ಪೊಲೀಸ್ ಸ್ಟೇಷನ್‌ಗಳವರು ಇಷ್ಟಕ್ಕೆ ನಿಂತು ಬಿಟ್ಟಿದ್ದಾರೆ. ಅಲ್ಲಿ ಯಾರ್ಯಾರು ದುಷ್ಕರ್ಮಿಗಳಿದ್ದಾರೆ, ಯಾರ್ಯಾರು ಕರ್ತವ್ಯಕ್ಕೆ ತೊಂದರೆ ಮಾಡುವವರಿದ್ದಾರೆ,

ಯಾರ್ಯಾರು ಮಾದಕ ವಸ್ತುಗಳನ್ನು ಮಾರುವವರಿದ್ದಾರೆ, ಯಾರ್ಯಾರು ಇಸ್ಪೀಟ್ ಕ್ಲಬ್‌ಗಳನ್ನು ನಡೆಸುವವರಿದ್ದಾರೆ, ಯಾರ್ಯಾರು ಗಾಂಜಾ ಮಾರುವವರಿದ್ದಾರೆ, ಅಂಥವರನ್ನು ಹುಡುಕಿಸಿ, ಅವರನ್ನು ಹದ್ದುಬಸ್ತಿನಲ್ಲಿಡುವಂಥ ಕೆಲಸವನ್ನು ಪೊಲೀಸ್ ಇಲಾಖೆಯವರು ಮಾಡಬೇಕು. ಆದರೆ ಅವರನ್ನು ಕೇಳಿದರೆ, ನಮಗೆ ಸಿಬ್ಬಂದಿಯೇ ಇಲ್ಲ ಎಂದು ಹೇಳುತ್ತಾರೆ. ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಸಿಬ್ಬಂದಿ ನೇಮಿಸಲು ಏನೂ ಅಡಚಣೆಯಿಲ್ಲ. ಇವತ್ತು ಸಾಕಷ್ಟು ಜನ ಯುವಕರಿದ್ದಾರೆ, ಅವರಿಗೂ ಉದ್ಯೋಗ ಕೊಟ್ಟ ಹಾಗೆ ಆಗುತ್ತದೆ ಮತ್ತು ನಮ್ಮ ರಕ್ಷಣೆಗೂ ಅನುಕೂಲವಾಗುತ್ತದೆ. ನೇಮಕಾತಿಯನ್ನು ಹೆಚ್ಚು ಮಾಡಿ, ಜನಸಂಖ್ಯೆ ಆಧಾರದ ಮೇಲೆ ನೇಮಕಾತಿಯನ್ನು ಮಾಡಿ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಸಾಕಷ್ಟು ಸಲ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಪೊಲೀಸ್ ಇಲಾಖೆ ಬೇರೆ ಇಲಾಖೆಗಳ ರೀತಿಯಲ್ಲ. ಇವತ್ತು ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಬರಬೇಕಾದರೆ ಕಾರಣವೆಂದರೆ ಒಂದು ವರ್ಷಕ್ಕೆ ಸುಮಾರು 4,000-4,500 ಜನ ಸಿಬ್ಬಂದಿ ನಿವೃತ್ತರಾಗುತ್ತಾರೆ. ನಮ್ಮಲ್ಲಿ ಸಿಬ್ಬಂದಿಯನ್ನು ಒಂದು ವರ್ಷ ಟ್ರೈನಿಂಗ್ ಮಾಡಬೇಕಾಗಿದೆ. ನಮ್ಮಲ್ಲಿ 4,000-4,500 ಜನರಿಗೆ ಟ್ರೈನಿಂಗ್ ಮಾಡುವುದಕ್ಕಷ್ಟೇ facility ಇದೆ. ಹಿಂದಿನ ಸರ್ಕಾರಗಳು ಪ್ರತಿ ವರ್ಷ ನೇಮಕಾತಿ ಮಾಡಿ, ಅವರಿಗೆ ಟ್ರೈನಿಂಗ್ ಕೊಟ್ಟಿದ್ದರೆ, ಸಿಬ್ಬಂದಿ ಕೊರತೆಯ ಈ ರೀತಿಯ ಸಮಸ್ಯೆ ಬರುತ್ತಿರಲಿಲ್ಲ. ನಿಮ್ಮ ಗಮನಕ್ಕೆ ತರುತ್ತಿದ್ದೇನೆ, ನಮ್ಮ ಸರ್ಕಾರ ಬಂದ ಮೇಲೆ ಸುಮಾರು 8,500 ಜನರಿಗೆ ನೇಮಕಾತಿ ಮಾಡಲು ಪ್ರಕ್ರಿಯೆ ಪ್ರಾರಂಭ ಮಾಡಿದ್ದು ಅದು ಕೊನೆಯ ಹಂತದಲ್ಲಿದೆ. ಇನ್ನು ಮುಂದೆಯೂ ಸಹ ಅಂದರೆ ಬರುವ ವರ್ಷದಲ್ಲಿಯೂ 8,500 ಜನರನ್ನು ನೇಮಕಾತಿ ಮಾಡಿಕೊಳ್ಳಲು ಮುಖ್ಯಮಂತ್ರಿಯವರನ್ನು ಅನುಮತಿ ಕೇಳುತ್ತಿದ್ದೇವೆ, ಅವರೂ ಸಹ ಅನುಮತಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಹಾಗಾಗಿ, ನಮ್ಮ ಸರ್ಕಾರದವರು ನೇಮಕಾತಿಗೆ ಎಲ್ಲ ಪ್ರಕ್ರಿಯೆಯನ್ನು ಮಾಡಿದ್ದೇವೆ.

ಶ್ರೀ ಗೋವಿಂದ ಎಂ ಕಾರಜೋಳ:- ಪೊಲೀಸ್ ಇಲಾಖೆಯಲ್ಲಿ ಇನ್ನೊಂದು ಬಹಳ ಮಹತ್ವದ ವಿಚಾರವೆಂದರೆ, ಕಳ್ಳರು, ಕಾಕರು, ದರೋಡೆಕೋರರು ಆಧುನಿಕ ತಂತ್ರಜ್ಞಾನವನ್ನು ಬಳಸುತ್ತಾರೆ. ಅವರು ಬಳಸುವ ವೆಹಿಕಲ್‌ಗಳು ಗಂಟೆಗೆ 150-200 ಕಿ.ಮೀ. ಹೋಗುವಂಥವು ಇವೆ. ಆದರೆ ಪೊಲೀಸ್ ಇಲಾಖೆಯಲ್ಲಿ ಯಾವುದೋ ಕಾಲದ ಮಹೀಂದ್ರ ಜೀಪ್‌ಗಳನ್ನು ಇಟ್ಟುಕೊಂಡು ಕುಳಿತಿದ್ದಾರೆ. ಹೀಗಾದರೆ ಅದು ಸರಿಯಾಗುವುದಿಲ್ಲ. ಅದಕ್ಕಾಹಗಿ ಅವರಿಗೆ ಒಳ್ಳೊಳ್ಳೆಯ ವೆಹಿಕಲ್‌ಗಳನ್ನು ಕೊಡಿ. ಗುಬ್ಬಿ-ಕಾಗೆಗಳನ್ನು ಹೊಡೆಯುವಂಥ ಬಂದೂಕುಗಳನ್ನು ಅವರ ಕೈಗೆ ಕೊಟ್ಟರೆ, ದುಷ್ಟರನ್ನು, ಸಮಾಜದ್ರೋಹಿಗಳನ್ನು, ಕಳ್ಳಕಾಕರನ್ನು ನಿಯಂತ್ರಿಸಲು ಅವರಿಗೆ ಆಗುವುದಿಲ್ಲ. ಏಕೆಂದರೆ, ಅವರ ಕೈಯ್ಯಲ್ಲಿ ಇವರಿಗಿಂತಲೂ ಒಳ್ಳೆಯ ವೆಪನ್‌ಗಳಿವೆ. ಆ ಕಡೆಯೂ ಸ್ವಲ್ಪ ಗಮನ ಕೊಡಿ. ಅದನ್ನು ಕೊಟ್ಟರಿ ಎಂದಾದರೆ ಖಂಡಿತವಾಗಿಯೂ ಪೊಲೀಸ್ ಇಲಾಖೆ ದಕ್ಷತೆಯಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್:- ನಮ್ಮ ಸರ್ಕಾರದವರು ಈಗಾಗಲೇ 380 ಹೊಸ ವೆಹಿಕಲ್‌ಗಳನ್ನು ಪೊಲೀಸ್ ಇಲಾಖೆಗೆ ಕೊಟ್ಟಿದ್ದೇವೆ. ಬಹುಶ: ಹಿಂದೆ ಯಾರೂ ಆ ರೀತಿ ಮಾಡಿರಲಿಲ್ಲ. ಈಗಾಗಲೇ ನಮ್ಮ ಮುಖ್ಯಮಂತ್ರಿಗಳು ಅದಕ್ಕೆ ಅನುಮತಿ ಕೊಟ್ಟಿದ್ದು, ವೆಹಿಕಲ್‌ಗಳನ್ನು ಕೊಟ್ಟಿದ್ದು, ಅವುಗಳು ಅವರಿಗೆ ತಲುಪಿಯಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಸಭಾಧ್ಯಕ್ಷರೆ, ಈ ಆಧುನಿಕ ಜಗತ್ತಿನಲ್ಲಿ ಪೊಲೀಸ್ ಇಲಾಖೆಯಲ್ಲಿ ತಂತ್ರಜ್ಞಾನದ ಕೊರತೆ ಬಹಳ ಇದೆ. ಈ ಬಗ್ಗೆ ಅವರಿಗೆ training ಕೊಡುವಂಥದ್ದು ಆಗಬೇಕು ಮತ್ತು ಈ ಹೊಸ ಜಗತ್ತಿನ ಮಾಹಿತಿ ತಂತ್ರಜ್ಞಾನದಲ್ಲಿ ಬೇಕಾಗುವ equipment ಗಳನ್ನು ಕೊಡುವಂಥದ್ದು ಆದಾಗ ಮಾತ್ರ ದಕ್ಷತೆಯಿಂದ ಅವರು ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ.

ಉಪಾಧ್ಯಕ್ಷರು:- Conclude ಮಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ತಾವು ಪೀಠದಲ್ಲಿದ್ದೀರೆಂದು ನಾನು ಬಹಳ ಸಂತೋಷಪಟ್ಟಿದ್ದೆ. ಏಕೆಂದರೆ, ಅಧ್ಯಕ್ಷರು ಪೀಠದಲ್ಲಿದ್ದರೆಂದರೆ ಬಹಳ time ಕೊಡುವುದಿಲ್ಲ, ಆದರೆ, ನೀವು ಹೆಚ್ಚು time ಕೊಡುತ್ತೀರೆಂದು ತಿಳಿದುಕೊಂಡಿದ್ದೆ. ಆದರೆ, ತಾವೂ ಕೂಡ ಗಂಟೆ ಹೊಡೆಯುವುದಕ್ಕೆ ಆರಂಭಿಸಿಬಿಟ್ಟಿರಿ, ಅದು ದೊಡ್ಡ ಸಮಸ್ಯೆಯಾಗಿದೆ.

ಉಪಾಧ್ಯಕ್ಷರು:– Discussion ಇನ್ನು ಕೇವಲ 4 ದಿವಸಗಳು ಮಾತ್ರ ಇದೆ. ಅದಕ್ಕೆ ಬೇಗ ಮಾತನಾಡಿ, ಮುಕ್ತಾಯಗೊಳಿಸಿ ಎಂದು ಹೇಳುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಆಯಿತು, ನಾನು ಬೇಗ ಮಾತನಾಡಿ ಮುಗಿಸುತ್ತೇನೆ. ಎಲ್ಲಾ ಇಲಾಖೆಗಳ ಬಗ್ಗೆ ಮಾತನಾಡುವುದಿಲ್ಲ. 32 ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ತಂದಿದ್ದೇನೆ, ಆದರೆ, ಅಷ್ಟನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಕೆಲವು ಇಲಾಖೆಗಳಿಗೆ ಮಾತ್ರ ನಾನು ಸೀಮಿತವಾಗಿ ಮಾತನಾಡುತ್ತೇನೆ. ತೋಟಗಾರಿಕೆ ಇಲಾಖೆ ಬಹಳ ಮಹತ್ವದ ಇಲಾಖೆಯಾಗಿದೆ. ರೈತರಿಗೆ ವಾಣಿಜ್ಯ ಬೆಳೆಗಳನ್ನು ಬೆಳೆಯಲಿಕ್ಕೆ, ಅವರನ್ನು ಆರ್ಥಿಕವಾಗಿ, ಸದೃಢವಾಗಿ ಮಾಡಲಿಕ್ಕೆ ಬೇಕಾಗಿರತಕ್ಕಂಥ ಇಲಾಖೆ. ತೋಟಗಾರಿಕೆ ಇಲಾಖೆಯಲ್ಲಿ ಹನಿ ನೀರಾವರಿ ವ್ಯವಸ್ಥೆ ಮಾಡಿಕೊಳ್ಳುಲು ಹಣ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. Equipments ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿಯೂ ಅದೇ ಪರಿಸ್ಥಿತಿ ಇದೆ. ನೀವು ಸರ್ಕಾರದಿಂದ ಕೊಂಡುಕೊಳ್ಳುವುದರ ಬದಲಾಗಿ ನೇರವಾಗಿ ರೈತರಿಗೆ ಹಣ ಕೊಡಿ. ಅವರು ಸ್ವತಃ ತೆಗೆದುಕೊಂಡರೆಂದರೆ, ಹೆಚ್ಚು ಅನುಕೂಲವಾಗುತ್ತದೆ ಮತ್ತು ಕಡಿಮೆ ಬೆಲೆಗೆ ಸಿಗುತ್ತದೆ. 2014–15ರ ಬಜೆಟ್‌ನಲ್ಲಿ ತೋಟಗಾರಿಕೆ ಇಲಾಖೆಗೆ 1306 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಬಿಡುಗಡೆಯಾಗಿರುವುದು 615 ಕೋಟಿ ರೂಪಾಯಿಗಳು ಮಾತ್ರ. ಆ ಇಲಾಖೆಯ ಖರ್ಚು ಇವತ್ತಿನವರೆಗೆ 429 ಕೋಟಿ ರೂ.ಗಳಾಗಿದೆ. ಆ ಇಲಾಖೆಯ ಸರಾಸರಿ expenditure 32.89% ಅಂದರೆ 33%. ಅದು ಬಹಳ ಮಹತ್ವದ ಇಲಾಖೆ. ಸರ್ಕಾರ ಆ ಕಡೆಗೆ ಗಮನಕೊಟ್ಟು, ಈ ಇಲಾಖೆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ರೈತರು

ಬೆಳೆದಿರತಕ್ಕಂಥ ಹಣ್ಣನ್ನು ಪರದೇಶಗಳಿಗೆ ಕಳುಹಿಸುವಂಥದ್ದು, ರೈತರು ಬೆಳೆದಿರುವಂಥ ಹಣ್ಣನ್ನು ಒಣಗಿಸಿ ಮಾರಾಟ ಮಾಡುವಂಥದ್ದು, ಮಾಡಬೇಕು. ನಾನು ಬಿಜಾಪುರ ಜಿಲ್ಲೆಯಿಂದ ಬಂದಂಥವನು. ನಮ್ಮಲ್ಲಿ ದಾಳಿಂಬೆ, ದ್ರಾಕ್ಷಿ ಅನ್ನು ಸಾಕಷ್ಟು ಬೆಳೆಯುತ್ತಿದ್ದೇವೆ. ದ್ರಾಕ್ಷಿ ಒಣಗಿಸುವುದಕ್ಕೆ ಮನುಷು ಮಾಡುವುದು ಎಂದು ಹೇಳುತ್ತೇವೆ. ಅದನ್ನು ಮಾಡಿಸಿ ಕಳುಹಿಸಿದರೆ, season ಪ್ರಾರಂಭವಾಗುವುದಕ್ಕಿಂತಲೂ ಮುಂಚೆ ಒಂದು ಕಿಲೋಗೆ 390 ರೂ. ಇತ್ತು. ಈಗ rate ಕಡಿಮೆ ಆಗಿ 200 ರಿಂದ 260 ರೂ.ಗೆ ಬಂದಿದೆ. ಇದನ್ನು ಸರ್ಕಾರ ನಿಯಂತ್ರಣ ಮಾಡುವಂಥದ್ದಾಗಬೇಕು. ರೈತರಿಗೆ ಸ್ವಲ್ಪ advance ಕೊಟ್ಟು, cold storage ನಲ್ಲಿ ಇಡುವಂಥದ್ದು ಆಗಬೇಕು. ಇಲ್ಲದಿದ್ದರೆ ರೈತರು ಏನು ಮಾಡುತ್ತಾರೆಂದರೆ, ಬಂದುದ್ದನ್ನು ಬೇಗನೆ ಮಾರುತ್ತಾರೆ. ಏಕೆಂದರೆ, ಸಾಲ ಮಾಡಿಕೊಂಡಿರುತ್ತಾರೆ, ಕೈಕಡ ತಂದಿರುತ್ತಾರೆ, ಯಾರೋ ಊರು ಮನೆಯವರ ಹತ್ತಿರ ತೆಗೆದುಕೊಂಡಿರುತ್ತಾರೆ, ಅವರಿಗೆ ಬೆಳೆದ ಹಣ್ಣನ್ನು ಕೂಡಿಡುವ ಶಕ್ತಿ ಇರುವುದಿಲ್ಲ. ಕೂಡಿಟ್ಟು 2-3 ತಿಂಗಳ ನಂತರ ಮಾರಿದರೆ ಒಂದು ಕಿಲೋಗೆ 300 ರೂ.ಗಿಂತಲೂ ಹೆಚ್ಚಿಗೆ rate ಸಿಗುತ್ತದೆ. ಇವತ್ತು ಆ ವ್ಯವಸ್ಥೆ ಇಲ್ಲ. ಅದರ ವ್ಯವಸ್ಥೆ ಮಾಡಬೇಕು. ಇನ್ನು ಅವರಿಗೆ ನೀರಾವರಿಯಲ್ಲಿ ಬದಲಾವಣೆ ಮಾಡುವುದಕ್ಕೆ ನನ್ನ ಸಲಹೆ ಏನೆಂದರೆ, drip irrigation ಗೆ 90% subsidy ಕೊಡುತ್ತೇವೆಂದು ನೀವು ಹೇಳುತ್ತೀರಿ. ಅವರು ತಂದು ಜೋಡಿಸಿ ಹೋದರೆ ಮತ್ತೆ ಅದು functioning ಆಗುವುದಿಲ್ಲ. ಅಂಥ drip system ಜಾಲ ತಂದು ಹಾಕುತ್ತಾರೆ. ಅದರ ಬದಲಾಗಿ ರೈತನಿಗೇ ಕೊಡಿ. ಒಂದು ಎಕರೆಗೆ ಇಂತಿಷ್ಟು ಎಂದು fix ಮಾಡಿ. ಒಂದು ಹೆಕ್ಟೇರ್‌ಗೆ ಇಂತಿಷ್ಟು ಎಂದು fix ಮಾಡಿ. ರೈತರಿಗೇ ಕೊಟ್ಟುಬಿಡಿ, ಅವರೇ ತೆಗೆದುಕೊಂಡು ಮಾಡಿಕೊಳ್ಳುತ್ತಾರೆ. ನೀರಿನ ಉಳಿತಾಯವೂ ಆಗುತ್ತದೆ, ಆದಾಯ ಹೆಚ್ಚಾಗುತ್ತದೆ, yield ಹೆಚ್ಚಾಗುತ್ತದೆ, ರೈತರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಈ ಮಾರಾಟ ಮಾಡತಕ್ಕಂಥವರಿಗೆ ಮತ್ತು ಅಧಿಕಾರಿಗಳಿಗೆ ಲಾಭ ಆಗುತ್ತದೆಯೇ ಹೊರತು ರೈತರಿಗೆ ಲಾಭವಾಗುವುದಿಲ್ಲ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಇಷ್ಟೇ ವಿನಂತಿ ಮಾಡಲಿಕ್ಕೆ

ಬಯಸುತ್ತೇನೆ. ಮೊನ್ನೆ ಜನವರಿ ಮತ್ತು ಫೆಬ್ರವರಿಯಲ್ಲಿ ಸುರಿದಂಥ ಅಕಾಲಿಕ ಮಳೆಯಿಂದ ಈ ವರ್ಷ ನಮಗೆ ದ್ರಾಕ್ಷಿ, ದಾಳಿಂಬೆ, ಜೋಳ, ಗೋಧಿ ಬೆಳೆಗೆ ಬಹಳಷ್ಟು ಹಾನಿಯಾಗಿದೆ. ಅವರಿಗೆ ಪರಿಹಾರ ಕೊಡುವಂಥದ್ದು ಆಗಬೇಕು. ಈಗೇನು ಕೇಂದ್ರ ಸರ್ಕಾರದ guidelines ಇವೆ, ಅಷ್ಟಾದರೂ ಕೊಡಬೇಕು. NCCF ಮತ್ತು CRF guidelines ಪ್ರಕಾರ ಏನು ಕೊಡಬೇಕಾಗಿದೆ, ಅಷ್ಟಾದರೂ ಹಣವನ್ನು ಅವರಿಗೆ ಕೊಟ್ಟು ಈ ರೈತರನ್ನು ಸಂಕಷ್ಟದಿಂದ ಪಾರು ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ಸಮಾಜ ಕಲ್ಯಾಣ ಇಲಾಖೆ ಬಹಳ ಮಹತ್ವದ ಇಲಾಖೆಯಾಗಿದೆ. ಸಮಾಜ ಕಲ್ಯಾಣ ಸಚಿವರು ಸದನದಲ್ಲಿಲ್ಲ. ಕಳೆದ ವರ್ಷ ಆ ಇಲಾಖೆಗೆ 3679 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, ಅದರಲ್ಲಿ ಬಿಡುಗಡೆ 2600 ಕೋಟಿ ರೂಪಾಯಿಗಳಾಗಿದೆ. Expenditure 1647 ಕೋಟಿ ರೂ. ಆಗಿದೆ. ನಾನು plan expenditure ಅನ್ನು ಹೇಳುತ್ತಿದ್ದೇನೆ. ಇದು ಒಟ್ಟು 58% ಆಗುತ್ತದೆ. ಹಾಗಾದರೆ ಯಾವ ರೀತಿ ನಿಮ್ಮದು ಸಾಮಾಜಿಕ ಕಳಕಳಿ, ಕಾಳಜಿ, ಬದ್ಧತೆ ಎನ್ನುವುದನ್ನು ಹೇಳಬೇಕು. ಬರೀ ನಾವು ಹಣ ಕೊಟ್ಟಿದ್ದೇವೆಂದು ಹೇಳಿದರೆ ಆಗುವುದಿಲ್ಲ. ನಾನೇನಾದರೂ ಸುಳ್ಳು ಹೇಳುತ್ತಿದ್ದೇನೆ ಎನ್ನುವುದಾದರೆ SC/ST Committee Chairman ಆಗಿರುವ ನರೇಂದ್ರಸ್ವಾಮಿಯವರು ಸದನದಲ್ಲಿ ಇದ್ದಾರೆಯೇ? ಇಲ್ಲ. ಈ ವರ್ಷ 16,356 ಕೋಟಿ ರೂ. ಬಜೆಟ್‌ನಲ್ಲಿರುವಂಥದ್ದು. ಇಷ್ಟು ಹಣ ಏನಿದೆ, ಇದರ ಬಳಕೆ ಸಮರ್ಪಕವಾಗಿ ಆಗಬೇಕು. ಬರೀ hostel charges ಹೆಚ್ಚು ಮಾಡಿದ್ದೇವೆ, ಮತ್ತೊಂದು ಹೆಚ್ಚು ಮಾಡಿದ್ದೇವೆಂದು, ಅಷ್ಟು ಮಾತ್ರ ಹೇಳುವುದು ಅಲ್ಲ. ದುಡಿಯುವಂಥ ಕೈಗಳಿಗೆ ಕೆಲಸ ಕೊಡುವಂಥದ್ದು ಆಗಬೇಕು. SC/ST ಜನಾಂಗದಲ್ಲಿ ಓದಿದಂಥ ಯುವಕರು ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ಹೊರಗಡೆ ಅವಕಾಶವಿದೆ. ಸರ್ಕಾರದ ಕೆಲಸವೇ ಆಗಬೇಕೆಂದಿಲ್ಲ. ಅವರು paramedical worker ಆಗಬೇಕು, ಅವರಿಗೆ training ಕೊಡಿ. ಸುಮಾರು 5 ಲಕ್ಷ ಜನರಿಗೆ ಉದ್ಯೋಗ ಒಂದೇ ದಿವಸದಲ್ಲಿ ಕೊಡತಕ್ಕಂಥ ಅವಕಾಶವಿದೆ. ಖಾಸಗಿ hospital ಗಳಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿದೆ. ಅದಕ್ಕೆ ವ್ಯವಸ್ಥೆ

ಮಾಡಿ. Degree college ಗಳಿದ್ದು, ಅಲ್ಲಿ hostel ಗಳಿಲ್ಲ. SC/ST ಜನಾಂಗದ ಹೆಣ್ಣುಮಕ್ಕಳು ಒಬ್ಬರೂ degree ಓದುತ್ತಿಲ್ಲ. ಎಲ್ಲೋ ಒಬ್ಬರು ನೌಕರುದಾರರ ಮಕ್ಕಳು, ಸಿಟಿಯೊಳಗೆ ಇದ್ದವರ ಮಕ್ಕಳು, ಅಲ್ಲೊಬ್ಬರು, ಇಲ್ಲೊಬ್ಬರು ಓದುತ್ತಾರೆ. ಎಲ್ಲಿ degree college ಗಳಿವೆ, ಅಲ್ಲೊಂದು girls hostel, ಒಂದು boys hostel ಅನ್ನು ಪ್ರಾರಂಭ ಮಾಡಬೇಕು. ಯಾವ ಊರಿನಲ್ಲಿ degree college ಇದೆಯೋ ಅಲ್ಲಿ invariably hostels ಪ್ರಾರಂಭವಾಗಬೇಕು. ಹಾಗಾದಾಗ ಶಿಕ್ಷಣ ಸಿಗುತ್ತದೆ, ಇಲ್ಲದಿದ್ದರೆ ಶಿಕ್ಷಣ ಸಿಗುವುದಕ್ಕೆ ಸಾಧ್ಯವಿಲ್ಲ. ನಾನು ಸಾರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಭೂಮಿ ಖರೀದಿ ಮಾಡಲಿ. ಈ ಬಗ್ಗೆ ಶ್ರೀನಿವಾಸಪ್ರಸಾದ್ ಸಾಹೇಬರು cabinet ನಲ್ಲಿ ಹೇಳಲಿ. 16 ಸಾವಿರ ಕೋಟಿ ರೂಪಾಯಿಗಳಲ್ಲಿ SC/ST ಜನಾಂಗದವರಿಗೆ ಈ ವರ್ಷಕ್ಕೆ 2 ಸಾವಿರ ಕೋಟಿ ರೂಪಾಯಿಗಳನ್ನಾದರೂ ಭೂಮಿ ಖರೀದಿಗೆ ಇಡಿ. ತಾಂಡಾಗಳನ್ನು ಅಭಿವೃದ್ಧಿ ಮಾಡಿ. ಗೊಲ್ಲರ ಹಟ್ಟಿಗಳನ್ನು ಅಭಿವೃದ್ಧಿ ಮಾಡಿ. ಇನ್ನೂ ಅನೇಕ ಭೋವಿ ಹಟ್ಟಿಗಳಿವೆ, ಗೊಲ್ಲರ ಹಟ್ಟಿಗಳಿವೆ ಮತ್ತು ಶಿಳ್ಳೆಕ್ಯಾತರು ಎನ್ನುವವರಿದ್ದಾರೆ, ಅವರೆಲ್ಲ ಇವತ್ತಿಗೂ ಮನುಷ್ಯರಂತೆ ಬಾಳುವ ಪರಿಸ್ಥಿತಿಯಲಿಲ್ಲ. ಅಲ್ಲಿ ಮೂಲಭೂತ ಸೌಕರ್ಯಗಳಿಲ್ಲ, ರಸ್ತೆ ಇಲ್ಲ, ಶಾಲಾ ಕಾಲೇಜುಗಳಿಲ್ಲ. ಹೀಗಾಗಿ ಯಾವ ರೀತಿ ಅವರನ್ನು ಅಭಿವೃದ್ಧಿ ಮಾಡುತ್ತೀರಿ? ಅದಕ್ಕೆ ಹೆಚ್ಚಿನ ಹಣ ಕೊಡಿ. ಹರಿಜನ ಕೇರಿಗಳನ್ನು ಅಭಿವೃದ್ಧಿ ಮಾಡಿ. ಅವರು ಇರಲಿಕ್ಕೆ ಒಳ್ಳೆಯ ಮನೆಗಳನ್ನು ಕೊಡಿ. ಅವರ ಮಕ್ಕಳಿಗೆ ಶಿಕ್ಷಣ ಕೊಡಿ. ಪಂಚಾಯತಿಗೆ ಒಂದರಂತೆ ವಸತಿ ಶಾಲೆಗಳನ್ನು ಪ್ರಾರಂಭ ಮಾಡಿ. Pre-metric ನಿಂದ up to SSLC ವರೆಗೂ ಓದತಕ್ಕಂಥ ಅವಕಾಶ ಮಾಡಿಕೊಡಿ. ಮುಂದಿನ ಜನಾಂಗ ಉದ್ಧಾರವಾಗುತ್ತಾರೆ. ಕೇವಲ ನಾವು ಅಕ್ಕಿ, ಗೋಧಿ ಕೊಟ್ಟು ಹೋದರೆ ಸಾಕಾಗುವುದಿಲ್ಲ. ಅವರು ಅವರ ಕಾಲಮೇಲೆ ನಿಂತು ಬದುಕುವ ಹಾಗೆ ಮಾಡಬೇಕು. ಆ ಗುರಿ ಸರ್ಕಾರಕ್ಕಿರಬೇಕು. ಅಲ್ಲಿ ಎಲ್ಲೋ ಒಂದು ಕಡೆಗೆ ಅದರ ಕೊರತೆ ಎದ್ದು ಕಾಣುತ್ತಿದೆ. ಸರ್ಕಾರದ ಕಡೆಯಿಂದ ನೀವು ಹಣ ಹೆಚ್ಚು ಕೊಟ್ಟಿದ್ದೀರಿ, ಜನಸಂಖ್ಯೆಗೆ ಅನುಗುಣವಾಗಿ ಕೊಟ್ಟಿದ್ದೀರಿ. ಅದರ ಬಗ್ಗೆ ನನ್ನ ಎರಡು ಮಾತಿಲ್ಲ. ಆದರೆ, ಕಾರ್ಯಕ್ರಮಗಳು

ಅವರ ಪರವಾಗಿ ಇರಬೇಕಲ್ಲವೇ? ಆ ಕಾರ್ಯಕ್ರಮಗಳು ಆಗಬೇಕು. Driver ಗಳ ಕೊರತೆ ಇದೆ. ಪ್ರತಿ ಜಿಲ್ಲೆಯಲ್ಲಿ ತಲಾ 40 ಹುಡುಗರಿಗೆ training ಕೊಡಿ. ಅಲ್ಲಿಯೇ ಸರ್ಕಾರದಿಂದಲೇ driving licence ಕೊಡಿ. ಖಾಸಗಿ ವ್ಯವಸ್ಥೆಯೊಳಗೆ ಅವರು ಬದುಕುತ್ತಾರೆ. ಅವರಿಗೇನೂ ಸರ್ಕಾರ ಕೆಲಸ ಕೊಡಬೇಕಾಗಿಲ್ಲ. ಇವತ್ತು ವಾಹನಗಳ ಸಂಖ್ಯೆ ಸಾಕಷ್ಟು ಇದೆ. ಖಾಸಗಿಯವರು ಯಾರು ಬೇಕಾದರೂ ಜಯಚಂದ್ರ ಸಾಹೇಬರಂತಹವರು ಮನೆಯೊಳಗೆ ಒಬ್ಬರು car driver ಅನ್ನು ಇಟ್ಟುಕೊಂಡರೆಂದರೆ ಮಾಸಿಕ 10–12 ಸಾವಿರ ರೂ. ಸಂಬಳ ಎಂದು ಕೊಡುತ್ತಾರೆ. ಇದರಿಂದ ಅವನು ಬದುಕಿಯೇ ಬದುಕುತ್ತಾನೆ. ದಿನಾ 100 ರೂ. ಭತ್ಯೆ ಕೊಡುತ್ತಾರೆ. ಒಬ್ಬ driving licence ಇರತಕ್ಕಂಥ ಸುಮಾರು 15–16 ಸಾವಿರ ರೂ.ಗಳನ್ನು ತೆಗೆದುಕೊಂಡು ಬದುಕಲಿಕ್ಕೆ ಸಾಧ್ಯವಿದೆ. ದಯಮಾಡಿ ಅದಕ್ಕೆ ವ್ಯವಸ್ಥೆ ಮಾಡಿ. ಇದು ಸರ್ಕಾರದ ಕಳಕಳಿ ಕಾಳಜಿಯಾಗಬೇಕು. Paramedical workers, ಏನಾಗಿದೆ ಎಂದರೆ, SC/ST ಹುಡುಗರು easy ಯಾಗಿ ತಿಳಿದುಕೊಂಡು ಮತ್ತು ಅವರ ಪರಿಸ್ಥಿತಿಯೂ ಹಾಗೆಯೇ ಇದೆ. ಏಕೆಂದರೆ, ಸಾವಿರ ಸಾವಿರ ವರ್ಷಗಟ್ಟಲೆ ಊರು ಹೊರಗಡೆ ಬದುಕಿದಂಥವರು. ಜನರ ಮಧ್ಯೆ ಇಲ್ಲ. ಜನರು ಅವರನ್ನು ಮುಟ್ಟಿಸಿಕೊಂಡಿಲ್ಲ. ಇವತ್ತಿಗೂ ಹಳ್ಳಿಯಲ್ಲಿ ಅದೇ ಪರಿಸ್ಥಿತಿ ಇದೆ. ಅವರಿಗೆ ನೀವು paramedical worker, job oriented cource ಬಗ್ಗೆ ಮಾಡಿರಿ. ಇನ್ನು ಕುಲದ ಕಸುವನ್ನು ನಂಬಿ ಬದುಕತಕ್ಕಂಥವರು ಇದ್ದಾರೆ. ಕುಂಬಾರರಿದ್ದಾರೆ, ಕಂಬಾರರು ಇದ್ದಾರೆ, ಬಡಗಿತನ ಮಾಡುತ್ತಾರೆ, ಚಪ್ಪಲಿ ಹೊಲಿಯುವವರು ಇದ್ದಾರೆ, ಅವರಿಗೂ ಉದ್ಯೋಗ ಕೊಡಿ. ಅವರನ್ನು train up ಮಾಡಿ. ಆಧುನಿಕ ಜಗತ್ತಿನ ಬೇಕು–ಬೇಡಗಳಿಗೆ, ಬೇಡಿಕೆಗಳಿಗೆ ಸ್ಪಂದಿಸುವಂಥ ಕೆಲಸವನ್ನು ಅವರೂ ಕೂಡ ಮಾಡುವ ಹಾಗೆ ಅವರನ್ನು ತಯಾರು ಮಾಡಿದಿರೆಂದರೆ ಖಂಡಿತವಾಗಿ ನಿಮ್ಮ ಸರ್ಕಾರಕ್ಕೆ ಪುಣ್ಯ ಬರುತ್ತದೆ.

ಉಪಾಧ್ಯಕ್ಷರು:– Time ಆಯಿತು. Conclude ಮಾಡಿ. ಬಹಳ ಹೊತ್ತಾಯಿತು.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ನಾನು ಬಹಳ ಹೊತ್ತು ಚರ್ಚೆಗೆ ಸಮಯ ತೆಗೆದುಕೊಂಡಿಲ್ಲ. ಬಹಳ ಮಹತ್ವದ ಒಂದು ವಿಷಯವನ್ನು ಬಿಟ್ಟಿದ್ದೇನೆ.

ಉಪಾಧ್ಯಕ್ಷರು:- ಎಲ್ಲಾ ವಿಷಯವನ್ನೂ cover ಮಾಡುವುದಕ್ಕಾಗುವುದಿಲ್ಲ. Time ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರು ನಾಳೆ ಮಾತನಾಡುವವರಿದ್ದಾರೆ. ಅದಕ್ಕಾಗಿ ದಯಮಾಡಿ ನನಗೆ ಅರ್ಧ ಗಂಟೆ ಹೆಚ್ಚಿಗೆ ಅವಕಾಶ ಕೊಡಿ.

ಉಪಾಧ್ಯಕ್ಷರು:- ಇಲ್ಲ, ಈಗಾಗಲೇ ತಾವು ಒಂದೂವರೆ ಗಂಟೆ ಸಮಯ ತೆಗೆದುಕೊಂಡಿದ್ದೀರಿ, ಬೇಗ ಮುಗಿಸಿ

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ನೀರಾವರಿ ಯೋಜನೆಯ ಬಗ್ಗೆ ಹೇಳುವುದಾದರೆ, ಏಕೆಂದರೆ ನಾನು ಬರಗಾಲದ ಪ್ರದೇಶದಿಂದ ಬಂದವನು. ನೀರು, ನೀರು, ನೀರು ಎಂದು ಹೇಳಿ 350 ವರ್ಷಗಳಿಂದ ಹಲುಬಿಕೊಂಡು ಬಂದಿದ್ದೇವೆ. ನಮ್ಮ ಬೇಡಿಕೆ ಇವತ್ತು ನಿನ್ನೆಯದಲ್ಲ. ಬ್ರಿಜೇಶ್ ಕುಮಾರ್ ರವರ ನೀರಿನ ಹಂಚಿಕೆ ಯ ಆದೇಶ ಬಂದ ಮೇಲೆ, ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗಳು ಇವತ್ತಿನವರೆಗೆ ಪ್ರಾರಂಭವಾಗಲಿಲ್ಲ. ಮಾನ್ಯ ಬಸವರಾಜ ಬೊಮ್ಮಾಯಿರವರು ಈಗ ಇಲ್ಲಿದ್ದರು, ಅವರು ಹೊರಗಡೆ ಹೋಗಿರಬಹುದು. 2012 ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ್‌ರವರು ಇದ್ದಾಗ, ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗಳಿಗಾಗಿ 17,200 ಕೋಟಿ ರೂಪಾಯಿಗಳ ಆಡಳಿತಾತ್ಮಕ ಅನುಮೋದನೆ ನೀಡಿ, 22 ಹಳ್ಳಿಗಳ ಪುನರ್ವಸತಿ ಮಾಡತಕ್ಕಂಥದ್ದಕ್ಕೆ land acquisition ಪ್ರಾರಂಭ ಮಾಡಿ ಎಂದರು. ಮಾಡಲೇ ಇಲ್ಲ. ಹೊಸ land acquisition policy ಬಂದಿದೆ, ಅದಕ್ಕಾಗಿ ನಮಗೆ ಕಷ್ಟವಾಗಿದೆಂದು ಇವತ್ತು ಉತ್ತರ ಕೊಡುತ್ತಾರೆ. ಸರ್ಕಾರ ಬಂದು ಎರಡು ವರ್ಷಗಳಾಯಿತಲ್ಲ, ನಿಮ್ಮ ಬದ್ಧತೆ ಎಲ್ಲಿ ಹೋಯಿತು? ಹತ್ತು

ಸಾವಿರ ಕೋಟಿ ಕೊಡುತ್ತೇವೆಂದು ಹೇಳಿ, ಕೂಡಲ ಸಂಗಮನಾಥನ ಸಾಕ್ಷಿಯಾಗಿ ಆಣೆ ಮಾಡಿ ಬಂದಿರಿ. ಆಲಮಟ್ಟಿಯವರೆಗೆ ನಡೆದುಕೊಂಡು ಹೋದಿರಿ. ನಡೆಯುವ ಅಭ್ಯಾಸ ಇಲ್ಲದಕ್ಕಾಗಿ ಕಾಲುಗಳು ಆನೆ ಕಾಲಿನ ರೀತಿಯಲ್ಲಿ ಆಗಿದ್ದವು. ಎ.ಎಸ್. ಪಾಟೀಲ್‌ರವರೆ, ಕಾಲುಗಳು ಆನೆ ಕಾಲಿನ ರೀತಿಯಲ್ಲಿ ಆಗಿದ್ದವು. ತಾವು ಕುಳಿತುಕೊಳ್ಳಿ ಆಮೇಲೆ ಹೇಳುವಂತಿರಿ, ನಾನು ನಿಮಗೆ ನೆನಪು ಮಾಡಿದೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):- ಆಲಮಟ್ಟಿ ಡ್ಯಾಂ ಚಾಲೂ ಆದಾಗಿನಿಂದ ಯಾರ್ಯಾರು ಎಷ್ಟು ಕೊಟ್ಟರು ಎನ್ನುವ ಎಲ್ಲಾ ಡಿಟೇಲ್ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:- ಸರ್ಕಾರ ಹೇಳುತ್ತದೆ ಬಿಡಿ. ನಮ್ಮ ನೀರಾವರಿ ಮಂತ್ರಿಗಳು ಸದನದಲ್ಲಿ ಇಲ್ಲ. 2017-18 ಕ್ಕೆ 3ನೇ ಹಂತದ ಕಾಮಗಾರಿಗಳನ್ನು ಪೂರ್ಣ ಮಾಡುತ್ತೇವೆ, ನೀರು ಕೊಡುತ್ತೇವೆ, ನಂದನವನ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇವರು ಎರಡು ವರ್ಷಗಳಲ್ಲಿ ಕೊಟ್ಟಿರುವ ಹಣ, ಖರ್ಚು ಮಾಡಿರುವ ಹಣ ನೋಡಿ. 2013-14 ನೇ ಸಾಲಿನಲ್ಲಿ 9 ಯೋಜನೆಗಳಿಗೆ 914 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. 2014-15 ನೇ ಸಾಲಿನಲ್ಲಿ 909 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಇದು ಇವರ ಬದ್ಧತೆ. 50 ಸಾವಿರ ಕೋಟಿ ರೂಪಾಯಿಗಳ ಕಾಮಗಾರಿಗಳು ಇವೆ. 50 ಸಾವಿರ ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಮುಗಿಸಲಿಕ್ಕೆ ಈ rate ನಲ್ಲಿ ಹೋದರೆಂದರೆ ಎಷ್ಟು ಬೇಕಾಗಬಹುದು ಸಾರ್? ಕೃಷ್ಣಾ ಮೇಲ್ದಂಡೆ ಯೋಜನೆಗೆ 1964 ರಲ್ಲಿ ಅಡಿಗಲ್ಲು ಹಾಕಿದ್ದು, 2014 ಆದರೂ ಅದು ಮುಗಿದಿಲ್ಲ, 2015 ಕ್ಕೆ ಕಾಲಿಟ್ಟಿದ್ದೇವೆ. 50 ವರ್ಷಗಳಾಗಿವೆ, ಇನ್ನೂ 50 ವರ್ಷಗಳು ಬೇಕೆ? ಹತ್ತು ಸಾವಿರ ಕೋಟಿಯಂತೆ ಕೊಟ್ಟರೆಂದರೆ ನೀವು ಪೂರ್ಣ ಮಾಡಲಿಕ್ಕಾಗುವುದಿಲ್ಲ. ಪ್ರತಿ ವರ್ಷ ಹದಿನೈದು ಸಾವಿರ ಕೋಟಿಯಂತೆ ಕೊಟ್ಟರೆಂದರೆ ಬಹುಶಃ ನಿಮ್ಮ ಅವಧಿಯೊಳಗೆ ಮುಗಿಸಿ ಹೋಗುತ್ತೀರಿ ಎನ್ನತಕ್ಕಂಥ ವಿಶ್ವಾಸ ನಮಗೆ ಬರುತ್ತದೆ. ಇರದಿದ್ದರೆ, ಆ ಜನರ vote ಏನು ತೆಗೆದುಕೊಂಡಿದ್ದೀರಿ, ಮೋಸ ಮಾಡಿ, ದ್ರೋಹ ಮಾಡಿದಂಗೆ

ಆಗುತ್ತದೆ. ಈಗ ಮಾನ್ಯ ಮುಖ್ಯಂತ್ರಿಗಳಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಲಿಕ್ಕೆ ಬಯಸುತ್ತೇನೆ. ನೀವು ಯಾವ ಜನರಿಂದ vote ತೆಗೆದುಕೊಂಡಿರಿ, ಅವರಿಗೇನು promise ಮಾಡಿದಿರಿ, ಕೂಡಲ ಸಂಗಮನಾಥನ ಸಾಕ್ಷಿಯಾಗಿ ಹೇಳಿದ್ದೇವೆಂದು ಹೇಳಿದಿರಿ, ಅದಕ್ಕೆ ದ್ರೋಹವಾಗುತ್ತದೆ, ಮೋಸವಾಗುತ್ತದೆ, ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ನಿಮ್ಮ ಆತ್ಮದಲ್ಲಿರತಕ್ಕಂಥ ಕೂಡಲ ಸಂಗಮನಾಥನೂ ನಿಮ್ಮನ್ನು ಕ್ಷಮಿಸುವುದಿಲ್ಲ. ಮಾನ್ಯ ಜಯಚಂದ್ರರವರೆ, ಕೂಡಲ ಸಂಗಮನಾಥನೂ ನಿಮ್ಮನ್ನು ಕ್ಷಮಿಸುವುದಿಲ್ಲ. ಅವರು ಕೂಡ ಅಲ್ಲಿಗೆ ಬಂದಿದ್ದರು, ಕಡೆಯ ದಿನ ಅವರು ಬಂದು ಭಾಷಣ ಮಾಡಿದರು.

ಶ್ರೀ ಬಿ.ಎ. ಬಸವರಾಜ:– ನೀವು ಹೇಳಿದ್ದೆಲ್ಲ ಮಾಡಿದ್ದರೆ ಹೀಗೆ ಏಕೆ ಇರುತ್ತಿತ್ತು? ಸದನಕ್ಕೆ ತಪ್ಪು ಮಾಹಿತಿ ಕೊಡಬೇಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ನಾನು ಸರ್ಕಾರಕ್ಕೆ ಏನು ಹೇಳಲಿಕ್ಕೆ ಬಯಸುತ್ತೇನೆಂದರೆ, ಒಂದು ನಿಮಿಷ ಕುಳಿತುಕೊಳ್ಳಿ, ನೀವು ಆಮೇಲೆ ಮಾತನಾಡಿ. ನಾನು ಏನು ಹೇಳುತ್ತೇನೆಂದರೆ, irrigation ನಿಮ್ಮ priority ಹೌದೋ ಅಲ್ಲವೋ? ಯಾವ ಜನ 350 ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿ ಗುಳೇ ಹೋಗುತ್ತಿದ್ದಾರೆ. ಮಂಗಳೂರಿನಲ್ಲಿ ಬಿಜಾಪುರದವರ camp ಎಂದು ಇದೆ. ರಾಯಚೂರಿನವರ camp ಎಂದು ಇದೆ, ಗುಲ್ಬರ್ಗಾದವರ camp ಎಂದು ಇದೆ, ಅದೇ ರೀತಿಯಲ್ಲಿ ಸೋಲಾಪುರದಲ್ಲಿ ಸುಮಾರು ನೂರು ವರ್ಷಗಳಿಂದ ನಮ್ಮ ಬಿಜಾಪುರದ ಒಂದು ಲಕ್ಷ ಜನ ಗುಳೇ ಹೋಗಿ ಅಲ್ಲಿದ್ದಾರೆ. ಅವರು ಬಂದಿಲ್ಲ. ಕುಡಿಯುವ ನೀರಿಗಾಗಿ ಹಲುಬತಕ್ಕಂಥ ಜನ, ನೀರಾವರಿ ಯೋಜನೆಯಾಗಬೇಕೆಂದು ಇಡೀ ವಿಶ್ವದಲ್ಲಿ ಯಾರೂ ಮಾಡಲಾರದಂಥ ಕೆಲಸವನ್ನು ಬಿಜಾಪುರದ ಜನರು ಮಾಡಿದ್ದಾರೆ. ಬಂಗಾರದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ತೂಗಿದ್ದೇವೆ. ಎ.ಎಸ್. ಪಾಟೀಲ್‌ರವರೆ ಇದು ನಿಮಗೆ ನೆನಪು ಇದೆಯಲ್ಲವೆ? ನೀರಾವರಿ ಯೋಜನೆಗೆ ಪ್ರಧಾನ ಮಂತ್ರಿಗಳನ್ನು ಬಂಗಾರದಲ್ಲಿ ತೂಗಿರುವ ಉದಾಹರಣೆ ಇದೆಯೆ? ನಾವು ತೂಗಿದ್ದೇವೆ. ನಾನು high school ನಲ್ಲಿ

ಓದುತ್ತಿದ್ದೆ. ಆ ಕಾರ್ಯಕ್ರಮದಲ್ಲಿ ನಿಂತಂಥ ಹೆಣ್ಣು ಮಕ್ಕಳು ತೂಕ ಬರಲಿಲ್ಲವೆಂದು ಕಿವಿಯಲ್ಲಿನ ಬೆಂಡೋಲೆ ಬಿಚ್ಚಿ ಹಾಕಿದರು. ಕೊರಳಲ್ಲಿ ಹಾಕಿಕೊಂಡಿರುವ ಗುಂಡುಗಡಿಗೆ, ಡಾಬುಗಳೇನು ಇದ್ದವು ಆ ಎಲ್ಲವನ್ನೂ ತೆಗೆದು ತೂಕಕ್ಕೆ ಹಾಕಿದರು. ಅವರ ಶಾಪ ನಿಮಗೆ ಹತ್ತುತ್ತದೆ. ಅವರ ಹೆಸರಿನ ಮೇಲೆ ನೀವು ಅಧಿಕಾರಕ್ಕೆ ಬಂದಿದ್ದೀರಿ. ಮಾನ್ಯ ಎಂ.ಬಿ. ಪಾಟೀಲ್‌ರವರಿಗೆ ಹೇಳಲಿಕ್ಕೆ ಬಯಸುತ್ತೇನೆ, ಆದರೆ ಅವರು ಈಗ ಇಲ್ಲಿ ಇಲ್ಲ. ಎ.ಎಸ್. ಪಾಟೀಲ್‌ರವರೆ ತಾವು ಮಾನ್ಯ ಎಂ.ಬಿ. ಪಾಟೀಲ್‌ರವರು ಬಂದ ಮೇಲೆ ಅವರಿಗೆ ಹೇಳಿ. ಈ ಯೋಜನೆ ಅವರ ಅವಧಿಯೊಳಗೆ ಮುಗಿಯಲಿಲ್ಲವೆಂದರೆ, ಕಾರ್ಯಗತವಾಗಲಿಲ್ಲವೆಂದರೆ ಬಿಜಾಪುರದ ಜನ ಶಾಶ್ವತವಾಗಿ ನಿಮಗೆ ಶಾಪ ಹಾಕುತ್ತಾರೆಂದು ಹೇಳಿ. ನಾನು ಏನು ಹೇಳುತ್ತಿದ್ದೇನೆಂದರೆ, ಶಾಶ್ವತವಾಗಿ ಶಾಪ ಹಾಕುತ್ತಾರೆ. ಶಾಪಕ್ಕೆ ಗುರಿಯಾಗಬೇಡಿ, ಋಣ ತೀರಿಸತಕ್ಕಂಥ ಕೆಲಸ ಮಾಡಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):- ನನಗಿಂತಲೂ ಅವರು ನಿಮಗೆ ಒಳ್ಳೆಯ ಸ್ನೇಹಿತರು, ಹೀಗಾಗಿ ನೀವೇ ಅವರಿಗೆ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:- ಇರಲಿ ಬಿಡಿ.

ಉಪಾಧ್ಯಕ್ಷರು:- ಕಾರಜೋಳರವರೆ, time ಆಯಿತು ಮುಗಿಸಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ಇನ್ನು ಎರಡು ವಿಚಾರಗಳನ್ನು ಹೇಳಿ ನನ್ನ ಮಾತು ಮುಗಿಸಿ ಬಿಡುತ್ತೇನೆ. ನಾನು ಸರ್ಕಾರಕ್ಕೆ ಕಳಕಳಿಯ ಪ್ರಾರ್ಥನೆ ಮಾಡುತ್ತೇನೆ. ಈ ಸುಳ್ಳು ಭರವಸೆಗಳನ್ನು, ಈ ಸುಳ್ಳು statement ಗಳನ್ನು ಕೊಟ್ಟು ಜನರನ್ನು ಮೂರ್ಖರನ್ನಾಗಿಸುವ ಪ್ರಯತ್ನ ಮಾಡಬೇಡಿ ಎಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ನಮ್ಮ ಶಿಕ್ಷಣ ಮಂತ್ರಿಗಳು ಇಲ್ಲ, ಎಲ್ಲೋ ಹೋಗಿದ್ದಾರೆ. ಶಿಕ್ಷಣಕ್ಕೆ ಈ ವರ್ಷ 16,204 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. ಶಿಕ್ಷಕರನ್ನು ಕೊಡಿ, ಶಾಲೆಗಳಿಗೆ ಕಟ್ಟಡಗಳನ್ನು ಕೊಡಿ. ಬಡವರ ಮಕ್ಕಳಿಗೆ ಸರ್ಕಾರಿ ಪ್ರೌಢ ಶಾಲೆ, ಕಾಲೇಜುಗಳಲ್ಲಿ admission ಆಗುತ್ತಿಲ್ಲ. ಏಕೆಂದರೆ, ಕೂರಲಿಕ್ಕೆ room ಇಲ್ಲ. ಶಿಕ್ಷಕರ ಕೊರತೆ ಇದೆ. ಈಗ

ಬಡವರೇ ಬರುತ್ತಾರೆ. ನಿಮಗೆ ಯಾರು vote ಹಾಕಿದ್ದಾರೆ, ಅವರೇ ಅಲ್ಲಿಗೆ ಸರ್ಕಾರಿ ಶಾಲಾ–ಕಾಲೇಜುಗಳಿಗೆ ಬರತಕ್ಕಂಥವರು. ಈ ಕಡೆಗೆ ಕುಳಿತಕ್ಕಂಥವರಿಗೆ ಅದರ ಬಿಸಿ ಬಹಳ ಇಲ್ಲ, ಆ ಕಡೆ ಕುಳಿತಕ್ಕಂಥವರಿಗೆ ಅದರ ಬಿಸಿ ಬಹಳ ಇದೆ. ಮುಸಲ್ಮಾನರು, ಹರಿಜನ–ಗಿರಿಜನರು, ಲಂಬಾಣಿಗಳು, ಬೋಬಿಗಳು, ಗೊಲ್ಲರು, ಇಂಥ ಹಿಂದುಳಿದ ಜನ ನಿಮಗೆ vote ಹಾಕಿದ್ದಾರೆ. ಅವರ ಋಣ ನೀವು ತೀರಿಸಬೇಕಲ್ಲವೆ? ಅವರ ಮಕ್ಕಳನ್ನು ವಿದ್ಯಾವಂತವರನ್ನಾಗಿ ಮಾಡಬೇಕಲ್ಲವೆ? ಸ್ವಾತಂತ್ರ್ಯ ಬಂದು 67 ವರ್ಷಗಳ ನಂತರವೂ ಕೂಡ literacy percentage 60% ಇದೆ ಎಂದರೆ, ನಾವು ಏನೆಂದುಕೊಳ್ಳಬೇಕು? ಅದಕ್ಕೆ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ, ಕೂಡಲೇ ಶಿಕ್ಷಕರನ್ನು ನೇಮಿಸಿ, ಮೂಲಭೂತ ಸೌಕರ್ಯಗಳನ್ನು ಕೊಡಿ, ಶಾಲಾ–ಕಟ್ಟಡಗಳನ್ನು ನಿರ್ಮಾಣ ಮಾಡಿ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ಮೊದಲು ಬಹಳ ಖುಷಿಪಟ್ಟಿದ್ದೆ. ಶ್ರೀಮತಿ ಉಮಶ್ರೀಯವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಂತ್ರಿಯಾದ ಮೇಲೆ, ಈ ರಾಜ್ಯದಲ್ಲಿರತಕ್ಕಂಥ ದೇವದಾಸಿ ಹೆಣ್ಣುಮಕ್ಕಳು, ವಿಧವೆಯರು, ಅಂಗವಿಕಲರು, ನಿರ್ಗತಿಕ ಹೆಣ್ಣು ಮಕ್ಕಳಿಗೆ ಒಂದು ವರದಾನವಾಗುತ್ತದೆ ಎಂದು ಭಾವಿಸಿದ್ದೆ, ಆದರೆ ಅದು ಆಗಲಿಲ್ಲ. ದೇವದಾಸಿ ಹೆಣ್ಣುಮಕ್ಕಳು, ಯಾರು ಸಮಾಜದಲ್ಲಿ ತಮ್ಮ ದೇಹವನ್ನು ಮಾರಿಕೊಂಡು ಬದುಕುತಕ್ಕಂಥವರಿಗೆ, ಮುಪ್ಪಾವಸ್ಥೆಯಲ್ಲಿರುವಂಥವರಿಗೆ 9 ತಿಂಗಳಿನಿಂದ ಅವರಿಗೆ pension ಕೊಡಲಿಕ್ಕೆ ಆಗಲಿಲ್ಲವೆಂದರೆ ಇದಕ್ಕೆ ಸರ್ಕಾರ ಎನ್ನಬೇಕೆ? ಇವರಿಗೆ ಮಂತ್ರಿ ಎನ್ನಬೇಕೆ? ನಾನು ಬಹಳ ಆಲೋಚನೆ ಮಾಡಿದ್ದೆ, ಶ್ರೀಮತಿ ಉಮಾಶ್ರೀಯವರು ಚುನಾವಣೆಯ ಸಂದರ್ಭದಲ್ಲಿ, ಮನೆ ಮನೆಗೆ ಹೋಗಿ ಹೇಗೆ ಹೇಳಿದರು ಎಂದರೆ, every day ನಿಮ್ಮ ಮನೆಗೆ ಭೇಟಿ ನೀಡುತ್ತೇನೆ, ನಿಮ್ಮ ಸಮಸ್ಯೆಗಳನ್ನು ಪರಿಹಾರ ಮಾಡುತ್ತೇನೆಂದು ಹೇಳಿದವರು, ಆ ತಾಯಿ ಎಲ್ಲಿ ಹೋದಳೋ ಗೊತ್ತಿಲ್ಲ, ನಮ್ಮವ್ವ ಹಡದವ್ವ, ಜನ ನಂಬಿ vote ಹಾಕಿದರು. ಅವರ ಬಗ್ಗೆ ಕಾಳಜಿ ಮಾಡದೇ ಹೋದರೆ, ಅವರ ಶಾಪ ನಿಮಗೆ ತಟ್ಟುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು:- ಆಯಿತು close ಮಾಡಿ ಸಾಕು.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರು ಏಕೋ ಬಹಳ ಅವಸರ ಮಾಡಿದರು. ಕುಡಿಯುವ ನೀರಿನ ಬಗ್ಗೆಯಂತೂ ಹೇಳಿದ್ದೇವೆ.

ಉಪಾಧ್ಯಕ್ಷರು:- ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಆ ಬಗ್ಗೆ ಹೆಚ್ಚು ಹೇಳತಕ್ಕಂಥ ಪ್ರಯತ್ನ ಮಾಡುವುದಿಲ್ಲ. ಮಾನ್ಯ ಉಪಾಧ್ಯಕ್ಷರೆ, ಒಟ್ಟಾರೆಯಾಗಿ ಸರ್ಕಾರಕ್ಕೆ ನನ್ನ ಸಲಹೆ ಇಷ್ಟೆ. ಒಂದು ಉತ್ತಮ ಆಡಳಿತ ಕೊಡಬೇಕೆಂದರೆ ನಾವು ಹಾಕಿಕೊಂಡಂಥ ಕಾರ್ಯಕ್ರಮಗಳು ಅನುಷ್ಠಾನವಾಗಬೇಕು, ಬಜೆಟ್‌ನಲ್ಲಿ 100ಕ್ಕೆ 100ರಷ್ಟು ಹಣ ಬಿಡುಗಡೆಯಾಗಿ ಖರ್ಚಾಗಬೇಕು. ನಾವೇನು estinated receipts ಇಟ್ಟುಕೊಂಡಿದ್ದೇವೆ, ಅದನ್ನೆಲ್ಲಾ recovery ಮಾಡಬೇಕಾದರೆ, ಸಂಗ್ರಹ ಮಾಡಬೇಕಾದರೆ, ದಕ್ಷ ಮತ್ತು ಪ್ರಮಾಣಿಕ ಅಧಿಕಾರಿಗಳ ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ಹೇಳಿ ಒಟ್ಟಾರೆಯಾಗಿ ನಾನು ಈ ಸಂದರ್ಭದಲ್ಲಿ ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ. ಜನಪರವಾದ ಸರ್ಕಾರವಾಗಬೇಕು, ಜನರ ಸಮಸ್ಯೆಗಳಿಗೆ ಸ್ಪಂದಿಸುವಂಥ ಸರ್ಕಾರವಾಗಬೇಕು, ಆ ನಿಟ್ಟಿನಲ್ಲಿ ತಾವು ಕೆಲಸ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದುವರೆವಿಗೂ ತಾವು ಮಾಡಿರತಕ್ಕಂಥದ್ದು ನಮಗಂತೂ ಸಮಾಧಾನ ತಂದಿಲ್ಲವೆಂದು ಹೇಳಿ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಕೃಷ್ಣಪ್ಪನವರೆ, ತಾವು ಎಷ್ಟು ಹೊತ್ತು ಮಾತನಾಡುತ್ತೀರಿ? ತಾವು 15 ನಿಮಿಷ ಮಾತನಾಡಿ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):- ಸನ್ಮಾನ್ಯ ಉಪಾಧ್ಯಕ್ಷರೆ, ಪ್ರಪ್ರಥಮವಾಗಿ ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳು, ಕಳೆದ ಬಾರಿ 1,36,000 ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡನೆ ಮಾಡಿದರು. ಈ

ಬಾರಿಯೂ ಸಹ ಇನ್ನು ಮೂರು ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಿದ್ದಾರೆ. ಇದು ಒಟ್ಟಾರೆಯಾಗಿ books ನಲ್ಲಿ ಅಷ್ಟೇ ಬಜೆಟ್ ಆಗುತ್ತಿದೆಯೇ ಹೊರತು, ಇದು ಪ್ರಾಮಾಣಿಕವಾಗಿ implement ಆಗುತ್ತಿಲ್ಲ. ಒಟ್ಟಾರೆ average ತೆಗೆದುಕೊಂಡಾಗ, 50-52% ಕೂಡ ಆಗಿರುವುದಿಲ್ಲ. ಸುಮ್ಮನೆ ವರ್ಷವರ್ಷ ಬಜೆಟ್ ಅನ್ನು 1 ಲಕ್ಷ ಮಾಡಿದ್ದೇವೆ, 1 ಲಕ್ಷದ 30 ಸಾವಿರ ಕೋಟಿ ಮಾಡಿದ್ದೇವೆ, 1 ಲಕ್ಷದ 38 ಸಾವಿರ ಕೋಟಿ ಮಾಡಿದ್ದೇವೆ, 1,50,000 ಕೋಟಿ ಮಾಡಿ ಇದರ ಉಪಯೋಗ ಏನು? ಇದು ಕೇವಲ books ನಲ್ಲಿ ಅಷ್ಟೇ ಬಜೆಟ್ ಆಗಿ ಉಳಿಯುತ್ತದೆ ಅದರ implementation ಆಗಬೇಕು. ಉದಾಹರಣೆಗೆ ನಾವು Agriculture Department ಅನ್ನು ತೆಗೆದುಕೊಂಡಾಗ, ಸುಮಾರು 72% ಈ ರಾಜ್ಯದಲ್ಲಿರುವಂತಹ ರೈತರು ವ್ಯವಸಾಯ ಮತ್ತು Horticulture ಅನ್ನು ನಂಬಿ ಜೀವನ ಮಾಡುತ್ತಿದ್ದಾರೆ. ಆದರೆ ಇದಕ್ಕಾಗಿ ಬಜೆಟ್ ಖರ್ಚಾಗಿರುವುದು ಕೇವಲ 50-52% ಮಾತ್ರ ಇದರಲ್ಲಿ salary ಕಳೆದರೆ percentage ಇನ್ನೂ ಕಡಿಮೆ ಆಗುತ್ತದೆ. 100ಕ್ಕೆ 52% ಹಣವನ್ನು ಖರ್ಚು ಮಾಡಿದ್ದಾರೆ. ಇದರಲ್ಲಿ ಸಂಬಳವನ್ನು ಕಳೆದರೆ 20 ರಿಂದ 22% ಮಾತ್ರ ಆಗುತ್ತದೆ. ಒಟ್ಟಾರೆ ಬಜೆಟ್‌ನಲ್ಲಿ ಕಳೆದ ಬಾರಿ ಕೊಟ್ಟಂತಹ ಸುಮಾರು 3750 ಕೋಟಿ ರೂಪಾಯಿಗಳಲ್ಲಿ ಖರ್ಚಾಗಿರುವುದು ಕಡಿಮೆಯಾಗಿದೆ. ಸಂಬಳವೂ ಸೇರಿ 2144 ಕೋಟಿ ರೂಪಾಯಿಗಳಾಗಿದೆ. ಇದರಲ್ಲಿ ಸುಮಾರು 30% salary ಗೆ ಹೋಗಿದೆ. ಹೀಗಾಗಿ agriculture ಗೆ ಏನೇನು development ಕೊಟ್ಟಂತೆ ಆಗಿದೆ? ಕೇವಲ 20 ರಿಂದ 22% ಮಾತ್ರ ವ್ಯವಸಾಯಕ್ಕೆ ಕೊಟ್ಟಿರುವಂತೆ ಆಗಿದೆಯೇ ಹೊರತು ಸಂಪೂರ್ಣವಾಗಿ ನಾವೇನು ಬಜೆಟ್ ಅನ್ನು ಮಂಡನೆ ಮಾಡುತ್ತೇವೆ, ಜನರ ಆಶೋತ್ತರಗಳು ಏನಿದೆ, ಎಲ್ಲದಕ್ಕೂ ಮಿಗಿಲಾಗಿ ಪ್ರತಿ ದಿವಸ 'ರೈತರೇ ಬೆನ್ನೆಲುಬು' ಎಂದು ನಾವು ಏನು ಭಾಷಣ ಮಾಡುತ್ತೇವೆ ಇದು ಯಾವುದಕ್ಕೂ ಅರ್ಥವಿಲ್ಲ ಎಂದು ನನ್ನ ಭಾವನೆಯಾಗಿದೆ., ಹಾಗಾಗಿ ಈ ಬಾರಿ ಬಜೆಟ್‌ನಲ್ಲಿ ನೀವು ಏನು ಕೊಟ್ಟಿದ್ದೀರಿ, ಈ ಬಜೆಟ್ ಅನ್ನು ಸಂಪೂರ್ಣವಾಗಿ ಖರ್ಚು ಮಾಡಬೇಕು, ಇದು ಎಲ್ಲಿ ಆಗುತ್ತದೆ? ಜಿಲ್ಲಾ ಉಸ್ತುವಾರಿ ಸಚಿವರು ಕೆಡಿಪಿ ಮೀಟಿಂಗ್

ಮಾಡುತ್ತಾರೆ. ಅಲ್ಲಿ ನೀರು ಮತ್ತು ಮಗದೊಂದರ ಬಗ್ಗೆ ಚರ್ಚೆ ಮಾಡುತ್ತೇವೆ. ಯಾವ ಜಿಲ್ಲಾ ಮಂತ್ರಿಗಳು, ಈ ವರ್ಷದ budget allotment ಎಷ್ಟು ಆಗಿದೆ? ಯಾವ್ಯಾವ ಇಲಾಖೆಗೆ ಎಷ್ಟೇಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ನೀವು ಏತಕ್ಕಾಗಿ ಖರ್ಚು ಮಾಡಿಲ್ಲ? ಎಂದು ಪ್ರಶ್ನೆ ಮಾಡಿರುವುದನ್ನು ನಾನು ಒಂದು KDP Meeting ನಲ್ಲಿ ನೋಡಿರುವುದಿಲ್ಲ. ಇಲ್ಲಿ ನಮ್ಮ ಜಿಲ್ಲಾ ಸಚಿವರಾದ ಸನ್ಮಾನ್ಯ Law Minister ರವರು ಈ ಸದನದಲ್ಲಿದ್ದಾರೆ. ಇವರು ಒಂದು ದಿವಸವು PWD ಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? Animal Husbandry Department ಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? Irrigation Department ಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಕುಡಿಯುವ ನೀರಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಯಾವ್ಯಾವ ಬಜೆಟ್‌ನಲ್ಲಿ ಎಷ್ಟೇಷ್ಟು ಹಣವನ್ನು ಖರ್ಚು ಮಾಡಿದ್ದೀರೆಂದು ಈ ಬಗ್ಗೆ ಒಂದು ದಿವಸವೂ ಕೂಡ review ಮಾಡಿರುವುದಿಲ್ಲ. ಇದು ರಾಜ್ಯ ಮಟ್ಟದಲ್ಲಿಯೂ ಅಷ್ಟೇ, ಮಾನ್ಯ ಕಂದಾಯ ಸಚಿವರಾದ ಶ್ರೀ ವಿ. ಶ್ರೀನಿವಾಸ ಪ್ರಸಾದ್‌ರವರು CEO ಗಳ ಸಭೆಯನ್ನು ಕರೆದಿದ್ದೇವೆ, ಡಿ.ಸಿ.ಗಳ ಸಭೆಯನ್ನು ಕರೆದಿದ್ದೇವೆ ಎಂದು ಹೇಳುತ್ತಾರೆ. ನೀವು ಅಂತಹ ಅಧಿಕಾರಿಗಳಿಗೆ instructions ಅನ್ನು ಕೊಡುತ್ತೀರಿ, ಕುಡಿಯುವ ನೀರಿಗೆ ಆದ್ಯತೆ ಕೊಡಿ, ಜನರಿಗೆ ತೊಂದರೆ ಆಗಬಾರದು ಎಂದು ಹೇಳುತ್ತೀರಿ, ಅದನ್ನು ನಾವು ಒಪ್ಪುತ್ತೇವೆ, ಆದರೆ ಒಟ್ಟಾರೆ 1,36,000 ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ ಯಾವ್ಯಾವ ಇಲಾಖೆಗಳಿಗೆ ಎಷ್ಟೆಷ್ಟು ಹಣವನ್ನು allotment ಮಾಡಿದ್ದೇವೆ? ಇದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಏತಕ್ಕಾಗಿ ಖರ್ಚು ಮಾಡಿರುವುದಿಲ್ಲ. What is the lacuna? ಎನ್ನುವುದನ್ನು ಯಾರು ಸಹ ಪ್ರಶ್ನೆ ಮಾಡುತ್ತಿಲ್ಲ. ಅಧಿಕಾರಿಗಳು ಈ ಬಜೆಟ್‌ನ ಬಗ್ಗೆ ಯಾರೂ ಒತ್ತಾಯ ಮಾಡುತ್ತಿಲ್ಲ ಮತ್ತು ಕಾಳಜಿಯೂ ಇಲ್ಲ, ಈ ಬಗ್ಗೆ ಚರ್ಚೆಯೂ ಸಹ ಇಲ್ಲ. ಹೀಗಾಗಿ Agriculture Department ಗೆ ಸರ್ಕಾರವು ಹೆಚ್ಚು ಒತ್ತನ್ನು ಕೊಟ್ಟಿರುವುದಿಲ್ಲ. ಕೇವಲ ಪೇಪರ್‌ನಲ್ಲಿ ಅಷ್ಟೇ budget grant ಅನ್ನು ಕೊಟ್ಟಿದ್ದೀರಿ ಹೊರತು ಅದು ಏನೂ implement ಆಗಿರುವುದಿಲ್ಲ. ಕಳೆದ ಬಾರಿ ರೈತರಿಗೆ ಬೇಕಾದಂತಹ

ಉಪಕರಣಗಳನ್ನು Octomber-November ನಲ್ಲಿ estimate ಮಾಡಿ ಬಾಡಿಗೆಗೆ ತೆಗೆದುಕೊಳ್ಳುತ್ತಾರೆ. ಈ ಎರಡು ತಿಂಗಳಿನಲ್ಲಿ ಇದರ ಅವಶ್ಯಕತೆ ಇದೆಯಾ? ನಾವು ರಾಗಿಯನ್ನು June-July ತಿಂಗಳಿನಲ್ಲಿ ಬಿತ್ತನೆ ಮಾಡುತ್ತೇನೆ. ನೀವು ಆಗ ಬಾಡಿಗೆಗೆ ತೆಗೆದುಕೊಂಡರೆ ರೈತರಿಗೆ ಅನುಕೂಲವಾಗುತ್ತದೆ. ಆದರೆ ನೀವು October-November ತಿಂಗಳಿನಲ್ಲಿ ತೆಗೆದುಕೊಂಡರೆ ಏನು ಉಪಯೋಗ? ಅಧಿಕಾರಿಗಳು ಅದೊಂದು ಬಿಲ್ ಅನ್ನು ಮಾಡಿಕೊಂಡು ಜೇಬಿನೊಳಗೆ ಹಾಕಿಕೊಳ್ಳುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಇದರಿಂದಾಗಿ ನಿಮ್ಮ concept ಅಥವಾ ನಿಮ್ಮ ಚಿಂತನೆ, ರೈತರ ಪರ ಕಾಳಜಿ, ಇವು ಯಾವುದು ಸಹ implement ಆಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಎಲ್ಲದಕ್ಕೂ ಕೂಡ subsidy ಅನ್ನು ಕೊಟ್ಟರು. ಇಲ್ಲಿಯವರೆವಿಗೆ ಯಾವುದೇ ಸರ್ಕಾರಗಳು ರೈತರು ಉಪಯೋಗಿಸುವಂತಹ ಗೊಬ್ಬರಕ್ಕೆ ಒಂದು ರೂಪಾಯಿ subsidy ಅನ್ನು ಕೊಡಲಿಲ್ಲ. ಸರ್ಕಾರವು ಒಂದು ರೂಪಾಯಿಗೆ ಒಂದು ಕೆಜಿ ಅಕ್ಕಿಯನ್ನು ಕೊಡುತ್ತೀರಿ. ನೀವು ಗೊಬ್ಬರಕ್ಕೆ ಸಬ್ಸಿಡಿಯನ್ನು ಕೊಟ್ಟರೆ ಬಹುಶ: ಇನ್ನೂ 100 ಕ್ವಿಂಟಾಲ್ ಜಾಸ್ತಿ ಬೆಳೆಯುತ್ತಾನೆ. ಈ ಬಗ್ಗೆ ಯಾವ ಸರ್ಕಾರಗಳು ಸಹ ಚಿಂತನೆ ಮಾಡಿರುವುದಿಲ್ಲ. ಬಹುಶ: ಈ ರಾಷ್ಟ್ರದ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಹೆಚ್.ಡಿ. ದೇವೇಗೌಡರು ಒಬ್ಬರು ಮಾತ್ರ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ, ಗೊಬ್ಬರಕ್ಕೆ ಒಳ್ಳೆಯ ಸಬ್ಸಿಡಿಯನ್ನು ಕೊಟ್ಟರೆ ಹೊರತು, ಅಲ್ಲಿಂದ ಇಲ್ಲಿಯವರೆವಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವಾಗಲಿ, ನಮ್ಮ ಸರ್ಕಾರವಾಗಲಿ ಯಾರೂ ಸಹ ಅದರ ಬಗ್ಗೆ ಚಿಂತನೆ ಮಾಡಿರುವುದಿಲ್ಲ. ಅಂದರೆ ರೈತನು ಬೆಳೆಯುವುದು ಹೇಗೆ? ಕೇವಲ ನಾವು ಅವರ ಹೆಸರನ್ನು ಹೇಳಿಕೊಂಡು ರಾಜಕೀಯ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ಇಲ್ಲಿ ಪ್ರಾಮಾಣಿಕತೆ ಬೇಕಾಗುತ್ತದೆ. ನಾವು ಏನು ಕಾಳಜಿ ಇಟ್ಟುಕೊಂಡು ಚಿಂತನೆಯನ್ನು ಮಾಡುತ್ತೇವೆ, ಇದರ ಬಗ್ಗೆ ಪ್ರಾಮಾಣಿಕತೆ ಇಲ್ಲದೆ ಇದ್ದರೆ, ರೈತನು ಉದ್ಧಾರವಾಗುವುದಿಲ್ಲ. ತೋಟಗಾರಿಕೆಯ ಬಗ್ಗೆ ಹೇಳುವುದಾದರೆ, ನಮ್ಮ ಕೃಷಿ ಇಲಾಖೆಯು ಹೇಗೆ ಇದೆಯೋ, ಅದೇ

ರೀತಿಯಾಗಿ ತೋಟಗಾರಿಕೆ ಇಲಾಖೆಯು ಅಷ್ಟೇ ಮುಖ್ಯವಾಗಿದೆ. ನಿಮ್ಮ ಕಡೆ ಬಹಳ ಮಾವಿನಹಣ್ಣನ್ನು ಬೆಳೆಯುತ್ತೀರಿ, ನಮ್ಮ ಕಡೆಯಲ್ಲಿ ತೆಂಗು ಮತ್ತು ಅಡಿಕೆಯನ್ನು ಬೆಳೆಯುತ್ತೇವೆ. ಇದಕ್ಕೆ ನೀವು subsidy ಅನ್ನು ಕೊಟ್ಟಿದ್ದೀರಾ? ಅದರ ಬಗ್ಗೆಯೂ ಸಹ ಚಿಂತನೆಯನ್ನು ಮಾಡಬೇಕು. Atleast ಗೊಬ್ಬರಕ್ಕೂ ಸಹ subsidy ಅನ್ನು ಕೊಡುವುದಿಲ್ಲ. ಕಳೆದ ಬಾರಿ 1434 ಕೋಟಿ ರೂಪಾಯಿಗಳು Horticulture Department ಗೆ budget allotment ಆಗಿತ್ತು. ಈ ಸಾರಿ ಕೇವಲ 750 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ನೀವು Horticulture ಗೆ ಹೆಚ್ಚು ಒತ್ತು ಕೊಡುವುದು ಬೇಡವೇ? ಈ ರಾಜ್ಯದಲ್ಲಿ ಉತ್ತರ ಕರ್ನಾಟಕ ಇರಬಹುದು, ಮತ್ತು ದಕ್ಷಿಣ ಕರ್ನಾಟಕ ಇರಬಹುದು, ಈ ಭಾಗ ಇರಬಹುದು. ಪ್ರತಿಯೊಂದು ಸಹ ತೆಂಗು, ಅಡಿಕೆ, ಬಾಳೆ, ಮಾವು, ಈ ರೀತಿಯಾಗಿ ಅನೇಕ horticulture ಬೆಳೆ ಅನ್ನು ಬೆಳೆದು ಜೀವನ ಮಾಡುವವರು ಇದ್ದಾರೆ. ನೀವು ಅವರಿಗೆ ಬಜೆಟ್ ಅನ್ನು ಕಡಿಮೆ ಮಾಡಿರುವುದು ಶೋಚನೀಯವಾದ ವಿಚಾರವಾಗಿದೆ. ಇದರ ಬಗ್ಗೆ ತೂಕ ಮಾಡಿ, ಚಿಂತನೆ ಮಾಡಿದರೆ ಈ ಸರ್ಕಾರಕ್ಕೆ ರೈತರ ಬಗ್ಗೆ ಇರುವಂತಹ ಕಾಳಜಿಯನ್ನು ನಾವು ಇಲ್ಲಿ ಕಾಣಬಹುದಾಗಿದೆ. ಪಶುಸಂಗೋಪನೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ, ಬಹಳ ಸಂತೋಷ. ನಾನು ಇಲ್ಲವೆಂದು ಹೇಳುತ್ತಿಲ್ಲ. ಏಕೆಂದರೆ ನಮ್ಮ Law Minister Deputy Chief Minister ಕೇಳುತ್ತಿದ್ದಾರೆ. ಏತಕ್ಕಾಗಿ ಅಡ್ಡ ಬರಬೇಕೆಂದು ಇದಕ್ಕೆ ಜಾಸ್ತಿ ಕೊಟ್ಟಿದ್ದಾರೆ. ಈ ಸಾರಿ ನೂರು ಆಸ್ಪತ್ರೆಯನ್ನು ಕೊಡುತ್ತಿದ್ದಾರೆ, ಸಂತೋಷ. ಈ ಬಗ್ಗೆ ನಾನು ಸ್ವಾಗತವನ್ನು ಬಯಸುತ್ತೇನೆ. ಇವತ್ತು ಅತಿ ಹೆಚ್ಚು ಪಶುಸಂಗೋಪನೆ ಇಲಾಖೆಗೆ ಒತ್ತು ಕೊಟ್ಟಿದ್ದಾರೆ. ಬಜೆಟ್‌ನಲ್ಲಿ ನೀವು ಕುರಿ ಸತ್ತರೆ 5,000 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತೀರಿ, ಮೇಕೆ ಸತ್ತರೆ, ಹಸು ಸತ್ತರೆ ಎಷ್ಟು ಪರಿಹಾರ ಕೊಡುತ್ತೇವೆಂದು ಎಲ್ಲಿಯೂ ಸಹ ಹೇಳಿರುವುದಿಲ್ಲ. ಅಲ್ಲಾ ಸ್ವಾಮಿ, ನಾವು ಹಾಲಿಗೆ ನಾಲ್ಕು ರೂಪಾಯಿ subsidy ಅನ್ನು ಕೊಡುತ್ತೇವೆ. ಒಂದು ಹಸುವಿನ ಬೆಲೆ 60 ರಿಂದ 70 ಸಾವಿರ ರೂಪಾಯಿಗಳು ಇದೆ.

ಶ್ರೀ ಸಿ.ಟಿ. ರವಿ:- ಮಾನ್ಯ ಕೃಷ್ಣಪ್ಪನವರೆ, ತಾವು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ದನ ಕಡಿಯುವವರು ಸತ್ತರೆ ಅದಕ್ಕೆ 10 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ದನಕ್ಕೆಂದು ಪಕ್ಕಾ ಇಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ:- ಇರಲಿ. ಕುರಿಗೆ ಮೇಕೆಗೆ ಕೊಡುವುದರ ಬಗ್ಗೆ ಸ್ವಾಗತಿಸುತ್ತೇನೆ. ಅದೇ ರೀತಿಯಾಗಿ ಹಸುಗೆ ಏತಕ್ಕಾಗಿ ಕೊಡಬಾರದು? ನಾವು 60 ರಿಂದ 70 ಸಾವಿರ ರೂಪಾಯಿಗಳನ್ನು ಕೊಟ್ಟು ಹಸು ಖರೀದಿ ಮಾಡುತ್ತೇವೆ. ಈಗ ಎಲ್ಲಾ ಕಡೆಯಲ್ಲಿಯೂ ಕಾಯಿಲೆ ಬಂದಿದೆ. ಕಾಲುಗೊರಸು ಅಥವಾ ಜೊಲ್ಲುರೋಗ ಬಂದು ಸತ್ತರೆ ಅದಕ್ಕೆ ನೀವು ಏತಕ್ಕಾಗಿ ದುಡ್ಡು ಕೊಡಬಾರದು? Atleast ಕೊನೆಯ ಪಕ್ಷ ಸರ್ಕಾರವು ಮುಂದೆ ಬಂದು, ಆ ಎಲ್ಲಾ ಹಸುಗಳಿಗೆ insurance ಮಾಡಿಸಿ. ಅದನ್ನು ಮಾಡುವುದಕ್ಕೆ ಏನು ತೊಂದರೆ? ನೀವು Insurance ಮಾಡಿದರೆ, ಆ ಹಣವನ್ನಾದರೂ ರೈತರು claim ಮಾಡುತ್ತಾರೆ. ಬಹುಶ: ರೈತರಿಗೆ ಈ ಬಜೆಟ್‌ನಿಂದ ಯಾವುದೇ ಉಪಯೋಗವಾಗುತ್ತಿಲ್ಲವೆಂದು ನನ್ನ ಭಾವನೆಯಾಗಿದೆ. ಇನ್ನು ಜಲಸಂಪನ್ಮೂಲ ಇಲಾಖೆಯ ಬಗ್ಗೆ ಹೇಳುವಾದರೆ, ನಿಮಗೆ ಅದರ ಅನುಭವವಾಗಿದೆ. Especially ಚಿಕ್ಕಬಳ್ಳಾಪುರ, ತುಮಕೂರು, ಕೋಲಾರದವರಿಗೆ ಅದರ ಅನುಭವವಾಗಿದೆ. ನೀರಿನ ಸಮಸ್ಯೆಯು ಎಷ್ಟು ಉಲ್ಬಣವಾಗಿದೆ ಎಂದರೆ ಕುಡಿಯುವ ನೀರಿಲ್ಲದೆ ಜನರು ಬಹಳ ಆತಂಕದಲ್ಲಿದ್ದಾರೆ. ಆದರೆ ಈ ಬಗ್ಗೆ ಸರ್ಕಾರವು ಏನು ತೀರ್ಮಾನ ಮಾಡಿದೆ? ಕಳೆದ ಬಾರಿ Supreme Court ನವರು ನಮಗೆ ಒಂದು ಅವಕಾಶವನ್ನು ಕೊಟ್ಟರು. ಕೃಷ್ಣ ಬೇಸಿನ್‌ಗೆ ನೀವು 524 ಅಡಿಗೆ ಎತ್ತರಿಸಿಕೊಳ್ಳಿ ಎಂದು ಹೇಳಿದರೆ, ಇಲ್ಲಿಯವರೆವಿಗೆ ಅದರ ಬಗ್ಗೆ ಚಿಂತನೆಯನ್ನು ಮಾಡಿರುವುದಿಲ್ಲ. ನಾವು ಈಗಾಗಲೇ ಎರಡು ವರ್ಷಗಳನ್ನು ಕಳೆದಿದ್ದೇವೆ. ಇನ್ನು ಮೂರು ವರ್ಷದ ನಂತರ ಈ ಸರ್ಕಾರ ಇರುವುದಿಲ್ಲ. ಮತ್ತೆ ನಾವು ಚುನಾವಣೆಗೆ ಹೋಗುತ್ತೇವೆ. ಈ ಒಂದು ಅವಕಾಶವನ್ನು ನಾವು ಉಪಯೋಗಿಸಿಕೊಳ್ಳದೆ ಹೋದರೆ, ಅದು ಹಾಳಾಗುತ್ತದೆ. 524 ಅಡಿ ಎತ್ತರಿಸುವ ಸಂಬಂಧ Supreme Court ನವರೆಗೆ ಹೋಗಿ ಇದಕ್ಕಾಗಿ ಸರ್ಕಾರದ ನೂರಾರು ಕೋಟಿ

ರೂಪಾಯಿಗಳನ್ನು ಖರ್ಚು ಮಾಡಿ, ನೀವು ಈ ಬಗ್ಗೆ ಹೋರಾಟವನ್ನು ಮಾಡಿದ್ದೀರಿ, ನಾನು ಸ್ವಾಗತಿಸುತ್ತೇನೆ. ಆದರೆ Supreme Court ನವರು ಕೊಟ್ಟಿರುವಂತಹ judgement ಅನ್ನು ನೀವು ಎಲ್ಲಿ implement ಮಾಡಿದ್ದೀರಿ? ಈ ಬಗ್ಗೆ ನೀವು ಏತಕ್ಕಾಗಿ ಹೋರಾಟ ಮಾಡಿದ್ದೀರಿ? ಇದಕ್ಕಾಗಿ ನೀವು ಹಣವನ್ನು ಏಕೆ waste ಮಾಡಿದ್ದೀರಿ? ಹೀಗಾಗಿ ಬಹುಶಃ ಎಲ್ಲೋ ಒಂದು ಕಡೆ ಕಾಳಜಿ ಇಲ್ಲವೆಂದು ನನ್ನ ಚಿಂತನೆಯಾಗಿದೆ. ಈಗ ಎಲ್ಲವನ್ನು ಒಂದು ಸಾರಿ ನೋಡಿಕೊಂಡು ಬಂದರೆ, ಕಾವೇರಿ ಬೇಸಿನ್‌ನಲ್ಲಿ ಒಂದೇ ಒಂದು ಹೊಸ ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ. ಈ ಬಗ್ಗೆ ನಮ್ಮ Law Minister ರವರನ್ನು ನಾವು ಕೇಳಬೇಕಾಗುತ್ತದೆ. ಕಾವೇರಿ ಬೇಸಿನ್‌ನಲ್ಲಿ ಒಂದೇ ಒಂದು ಹೊಸ scheme ಅನ್ನು ಇವರು ಕೈಗೆತ್ತಿಕೊಂಡಿರುವುದಿಲ್ಲ. ಇನ್ನು ನಿಮ್ಮ ಚಿಕ್ಕಬಳ್ಳಾಪುರ ಮತ್ತು ಕೋಲಾರಕ್ಕೆ ನೀರು ಕೊಡುವುದಕ್ಕೆ ಸಾಧ್ಯವೇ? ಸುಮ್ಮನೆ paper statement ಆಗುತ್ತದೆಯೇ ಹೊರತು ಇದು ಯಾವುದೂ ಸಹ ಕಾರ್ಯಗತವಾಗುವುದಿಲ್ಲ. ಇನ್ನು ಎತ್ತಿನಹೊಳೆಯ ಬಗ್ಗೆ ಹೇಳುವುದಾದರೆ, 10,000 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೋದ ಸಾರಿ ಹೇಳಿದರು. ಇದಕ್ಕಾಗಿ ತಾವು ಎಷ್ಟು ಖರ್ಚು ಮಾಡಿದ್ದೀರಿ? What is your progress? ಕೇವಲ ಎಂ.ಎಲ್.ಎ.ಗಳನ್ನು ಕರೆದು, ಈ ಬಗ್ಗೆ ಮಾಜಿ ಮುಖ್ಯಮಂತ್ರಿಗಳಾದ ಡಿ.ವಿ. ಸದಾನಂದಗೌಡರು ಸಭೆಯನ್ನು ಮಾಡಿದರು. ಅವರ ಸರ್ಕಾರವು ಹೋಯಿತು, ಅವರೂ ಕೇಂದ್ರಕ್ಕೆ ಹೋದರು. ನೀವೂ ಮಾಡಿದ್ದೀರಿ, ನೀವು ಎಷ್ಟು ಹಣವನ್ನು ಕೊಟ್ಟಿದ್ದೀರಿ? ಅದರ ಬಗ್ಗೆ ಸರ್ಕಾರದ ಚಿಂತನೆ ಇಲ್ಲ.

ನಾನು ಕಳೆದ ಬಾರಿ ಬಹಳ ಸಲ ಹೇಳಿದೆ. ಎತ್ತಿನಹೊಳೆ ಸ್ಕೀಂನಿಂದ ದೊರಕುವ ಕೇವಲ 10 TMC ನೀರಿನಿಂದ ಏನೂ ಸಾಧನೆ ಆಗುವುದಿಲ್ಲ. ಬರೀ ಪೈಪ್‌ಲೈನ್ ತೆಗೆದುಕೊಂಡು ಹೋಗುತ್ತೀರಿ. ತುರುವೇಕೆರೆನಲ್ಲಿ ಒಡೆದು ಹಾಕುತ್ತೇವೆ, ಚಿಕ್ಕನಾಯಕನಹಳ್ಳಿನಲ್ಲಿ ಒಡೆದು ಹಾಕುತ್ತೇವೆ ಮುಂದೆ ಎಲ್ಲರೂ ಒಡೆದು, ಒಡೆದು ನೀರು ತೆಗೆದುಕೊಂಡರೆ, ಕೊನೆಗೆ ಕೋಲಾರಕ್ಕೆ ಏನು ಸಿಗುತ್ತದೆ. ಬರೀ ಪೈಪ್‌ಲೈನ್ ನಿಲ್ಲುತ್ತದೆ, ಒಂದು ಹನಿ ನೀರು ಬರುವುದಿಲ್ಲ.

ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ 1820 ರಲ್ಲಿ ಮುಲ್ಲಾಪೆರಿಯಾರ್ ಡ್ಯಾಂ ಕಟ್ಟಿದ್ದಾರೆ. ಅದರ ಬಗ್ಗೆ ನಾನು Law Minister ಗೆ ಒಂದು ಪತ್ರವನ್ನು ಬರೆದೆ. ಈ ಭಾಗದ ಎಲ್ಲಾ ಶಾಸಕರ ಸಭೆ ಕರೆಯಿರಿ. ನಿಮಗೆ ಒಳ್ಳೆಯ ಹೆಸರು ಬರುತ್ತದೆಂದು ಹೇಳಿದೆ, ಆಗ ಒಳ್ಳೆಯ ರೊಟ್ಟಿ ತಿನಿಸಿ ಹೋದರು ಹೊರತು ಸಭೆ ಕರೆದು ಅದರ ಬಗ್ಗೆ ಚರ್ಚೆ ಆಗಲಿಲ್ಲ. ಇವತ್ತು ನಾನು ಸಲಹೆ ಕೊಡುತ್ತೇನೆ. ನಿಮಗೆ ಈ ಭಾಗದ 8 ಜಿಲ್ಲೆಗಳಿಗೆ ನೀರು ಕೊಡಬೇಕು ಎನ್ನುವ ಇಚ್ಛಾಶಕ್ತಿ ಇದ್ದರೆ, ಬರೀ paper statement ಕೊಟ್ಟು, ಜನ ಗಲಾಟೆ ಮಾಡುತ್ತಾರೆ, ಮಾನ್ಯ ರಮೇಶ್ ಕುಮಾರ್‌ವರು ಕೂಗಾಡುತ್ತಾರೆನ್ನುವ ಚಿಂತನೆ ನಿಮ್ಮಲ್ಲಿದ್ದರೆ ಅಷ್ಟಕ್ಕೆ ಸೀಮಿತವಾಗಿ. ಏನಾದರೂ ಬಹುಶ: ನೂರಾರು ವರ್ಷದಿಂದ ರೈತರು ನೊಂದಿದ್ದಾರೆ. ನಾವು ಕೊಡಬೇಕೆನ್ನುವ ಕಾಳಜಿ ಇದ್ದರೆ, ದಯಮಾಡಿ ಆ ಸ್ಕೀಂ ಅನ್ನು ಬದಲಾವಣೆ ಮಾಡಿ. ನಮ್ಮ ಪಕ್ಕದ ರಾಜ್ಯ ತಮಿಳುನಾಡಿನಲ್ಲಿ ಮುಲ್ಲಾಪೆರಿಯಾರ್ ಡ್ಯಾಂ, ಇವತ್ತಲ್ಲ, 1820 ರಲ್ಲಿ ಕಟ್ಟಿಸಿದ್ದಾರೆ. ಕಳೆದ ಸಲ ಈ House ನಲ್ಲಿ water supply scheme ಬಗ್ಗೆ ಮಾತನಾಡುವಾಗ ಹೇಳಿದ್ದೆ. ಆದರೆ ನಮ್ಮ ದುರಂತ ನಮ್ಮ ದೌರ್ಭಾಗ್ಯ ಏನಾಗಿದೆ ಎಂದರೆ, 1994 ರಿಂದ ಇಲ್ಲಿಯವರೆಗೆ ಉತ್ತರ ಕರ್ನಾಟಕದವರು ಆಗುತ್ತಿದ್ದಾರೆ. ದಕ್ಷಿಣ ಕರ್ನಾಟಕದವರು ಮುಖ್ಯಮಂತ್ರಿ ಆದರೂ ಸಹ ಈ ಭಾಗಕ್ಕೆ ಚಿಂತನೆ ಇಲ್ಲ. ಒಂದು ದೃಢವಾದ ನಿಲುವನ್ನು ನಾವು ತೆಗೆದುಕೊಳ್ಳದೆ ಇದ್ದರೆ ಸಾಧನೆ ಆಗಲಿಕ್ಕಿಲ್ಲ. 600 ಅಡಿಗಳ ಎತ್ತರದಲ್ಲಿ ಹುಟ್ಟಿದಂಥ ಎಲ್ಲಾ ನದಿಗಳು, ಪೆರಿಯಾರ್ ನದಿ, ಎಲ್ಲವೂ ಸಹ ಈಗ ಅರಬ್ಬಿ ಸಮುದ್ರಕ್ಕೆ ಸೇರುತ್ತವೆ. 1820 ರಲ್ಲಿ ಒಂದು ಡ್ಯಾಂ ಅನ್ನು ಕಟ್ಟಿ ಪೂರ್ವಕ್ಕೆ ನೀರನ್ನು turn ಮಾಡಿದ್ದಾರೆ. ಆ ರೀತಿ ಮಾಡಿ Teni ಶಿವಗಂಗಾ, ಮಧುರೈ ರಾಮನಾಥಪುರಂ ಈ 4 ಜಿಲ್ಲೆಗಳಿಗೂ ಸಹ ಕುಡಿಯುವ ನೀರು, irrigation ಮತ್ತು ಇತರ ಎಲ್ಲಾ ಪಟ್ಟಣಗಳಿಗೂ ಕೊಟ್ಟಿದ್ದಾರೆ. ಆ ರೀತಿಯಾಗಿ ಚಿಂತನೆ ಮಾಡಬೇಕು. ಜೊತೆಗೆ 1970 ರಲ್ಲಿ popular Government ತಮಿಳುನಾಡಿಗೆ ಬಂದಾಗ ತಮಿಳುನಾಡು ಸರ್ಕಾರ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಶಿವಗಂಗಾದಲ್ಲಿ ಒಂದು ಡ್ಯಾಂ ಕಟ್ಟಿದ್ದಾರೆ. ಅದರ ಮೂಲಕ ಸಹ ಬಹುಶಃ

ಲಕ್ಷಾಂತರ ಎಕರೆ ಜಮೀನಿಗೆ ನೀರನ್ನು ಕೊಟ್ಟಿದ್ದಾರೆ. 30 ಸಣ್ಣಪುಟ್ಟ ಪಟ್ಟಣಗಳಿಗೆ ಕುಡಿಯುವ ನೀರನ್ನು ಕೊಟ್ಟಿದ್ದಾರೆ. ಆ ರೀತಿಯಾಗಿ ಇವರು ಏನಾದರೂ ಚಿಂತನೆ ಮಾಡಬೇಕು. ಬಹುಶ: ಅವರು 500 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಾರೆ. ನಮ್ಮಲ್ಲಿಯೂ ಸಹ, ನಾನು Law Minister ಗೆ ಹೇಳುತ್ತೇನೆ, ಏನಾದರೂ ಈ ಭಾಗದ ಜನತೆಯ ಬಗ್ಗೆ ಕಾಳಜಿ ಇದ್ದರೆ, ದಯಮಾಡಿ ಈ ಭಾಗದ ಶಾಸಕರ ಸಭೆಯನ್ನು ಕರೆದು, ಒಂದು Committee constitute ಮಾಡಿ. ತಮ್ಮ ಅಧ್ಯಕ್ಷತೆಯಲ್ಲಿಯೇ ಆಗಲಿ. ನೀವು ಆ ಭಾಗದಿಂದ ಬಂದಿದ್ದೀರಿ. ದಯಮಾಡಿ ನೀವು ಆ ಪೆರಿಯಾರ್ ಡ್ಯಾಂ ಅನ್ನು ನೋಡಿ, ಶಿವಗಂಗಾ ಡ್ಯಾಂ ಅನ್ನು ನೋಡಿ. ಅದೇ ರೀತಿ ನಮ್ಮಲ್ಲಿಯೂ ಸಹ, ಏನು ಪಶ್ಚಿಮಕ್ಕೆ ಹರಿದು ಹೋಗುತ್ತದೆ, ಅದನ್ನು canal ಮೂಲಕ ನೀರನ್ನು ತಂದರೆ, ನಾವು ಸುಮಾರು 1000 TMC ನೀರನ್ನು ತರಬಹುದು. 2000 TMC ನೀರು waste ಆಗಿ, ಇವತ್ತು ಸಮುದ್ರಕ್ಕೆ ಸೇರುತ್ತಿದೆ. ಆಯಿತು, 1000 TMC ನೀರು ಅಲ್ಲಿಗೆ ಹೋಗಲಿ, ಮೀನು ವೃದ್ಧಿಯಾಗಲಿ ಸಂತೋಷ. ಇನ್ನೂ 200 TMC ನೀರು ಕುಡಿಯುವುದಕ್ಕೆ ತೆಗೆದುಕೊಳ್ಳಿ, ನಮಗೆ 800 TMC ನೀರನ್ನು ಕೊಟ್ಟರೆ ಈ ಭಾಗದ ಜನರು ನಿಜವಾಗಿಯೂ ನೆನೆಸಿಕೊಳ್ಳುತ್ತಾರೆ, ಚಿಂತನೆ ಆಗುತ್ತದೆ, ಆ ರೈತರು ಬದುಕುತ್ತಾರೆ. ಕೇವಲ 10 TMC ನೀರು ಕೊಡುತ್ತೇವೆ, ಪೈಪ್‌ಲೈನ್ ಹಾಕಿ ಕೊಡುತ್ತೇವೆ, ಇದು ಯಾವ ಸಾಧನೆ ಅಲ್ಲ. ಇದು ಕೇವಲ ಸರ್ಕಾರದ slogan ಆಗುತ್ತದೆ ಹೊರತು ಕಾರ್ಯಗತವಾಗುವುದಿಲ್ಲ. ಇದರಿಂದ ಯಾವ ರೈತರಿಗೂ ಸಹ ಉಪಯೋಗವಾಗುವುದಿಲ್ಲವೆಂದು ಹೇಳುತ್ತೇನೆ. ನೀವು 1000 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ತಯಾರು ಮಾಡಬಹುದು. ನೀವು ಒಂದು ಯೂನಿಟ್‌ಗೆ 8-10 ರೂ.ಗಳನ್ನು ಕೊಟ್ಟು ವಿದ್ಯುತ್ತನ್ನು ಕೊಂಡುಕೊಳ್ಳುತ್ತೀರಿ. ಇಲ್ಲಿಯೇ ಹಣ invest ಮಾಡಿ ಸ್ವಾಮಿ. Private investors ಬರುತ್ತಾರೆ. ನಿಮಗೆ ದುಡ್ಡು ಇಲ್ಲವೆಂದರೆ ನಬಾರ್ಡ್ ಲಕ್ಷಾಂತರ ಕೋಟಿ ರೂ.ಗಳ ಸಾಲವನ್ನು ಕೊಡುತ್ತದೆ. ನಿಮಗೆ ಇಚ್ಛಾಶಕ್ತಿ ಬೇಕು. ಇಚ್ಛಾಶಕ್ತಿ ನಿಮಗೆ ಇಲ್ಲವಲ್ಲಾ. ಅದರ ಬಗ್ಗೆ ನೀವು ಏನಾದರೂ ಚಿಂತನೆ ಮಾಡಿದರೆ, ಬಹುಶ: ವಿದ್ಯುಚ್ಛಕ್ತಿ ತಯಾರು

ಮಾಡಬಹುದು. ನಮ್ಮ ಭಾಗದ ನೊಂದ ರೈತರ ಪರವಾಗಿ ನೀವು ನಿಲ್ಲುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಅದಕ್ಕೆ ಇವತ್ತು ಸಾಕಷ್ಟು ಹಣವನ್ನು ಕೊಟ್ಟಿಲ್ಲ. ಕೇವಲ 12,000 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ವೇತನಕ್ಕೆ ಎಷ್ಟು ಹೋಗುತ್ತದೆ, ಅದನ್ನು ನಾವು ಕಳೆಯಬೇಕು. TA-DA ಎಷ್ಟು ಹೋಗುತ್ತದೆಂದು ನಾವು ಕಳೆಯಬೇಕು. ಇದೆಲ್ಲಾ ಕಳೆದರೆ total amount ಎಷ್ಟು ಉಳಿಯುತ್ತದೆ? ಅದರಲ್ಲಿ ನೀವು ಎಷ್ಟು ಖರ್ಚು ಮಾಡುತ್ತೀರಿ? ಒಂದು ತೀರ್ಮಾನವಾಯಿತು. ಈಗ ಬಂದಂಥ ಎಲ್ಲಾ ಮುಖ್ಯಮಂತ್ರಿಗಳು, ನೀವು ಆಗ ಶಾಸಕರಾಗಿದ್ದೀರಿ, ಎಲ್ಲಾ ಸರ್ಕಾರಗಳ ಮುಖ್ಯಮಂತ್ರಿಗಳು ಹೆದರಿಕೊಂಡು ತಮಿಳುನಾಡಿಗೆ ನೀರು ಬಿಟ್ಟರು. ಒಬ್ಬನೇ ಒಬ್ಬ ಗಂಡು ಮಗ, ಬಂಗಾರಪ್ಪನವರು ತಮ್ಮ ಆಡಳಿತದಲ್ಲಿ ನೀರು ಕೊಡಲೇ ಇಲ್ಲ, ಏನು ಮಾಡಿದರು ತಮಿಳನಾಡಿನವರು? ಕೇಂದ್ರ ಸರ್ಕಾರ ಏನು ಮಾಡಿತು? ಏನೂ ಮಾಡುವುದಕ್ಕಾಗಲಿಲ್ಲ? ಆಗ ಬಂಗಾರಪ್ಪನವರು ತೆಗೆದುಕೊಂಡ ದಿಟ್ಟ ನಿಲುವು ಈ ರಾಜ್ಯದಲ್ಲಿ ಉಳಿಯಿತು. ಇನ್ನುಳಿದ ಎಲ್ಲಾ ಮುಖ್ಯಮಂತ್ರಿಗಳು, ಸರ್ಕಾರ ಹೋಗುತ್ತದೆ, dismiss ಮಾಡುತ್ತಾರೆಂದು ಹೆದರಿಕೊಂಡು ನೀರು ಬಿಟ್ಟರು. ಇವತ್ತು ಮೇಕೆದಾಟು ಯೋಜನೆ, ಅದು ಒಳ್ಳೆಯದು, ಅದನ್ನು ನಾನು ಸ್ವಾಗತಿಸುತ್ತೇನೆ. ಒಳ್ಳೆಯ ಚಿಂತನೆ ಇದೆ. ಆದರೆ ಯಾರೋ ಇವತ್ತು ತಮಿಳುನಾಡಿನವರು ಕ್ಯಾತೆ ತೆಗೆಯುತ್ತಾರೆಂದು ಹೆದರಿಕೊಂಡು ಕುಳಿತುಕೊಳ್ಳುತ್ತೀರಾ? ತಮಿಳುನಾಡಿನವರು ಇರುವುದೇ ಕ್ಯಾತೆ ತೆಗೆಯುವುದಕ್ಕೆ, ಅವರು ಯಾವತ್ತು ಒಳ್ಳೆಯದಕ್ಕಿಲ್ಲ. ಮೇಕೆದಾಟು ಬಗ್ಗೆ ಬಂಗಾರಪ್ಪನವರು ಏನೊಂದು ನಿಲುವು ತೆಗೆದುಕೊಂಡರು, ಅದೇ ರೀತಿ ಮಾನ್ಯ ಸಿದ್ದರಾಮಯ್ಯನವರು ನಿಲುವು ತೆಗೆದುಕೊಳ್ಳಬೇಕು. ಆ ನಿಲುವು ತೆಗೆದುಕೊಂಡು ಅದು ಜಾರಿ ಆದರೆ ಒಳ್ಳೆಯದು. ಬಹುಶ: ಕೇವಲ ಬೆಂಗಳೂರಿಗೆ 10 TMC ನೀರು ಇದೆ, ಅದು ಸಾಕಾಗುವುದಿಲ್ಲ. ನಮಗೆ ಇನ್ನೂ 10 TMC ನೀರು ಬೇಕು. ಹಾಗಾಗಿ ಆ ದಿಟ್ಟ ನಿಲುವು ತೆಗೆದುಕೊಂಡು ಈ ಭಾಗಕ್ಕೆ ನೀರನ್ನು ಕೊಡಬೇಕು. ಆ ಮೇಕೆದಾಟು ಯೋಜನೆ ಜಾರಿ ಆಗಲೇಬೇಕು. ಇಲ್ಲದಿದ್ದರೆ ಬಹುಶ: ಬೆಂಗಳೂರಿನಲ್ಲಿ ನೀರಿಗೆ ಬಹಳ

ಕಷ್ಟವಾಗುತ್ತದೆ. ಇವತ್ತು ಎತ್ತಿನಹೊಳೆ ಪ್ರಾಜೆಕ್ಟ್ ಬಗ್ಗೆ ಬಹಳ ನೂಕಾಟ ನಡೆಯುತ್ತಿದೆ. ಮಾನ್ಯ ನಿಂಗಯ್ಯನವರು ಕೊಡುವುದಿಲ್ಲವೆಂದು ಅನ್ನುತ್ತಾರೆ. ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಕುಡಿಯುವ ನೀರಿನ ಸಮಸ್ಯೆ ಇದೆ. ಹಿಂದೆ ಸಹ ಆ ಭಾಗದಲ್ಲಿ forest ಕಡಿದು ತೋಟ, ಏಲಕ್ಕಿ, ಗದ್ದೆ ಎಲ್ಲವನ್ನು ಮಾಡಿದ್ದಾರೆ. ಅವರೂ ಬದುಕಬೇಕು. ನಾವು ಸಹ ಅವರಿಗೆ ಕುಡಿಯುವ ನೀರನ್ನು ಕೊಡಬೇಕಾಗುತ್ತದೆ. ಇದಕ್ಕೆ ಸಮನ್ವಯ ಸಮಿತಿಯನ್ನು ಮಾಡಿ, ಎತ್ತಿನಹೊಳೆ ಯೋಜನೆಯನ್ನು ಏನು ಮುಲ್ಲಾಪೆರಿಯಾರ್ ಡ್ಯಾಂ ಪ್ರಕಾರ, ಆ ದಿಕ್ಕಿನಲ್ಲಿ, ಆ ಚಿಂತನೆಯಲ್ಲಿ ನೀರು ತಂದರೆ ಬಹುಶ: ಅನುಕೂಲವಾಗುತ್ತದೆ. ಆರೋಗ್ಯ ಇಲಾಖೆಯ ಬಗ್ಗೆ ಮಾನ್ಯ ಗೋವಿಂದ ಕಾರಜೋಳರವರು ಬಹಳ ಮಾತನಾಡಿದರು. ರಾಜ್ಯದಲ್ಲಿ $H_1 N_1$ ಗೆ ಸುಮಾರು 700–800 ಜನರು ಸತ್ತಿದ್ದಾರೆ. ಇನ್ನೂ ಎಷ್ಟು ಜನ ಸಾಯಬೇಕೆಂದು ಈ ಸರ್ಕಾರದ ಚಿಂತಿಸಿದೆ. That is my question ಇದನ್ನು ಏನಾದರೂ ಇಷ್ಟಕ್ಕೆ ನಿಲ್ಲಿಸುತ್ತೀರಾ? ಅಥವಾ ಸತ್ತುಕೊಂಡು ಹೋಗಲಿ ಎಂದು ಇರುತ್ತೀರಾ? ನಮಗೆ ರೋಗ ಬರುವುದಿಲ್ಲ, ನಾವು ಎ.ಸಿ. ರೂಮಿನಲ್ಲಿರುತ್ತೇವೆ. ನಮಗೆ ಯಾವ virus ಬರುವುದಿಲ್ಲ. ಆದರೆ ಹಳ್ಳಿಯ ಜನ, ದನ ಕಾಯುವವರು, ಕುರಿ ಕಾಯುವವರು, ಕೂಲಿ ಮಾಡುವವನು, ಗುಡಿಸಲಿನಲ್ಲಿ ವಾಸ ಮಾಡುವವನು ಅವನಿಗೆ ಬಂದೇ ಬರುತ್ತದೆ. ಅಲ್ಲಿ ನೀವು ಏನೂ ಮಾಡಬೇಡಿ, at least ಅಲ್ಲಿ DDT ಸಿಂಪಡಿಸುವುದಕ್ಕೆ ಜನ ಇಲ್ಲ. ನಾನು ಆಗಲೇ ಹೇಳಿದೆ, ಮಾನ್ಯ ಮಹಾದೇವಪ್ಪನವರು ಮಧ್ಯೆ intervene ಆದರು. Para Medical staff ಗಳನ್ನು ನೇಮಕ ಮಾಡುವುದಕ್ಕೆ ನಿಮಗೆ ಏನು ತೊಂದರೆ ಇದೆ? ಇವತ್ತು ಬಹಳ ಜನ trained people ಇದ್ದಾರೆ. Para Medical staff ಸುಮಾರು 700–800 ಜನ on contract basis ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು regularize ಮಾಡುವುದಕ್ಕೆ ಏನು ತೊಂದರೆ? ಕೊನೆಯ ಪಕ್ಷ private ನಲ್ಲಿ training ಮಾಡಿದವರನ್ನು ತೆಗೆದುಕೊಳ್ಳಿ. ಮೊದಲು preliminary, first aid ಕೊಡಿ. First, Health Inspector ಗಳು Cleaning ಮಾಡಿಸಲಿ, ಸ್ಲಂನಲ್ಲಿ, ಹಳ್ಳಿಗಾಡಿನಲ್ಲಿ ಎಲ್ಲಾ ಕಡೆಯೂ ಎಲ್ಲಾ ಕಡೆ block ಆಗಿರುತ್ತವೆ. ಅಲ್ಲಿ

ಸೊಳ್ಳೆಗಳು ಬೆಳೆಯುತ್ತವೆ. ಎಲ್ಲಾ ಕೊಳಚೆ ನೀರು epidemic disease ಅಲ್ಲಿಂದಲೇ ಹುಟ್ಟುತ್ತವೆ. ಅದನ್ನು avoid ಮಾಡುವುದು ಸರ್ಕಾರದ ಜವಾಬ್ದಾರಿ ಅಲ್ಲವೇ? Municipalities ನಲ್ಲಿ, Town ಪಂಚಾಯಿತಿಗಳಲ್ಲಿ, Corporation ಗಳಲ್ಲಿ Health Inspector ಗಳು ಇಲ್ಲ, clean ಮಾಡುವವರು ಇಲ್ಲ. DDT ಸಂಪಡಿಸುವುದಕ್ಕೆ ಒಬ್ಬ staff ಇಲ್ಲ. ಮೊದಲು ನೀವು ಅದನ್ನು recruitment ಮಾಡಬೇಕು. ಮೊದಲು Para Medical staff ಗಳನ್ನು recruitment ಮಾಡಿದರೆ, ಬಹುಶ: ಅದು preliminary, first aid ಇದ್ದಂತೆ. First aid ನೀವು ಕೊಡಿ. ಅದರ ಮೇಲೆ ಬಂದರೆ treatment ನೋಡೋಣ. ಯಾವ ಆಸ್ಪತ್ರೆಗೆ ಹೋದರೂ ನರ್ಸ್ ಇಲ್ಲ. ಎ.ಎನ್.ಎಂ. ಇಲ್ಲ. ಡಾಕ್ಟರ್‌ಗಳು ಇಲ್ಲವೇ ಇಲ್ಲ ಬಿಡಿ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಯಾವ ಆಸ್ಪತ್ರೆ ಎಂದು ಹೇಳಿದರೆ ಚೆನ್ನಾಗಿತ್ತು.

ಶ್ರೀ ಎಂ.ಟಿ. ಕೃಷ್ಣಪ್ಪ :- ಇಡೀ ರಾಜ್ಯದಲ್ಲಿ ಡಾಕ್ಟರ್‌ಗಳಿಲ್ಲ.

ಶ್ರೀ ಯು.ಟಿ. ಖಾದರ್:- ಇಡೀ ರಾಜ್ಯದಲ್ಲಿ ಇಲ್ಲವೆಂದು ಹೇಳಬೇಡಿ. ಎಲ್ಲೆಲ್ಲಿ ಇಲ್ಲ, ಅದು ಹೇಳಿ.

ಶ್ರೀ ಎಂ.ಟಿ. ಕೃಷ್ಣಪ್ಪ:- ತುರುವೇಕೆರೆ, ಮಾಯಸಂದ್ರ, ದಿಂಡಿನಶಿರಾ, ಸಂಪಿಗೆ, ಸಿ.ಎಸ್.ಪುರ ತೆಗೆದುಕೊಳ್ಳಿ, ಎಷ್ಟು ಜನ Para Medical staff ಗಳು ಅಲ್ಲಿ ಇದ್ದಾರೆ? ಎಷ್ಟು ಜನ ನರ್ಸ್‌ಗಳನ್ನು ಕೊಟ್ಟಿದ್ದೀರಿ? ಎಷ್ಟು ಜನ ಎ.ಎನ್.ಎಂ.ಗಳನ್ನು ಕೊಟ್ಟಿದ್ದೀರಿ? ಎಷ್ಟು ಜನ ಡಾಕ್ಟರ್‌ಗಳನ್ನು ಕೊಟ್ಟಿದ್ದೀರಿ? ಡಾಕ್ಟರ್‌ಗಳಿಗೆ 28,000 ಸಾವಿರ ರೂ.ಗಳಿಂದ 14,000 ರೂ.ಗಳ ವೇತನ ಮಾಡಿದ್ದೀರಿ.

ಉಪಾಧ್ಯಕ್ಷರು:- 40,000 ರೂ.ಗಳನ್ನು ಏನೋ ಮಾಡಿದ್ದಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ:- ಇಲ್ಲ. ಕಡಿಮೆ ಆಗಿದೆ.

ಶ್ರೀ ಯು.ಟಿ. ಖಾದರ್:- ನೀವು ಅಲ್ಲಿರುವುದರಿಂದ, ನಾನು ಏನು ಸತ್ಯ ಹೇಳಿದರೂ ಕೂಡ ನೀವು ಒಪ್ಪುವುದಿಲ್ಲ. ನಿಮ್ಮ ವಿಚಾರ ಏನಿದೆ, ಅದೆಲ್ಲಾ ನಾವು ಸ್ವೀಕರಿಸುತ್ತೇವೆ. ನೀವು specific ಆಗಿ ತುರುವೇಕೆರೆ ಎಂದು ಹೇಳಿದರೆ ಖಂಡಿತ ಅದರ ಮಾಹಿತಿಯನ್ನು ತೆಗೆದುಕೊಂಡು ಬರುತ್ತೇನೆ. ಈಗ 28,000 ರೂ.ಗಳು ಇರುವುದನ್ನು on contract basis ಇರುವವರಿಗೆ 42,000 ರೂ.ಗಳಿಗೆ ಮಾಡಿದ್ದೇವೆ.

ಶ್ರೀ ಎಂ.ಟಿ. ಕೃಷ್ಣಪ್ಪ:- ಆಯುರ್ವೇದಿಕ್ ಡಾಕ್ಟರ್‌ಗಳಿಗೆ ಎಷ್ಟು ಮಾಡಿದ್ದೀರಿ?

ಶ್ರೀ ಯು.ಟಿ. ಖಾದರ್:- ಹಿಂದೆ ಎಷ್ಟು ಇತ್ತೋ ಅಷ್ಟೇ ಇದೆ. ಅವರಿಗೆ 14,000 ರೂ.ಗಳ ವೇತನ ಇರುವುದು. ಅದು ನಮ್ಮದು ಅಲ್ಲ, ಅದು NRHM ಅಂದರೆ, ಇದು Cental Government Scheme.

ಶ್ರೀ ಎಂ.ಟಿ. ಕೃಷ್ಣಪ್ಪ:- ಮಾನ್ಯ ಖಾದರ್‌ರವರೆ, 496 ಜನ ಆಯುರ್ವೇದಿಕ್ ಡಾಕ್ಟರ್‌ಗಳು ಇದ್ದಾರೆ. ಎಲ್ಲೆಲ್ಲಿ ಎಂ.ಬಿ.ಬಿ.ಎಸ್. ಡಾಕ್ಟರ್‌ಗಳು ಇಲ್ಲ, ಅಲ್ಲಿ they will take care. ಅವರೇ PHC, PHU ನಲ್ಲಿ ಕೆಲಸ ಮಾಡುತ್ತಾರೆ. ನೀವು ಅವರಿಗೆ 14,000 ರೂ.ಗಳ ಸಂಬಳ ಕೊಡುತ್ತೀರಿ. ಜೊತೆಗೆ ಅವರು 8-10 ವರ್ಷ ಸೇವೆ ಸಲ್ಲಿಸಿದ್ದಾರೆ, ಅವರನ್ನು regularize ಮಾಡಿಲ್ಲ. ಅವರನ್ನು regularize ಮಾಡುವುದಕ್ಕೆ ಏನು ತೊಂದರೆ?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು clarification. ನಮ್ಮ State Head ನಲ್ಲಿ ಎಲ್ಲೆಲ್ಲಿ ಆಯುರ್ವೇದಿಕ್ ಡಾಕ್ಟರ್‌ಗಳು ಇದ್ದಾರೆ, ಅವರಿಗೆ 28,000 ರೂ.ಗಳ ಸಂಬಳವನ್ನು ಕೊಡುತ್ತಿದ್ದೇವೆ. Misplace ನಲ್ಲಿ ಕೆಲಸ ಮಾಡುತ್ತಿದ್ದರು. ಯಾವಾಗ ನಮ್ಮ ಎಂ.ಬಿ.ಬಿ.ಎಸ್ ಡಾಕ್ಟರ್‌ಗಳು contract basis ನಲ್ಲಿ ಅಥವಾ direct appointment ನಲ್ಲಿ ಹೋಗುತ್ತಾರೆ, ಅವರು misplace ಆದಾಗ then he has to come under NRHM, Central Government ಅಡಿಯಲ್ಲಿ ಬಂದು ಬೇಕಿದ್ದರೆ ಬೇರೆ ಕಡೆ ಕೆಲಸ

ಮಾಡಬಹುದು. All India level ನಲ್ಲಿ 14,000 ರೂ.ಗಳನ್ನು ಕೊಡುತ್ತಿದ್ದಾರೆ. ಅದನ್ನು ಹೆಚ್ಚು ಮಾಡಲಿಕ್ಕೆ ಕೇಳಿದ್ದೇವೆ. ಮೊನ್ನೆ ಎರಡನೆ ಬಾರಿ ಕಡಿಮೆ ಮಾಡಿದಾಗ, ಹೆಚ್ಚು ಮಾಡಬೇಕೆಂದು ಕೇಳಿಕೊಂಡು ಮೊನ್ನೆ Central Minister ಮತ್ತು ಅಧಿಕಾರಿಗಳು ಬಂದಾಗಲೂ ಕೂಡ ಅದಕ್ಕೆ ಮೌಖಿಕವಾಗಿ ಒಪ್ಪಿಗೆ ಕೊಟ್ಟಿದ್ದಾರೆ. ನಮಗೆ ಒಪ್ಪಿಗೆ ನೀಡಿದ ತಕ್ಷಣವೇ ನಾವು ಕೊಡಲಿಕ್ಕೆ ತಯಾರಿದ್ದೇವೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- Central Government ಏನು fix ಮಾಡಿದೆಯಲ್ಲ, ಅದಕ್ಕೆ additional ಆಗಿ ಅವರಿಗೆ ಕೊಡಬಾರದು ಎಂದು ಏನಾದರೂ condition ಹಾಕಿದ್ದಾರಾ?

ಶ್ರೀ ಎಂ.ಟಿ. ಕೃಷ್ಣಪ್ಪ:- ಇಲ್ಲ.

ಶ್ರೀ ಯು.ಟಿ. ಖಾದರ್:- Central Government Scheme ನಲ್ಲಿ ಕೇವಲ ಆಯುರ್ವೇದಿಕ್ ಡಾಕ್ಟರ್ ಮಾತ್ರ ಅಲ್ಲ. ಲಕ್ಷಾಂತರ ಜನರು ಕೆಲಸ ಮಾಡುತ್ತಿದ್ದಾರೆ. ಇವರೊಬ್ಬರಿಗೆ ಮಾಡಿ, ಬೇರೆಯವರಿಗೆ ಸರ್ಕಾರ ಕೊಡದೇ ಕುಳಿತುಕೊಳ್ಳಲು ಆಗುತ್ತದೆಯೇ? ಎಲ್ಲರಿಗೂ ಕೊಟ್ಟರೆ ತೊಂದರೆ ಇಲ್ಲ.

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಉಪಾಧ್ಯಕ್ಷರೆ, ಇಡೀ ಸದನದಲ್ಲಿ ಬಹಳಷ್ಟು ಬಾರಿ ವೈದ್ಯರ ಬಗ್ಗೆ, Para-Medical Staff ಬಗ್ಗೆ ಚರ್ಚೆಯಾಗಿದೆ. ಮಾನ್ಯ ಸಚಿವರು ಕ್ರಿಯಾಶೀಲರಾಗಿರುವುದಕ್ಕೆ ನಾವು ಅಭಿನಂದಿಸುತ್ತೇವೆ. ಆದರೆ ಈ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಇಡೀ ಸದನಕ್ಕೆ ಇದರ ಬಗ್ಗೆ concern ಇದೆ. ನನ್ನ ಕ್ಷೇತ್ರದಲ್ಲಿ, ಇಡೀ ಹಳ್ಳಿಯಲ್ಲಿ 30 ಆಸ್ಪತ್ರೆಗಳು ಬರುತ್ತವೆ. PHC ಗಳಲ್ಲಿ ಎಂಟು ಜನ ಡಾಕ್ಟರ್‌ಗಳು manage ಮಾಡಬೇಕು. ಜನ ಹಿಡಿ ಶಾಪ ಹಾಕುತ್ತಿದ್ದಾರೆ. ನಾವು ಹೇಳುವಂಥದ್ದು, ತಮ್ಮ concern ಅನ್ನು ಅಗತ್ಯವಿರುವಂತಹ ಒಂದು ತೀರ್ಮಾನ ತೆಗೆದುಕೊಂಡು ತೋರಿಸಬೇಕು. ಮಾನ್ಯ ಹಿರಿಯ ಕಾನೂನು ಸಚಿವರು ಕುಳಿತಿದ್ದೀರಿ, ನಿಮ್ಮ ಕ್ಷೇತ್ರದಲ್ಲಿಯೂ ಸಮಸ್ಯೆ ಇದೆ, ನಮ್ಮ ಕ್ಷೇತ್ರದಲ್ಲಿಯೂ ಸಮಸ್ಯೆ ಇದೆ, Let us arrive at a

decision which helps to solve this problem. ಈ ರೀತಿ ಸುಮ್ಮನೆ ಚರ್ಚೆ ಮಾಡಿ ಪ್ರಯೋಜನವಿಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ:- Sanctioned post ಗೆ ಎಷ್ಟು ಬಜೆಟ್ ಅನ್ನು allot ಮಾಡಿದ್ದೇವೆ? ಆರೋಗ್ಯ ಇಲಾಖೆಯಲ್ಲಿ ನಾನೂ ಕೂಡ 20 ವರ್ಷ ಕೆಲಸ ಮಾಡಿದ್ದೇನೆ. I am senior to you. ಆರೋಗ್ಯ ಇಲಾಖೆಗೆ ಎಷ್ಟು amount allot ಆಗಿದೆ, ಅಷ್ಟು ಹಣವನ್ನು sanctioned post ಗೆ ಕೊಟ್ಟಿರುತ್ತೇವೆ. ಸರ್ಕಾರ allot ಮಾಡುತ್ತದೆ. ನೀವು Vacant post ಅನ್ನು fill up ಮಾಡಬೇಕು. Vacant post ಅನ್ನು fill up ಮಾಡಿದಾಗ salary ಏನು ಇರುತ್ತದೆ, ಅದನ್ನು ಕೊಡಬೇಕಲ್ಲವೇ? Why are you reducing? NRHM ಮತ್ತೊಂದು ತೆಗೆದುಕೊಳ್ಳಿ. Sanctioned post salary ಯನ್ನು vacant post ತುಂಬಿದಾಗ, why can't you give salary? ನಾವು 224 ಜನ ಇರುತ್ತೇವೆ. 224 ಜನರಿಗೆ salary ಇಂತಿಷ್ಟು ಎಂದು ಸರ್ಕಾರ fix ಮಾಡಿರುತ್ತದೆ ಅದನ್ನು ಕೊಡುತ್ತಾರೆ. ನಾವು ಐದು ಜನ ಕಡಿಮೆ ಆಯಿತು ಎಂದರೆ ಬಿಟ್ಟುಬಿಡುತ್ತೇವೆಯೇ? Like that, allotted budget ಇರುತ್ತದೆ, 14,000 ರೂ.ಗಳಿಗೆ ಯಾರೂ ಕೆಲಸ ಮಾಡಲು ಆಗುವುದಿಲ್ಲ. Today, what is the minimum salary of Group 'D'? ಇವತ್ತು 6th Pay Commission ನಲ್ಲಿ minimum Salary 18,000–20,000 ರೂ.ಗಳು ಇದೆ. 14,000 ರೂ.ಗಳಿಗೆ ಯಾರಾದರೂ ಡಾಕ್ಟರ್‌ಗಳು ಕೆಲಸ ಮಾಡುತ್ತಾರೆಯೇ? ದಯಮಾಡಿ ಚಿಂತನೆ ಮಾಡಿ. You have to compensate under State Budget. It is the total amount allotted to your department. ತಾವು ಅರ್ಥ ಮಾಡಿಕೊಳ್ಳಬೇಕು. ಬಜೆಟ್‌ನಲ್ಲಿ ನೀವು Commissioner ನವರನ್ನು ಕರೆದು ಚರ್ಚೆ ಮಾಡಿ, Finance Secretary ಯವರ ಜೊತೆ ಚರ್ಚೆ ಮಾಡಿ, ಅಮೌಂಟ್ ಅನ್ನು ಕೊಡಬೇಕು. ಏನಾದರೂ ಅಡ್ಡ ಬಂದಿದ್ದಾರೆಯೇ? C.M. is the Finance Minister. ನೀವು ಆ ಡಾಕ್ಟರ್‌ಗಳಿಗೆ 20,000–30,000 ರೂ.ಗಳ ಸಂಬಳ ಕೊಡಿ, ಅವರು ಕೆಲಸ ಮಾಡುತ್ತಾರೆ. ಈಗ Driver-Cum-conductor ಗೆ 35,000 ರೂ.ಗಳ ಸಂಬಳ ಕೊಡುತ್ತಾರೆ. Line man ಗೆ 35,000 ರೂ.ಗಳನ್ನು

ಕೊಡುತ್ತಾರೆ. ಗ್ರೂಪ್ ಡಿ' ಗೆ 20,000 ರೂ.ಗಳನ್ನು ಕೊಡುತ್ತಾರೆ. ಡಾಕ್ಟರ್‌ಗಳಿಗೆ 14,000 ರೂ.ಗಳು ಎಂದರೆ ಏನು ಚಿಂತನೆ ಮಾಡಬೇಕು? ಯಾವ ಡಾಕ್ಟರ್‌ಗಳು ಕೆಲಸ ಮಾಡುತ್ತಾರೆ?

(ಗೊಂದಲ)

ಶ್ರೀ ಯು.ಟಿ. ಖಾದರ್:- ಡಾಕ್ಟರ್ ಎಂದರೆ ಆಯುರ್ವೇದಿಕ್ ಡಾಕ್ಟರ್. It is under NRHM. ಎಂ.ಬಿ.ಬಿ.ಎಸ್. ಡಾಕ್ಟರ್ ಎಂದು ದಾಖಲೆಗೆ ಹೋಗಬಾರದು. ಆಯುರ್ವೇದಿಕ್ ಡಾಕ್ಟರ್ . . .

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ:- ಎಂ.ಬಿ.ಬಿ.ಎಸ್. ಎಂದರೆ ನಾಲ್ಕೂವರೆ ವರ್ಷ ಓದಿರುತ್ತಾರೆ. ನರ್ಸ್ ನಾಲ್ಕು ವರ್ಷ, ಆಯುರ್ವೇದಿಕ್ ಡಾಕ್ಟರ್ ಎಷ್ಟು ವರ್ಷ ಓದುತ್ತಾರೆ? ಅವರೂ ಕೂಡ ನಾಲ್ಕು ವರ್ಷ ಓದಿರುತ್ತಾರೆ. ಅವರೇನೂ ಎರಡು ವರ್ಷ ಓದುತ್ತಾರೆಯೇ? He is not a Diploma Holder. He is also a Medical Graduate. ಆಯುರ್ವೇದಿಕ್ ಇರಬಹುದು, ಯುನಾನಿ ಇರಬಹುದು, ಎಂ.ಬಿ.ಬಿ.ಎಸ್. ಇರಬಹುದು, what so ever. That is not the criteria. He is a graduate under your institution. ಎಂದ ಬಳಿಕ ನೀವು ಸಂಬಳವನ್ನು ಏಕೆ equal ಆಗಿ ಕೊಡಬಾರದು? ನಾವು budget ನಲ್ಲಿ allot ಮಾಡಿಲ್ಲ ಎಂದೇನೂ ಇಲ್ಲ. Unanimously we have allotted budget to your Department. ನೀವು ಕೊಡಿ. ಅದನ್ನು 'ಇಚ್ಛಾಶಕ್ತಿ' ಎಂದು ಕರೆಯುತ್ತಾರೆ. ನಾನು ಒಂದು ಮಾತು ಹೇಳುತ್ತೇನೆ, ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ, ಮಾನ್ಯ ವೀರೇಂದ್ರ ಪಾಟೀಲ್‌ರವರು ಇದ್ದಾಗ, I was the President of Employees' Association. ಈ ಸಮಸ್ಯೆ ಬಂದಾಗ, they have given powers to the D.C. to appoint a Medical Officer. ಆಗ ಡಿ.ಸಿ ಲೆವೆಲ್‌ನಲ್ಲಿಯೇ ಕೊಟ್ಟರು. ಅದು ಈಗ continue ಆಗುತ್ತಿದೆ. ಆಗ ಡಾಕ್ಟರ್‌ಗಳು appoint ಆಗಿ ಬಂದರು. ನೀವೂ ಅಷ್ಟೆ, 14,000 ರೂ.ಗಳನ್ನು, ಕೊನೆ ಪಕ್ಷ on par with the MBBS doctors ಕೊಡಬೇಕು. They are not

asking salary on par with Lecturers. Lecturer scale highest ಇದೆ. ಅದನ್ನು ಕೊಡುವುದಕ್ಕೆ ಆಗುವುದಿಲ್ಲ. ಬೇಡ. ಆಯುರ್ವೇದಿಕ್ ಡಾಕ್ಟರ್‌ಗೆ ಇಷ್ಟು ಕಡಿಮೆ ಸಂಬಳ ಕೊಟ್ಟರೆ ಹೇಗೆ? ಎಂತಹ ಅವಮಾನ ಮಾನ್ಯ ಖಾದರ್‌ರವರೆ? ಅವರ ಕೈ ಕೆಳಗೆ ಗೋಡೆ ಮೇಲೆ ಬರೆಯುವವರಿಗೆ 27,000 ರೂ.ಗಳ ಸಂಬಳ ಕೊಡುತ್ತೀರಿ. He is a Medical Officer for that institution. He is getting ₹ 14,000/-. You have given him drawing powers. ಎಂತಹ ವಿಪರ್ಯಾಸ ಸ್ವಾಮಿ? ಯಾರು ಕೆಲಸ ಮಾಡುವುದಕ್ಕೆ ಬರುತ್ತಾರೆ? ಒಂದು ದಿವಸಕ್ಕೆ ಒಂದು ಸಾವಿರ ರೂಪಾಯಿಯಾದರೂ ಬೇಡವೇ? ನಾವು ಎಷ್ಟು ರೂ.ಗಳನ್ನು ಕೊಡುತ್ತೇವೆ? NREGS ಯಲ್ಲಿ ಒಂದು ದಿವಸಕ್ಕೆ 196 ರೂ.ಗಳನ್ನು ಕೂಲಿ ಕೊಡುತ್ತೇವೆ. ಒಂದು ತೆಂಗಿನ ಕಾಯಿ ಸುಲಿಯುವುದಕ್ಕೆ ಎಷ್ಟು ರೂ.ಗಳನ್ನು ಕೊಡುತ್ತೇವೆ? ಒಂದು ಸಾವಿರ ತೆಂಗಿನ ಕಾಯಿ ಸುಲಿಯುವುದಕ್ಕೆ, ಸಾಯಂಕಾಲ ಒಂದು ಕ್ವಾರ್ಟರ್ ಎಣ್ಣೆ ಕೊಟ್ಟು, ಬಾರಪ್ಪಾ, ನಿನ್ನ ದಮ್ಮಯ್ಯಾ ಎಂದು ಬೆಳಿಗ್ಗೆ ಬುಕ್ ಮಾಡಬೇಕು. ಅವನಿಗೆ 400-500 ರೂ.ಗಳನ್ನು ಕೊಡುತ್ತೇವೆ. 500 ರೂ.ಗಳು ಎಂದರೆ ಎಂದು ಒಂದು ತಿಂಗಳಿಗೆ 15,000 ರೂ.ಗಳು ಆಗುತ್ತದೆ.

ಶ್ರೀ ಬಿ.ಬಿ. ನಿಂಗಯ್ಯ:- ನಮ್ಮ ಮಲೆನಾಡಿನಲ್ಲಿ ಈಗ ಕಾಫಿ, ಮೆಣಸು ಕೊಯ್ಲು ಹಾಕುವಂತಹ ಸಂದರ್ಭ ಮುಗಿಯುತ್ತಾ ಬಂದಿದೆ. ಒಂದು ಕೆ.ಜಿ ಮೆಣಸು ಕುಯ್ಯಲು 700-800 ರೂ.ಗಳನ್ನು ಕೊಡುತ್ತಿದ್ದೇವೆ. 800-900 ರೂ.ಗಳ ಸಂಬಳವನ್ನು ಕರಿಮೆಣಸು ಕುಯ್ಯುವವರು ಸಂಜೆ ತೆಗೆದುಕೊಂಡು ಹೋಗುತ್ತಾರೆ. ಹಾಗಿರುವಾಗ ಮಾನ್ಯ ಸದಸ್ಯರು ಹೇಳುವ ಹಾಗೆ, ಒಬ್ಬ Medical Graduate ಗೆ ತಿಂಗಳಿಗೆ 14,000 ರೂ.ಗಳ ಸಂಬಳ ಎಂದರೆ ಯಾವ ರೀತಿಯ ನ್ಯಾಯ? ಆ ದೃಷ್ಟಿಯಿಂದ ತಾವು serious ಆಗಿ ತೆಗೆದುಕೊಳ್ಳಿ. ಸರ್ಕಾರ ಬಂದು ಎರಡು ವರ್ಷ ಆಯಿತು. ಈ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದಕ್ಕೆ ಆಗಲಿಲ್ಲವೆಂದರೆ ಹೇಗೆ? ಆಸ್ಪತ್ರೆಗೆ ಬೀಗ ಹಾಕಿ ಎಂದು ಮಾನ್ಯ ಅಧ್ಯಕ್ಷರೂ ಕೂಡ ಹೇಳಿದರು. ಇದಕ್ಕೆ ಏನಾದರೂ ಒಂದು

Solution ಕೊಡಲಿಲ್ಲವೆಂದರೆ, ಸುಮ್ಮನೆ ತೌಡು ಕುಟ್ಟಿ, ಕುಟ್ಟಿ, ಕೈ ಕಾಲು ನೋವಾಗುತ್ತದೆ. ದಯಮಾಡಿ ಒಂದು ತೀರ್ಮಾನಕ್ಕೆ ಬನ್ನಿ.

ಶ್ರೀ ಎಂ.ಟಿ. ಕೃಷ್ಣಪ್ಪ:- ಏನಾಗಿದೆ ಎಂದರೆ, ಹಳ್ಳಿಗಳಲ್ಲಿ. . .

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಒಂದು ನಿಮಿಷ. ಕಾಯಿ ಸುಲಿಯುವವರು ಮತ್ತು ಮರ ಹತ್ತುವವರು ಕಡಿಮೆ, ಡಾಕ್ಟರ್ ದೊಡ್ಡವರು ಎಂದು ಏಕೆ ಹೇಳುತ್ತೀರಿ? ಅದೂ ಕೂಡ ಒಂದು ಉದ್ಯೋಗ. ಹಾಗಾದರೆ ಡಾಕ್ಟರ್ ಮರ ಹತ್ತುವುದಕ್ಕೆ ಆಗುತ್ತದೆಯೇ? ಸಂಬಳ ಅವರಿಗೆ ಕಡಿಮೆ, ಇವರಿಗೆ ಜಾಸ್ತಿ ಎಂದು ಹೇಳುವುದು ಏಕೆ? ಸಂಬಳ ಕೊಡಲಿ. ಅಂತಹವನಿಗೆ ಇಷ್ಟು ಕೊಡುತ್ತೇವೆ ಎಂದು ಹೇಳಿದರೆ, ಅಂತಹವನು ಎಂದರೆ ಯಾರು? ಮಾನ್ಯ ಕೃಷ್ಣಪ್ಪನವರೆ, ತಾವು ಹೇಳುತ್ತಿರುವುದು ಸರಿಯಿದೆ. ಯಾವುದೇ ವ್ಯಕ್ತಿ, ಯಾವುದೇ ಉದ್ಯೋಗ ಸಮಾನ ಗೌರವ ಕೊಡಬೇಕು.

ಶ್ರೀ ಎಂ.ಟಿ. ಕೃಷ್ಣಪ್ಪ:- He is not qualified. He si not skilled.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- Not Qualified ಎಂದರೆ, ಅವನು ಬಸವಣ್ಣನ ಯೂನಿವರ್ಸಿಟಿಯಿಂದ ಬಂದಿರುವವನು. ಅವನೂ ಕೂಡ qualified.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ:- ಇವರು ನಾಲ್ಕೂವರೆ ವರ್ಷ ಓದಿದ್ದಾರಲ್ಲಾ. ಎಂ.ಬಿ.ಬಿ.ಎಸ್. ಡಾಕ್ಟರ್‌ಗೆ 40,000 ರೂ.ಗಳನ್ನು ಕೊಡುತ್ತೀರಿ. ಆಯುರ್ವೇದಿಕ್ ಡಾಕ್ಟರ್‌ಗೆ ಏಕೆ ಕೊಡಬಾರದು? ಅವರೂ ಕೂಡ ನಾಲ್ಕೂವರೆ ವರ್ಷ ಓದಿದ್ದಾರಲ್ಲಾ? ನಾನು ಉದಾಹರಣೆಗೆ ಹೇಳುತ್ತಿದ್ದೇನೆ. ಕೊಡಬಾರದು ಎಂದು ನಾವು ಹೇಳುತ್ತಿಲ್ಲ. ಸಮಾಜದಲ್ಲಿ ನಡೆಯುತ್ತಿರುವುದನ್ನು ಗಮನಕ್ಕೆ ತರಬೇಕಾದದ್ದು ನನ್ನ ಚಿಂತನೆ. ಅದಕ್ಕಾಗಿ ಹೇಳುತ್ತಿದ್ದೇನೆ. ಇವತ್ತು ಹಳ್ಳಿಗಳಲ್ಲಿ PHC, PHU, remote area ಗಳಲ್ಲಿ ಇರುತ್ತವೆ. ಅಲ್ಲಿ ಯಾರು ಇರುತ್ತಾರೆ? ಎಂ.ಬಿ.ಬಿ.ಎಸ್. ಡಾಕ್ಟರ್‌ಗಳು

ಹೋಗುವುದಿಲ್ಲ. ಆಯುರ್ವೇದಿಕ್ ಡಾಕ್ಟರ್‌ಗಳೇ ಹೋಗಬೇಕು. ಜ್ವರ, ಕಾಯಿಲೆ ಬಂದರೂ ಅವರ ಹತ್ತಿರವೇ ಹೋಗಬೇಕಲ್ಲಾ, ಅವನು ಅಲ್ಲಿಯೇ ಕೆಲಸ ಮಾಡಬೇಕಲ್ಲಾ, ಆದ್ದರಿಂದ ನಾನು ಏನು ಹೇಳುತ್ತೇನೆ ಎಂದರೆ, ದಯಮಾಡಿ ಮೊದಲು ಎಲ್ಲಾ ಆಸ್ಪತ್ರೆಗಳಿಗೆ ಡಾಕ್ಟರ್‌ಗಳನ್ನು, ನರ್ಸ್‌ಗಳನ್ನು, Paramedical staff ಗಳನ್ನು, ANM ಗಳನ್ನು priority ಮೇಲೆ ಕೊಡಬೇಕು. Education and Police Department ಬಹಳ ಮುಖ್ಯ ಇದೆ. ದಯಮಾಡಿ fill up ಮಾಡಬೇಕೆಂದು ಮಾನ್ಯ ಉಪಾಧ್ಯಕ್ಷರೆ ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು:– Conclude ಮಾಡಿ.

ಶ್ರೀ ಎಂ.ಟಿ. ಕೃಷ್ಣಪ್ಪ:– ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳಿಬಿಡುತ್ತೇನೆ. ಇವತ್ತು ಬಜೆಟ್ ಮಂಡನೆಯಾಗಿದೆ. ನಮ್ಮ ಸ್ನೇಹಿತರೆಲ್ಲಾ ಇಲ್ಲಿ ಕುಳಿತಿದ್ದಾರೆ. ಇಲ್ಲಿಯವರೆಗೂ ಅಪೆಂಡಿಕ್ಸ್–ಇ ಬಿಡುಗಡೆ ಆಗಿಲ್ಲ. ಕಳೆದ ವರ್ಷ ಬಜೆಟ್ ಆದರೂ, ಈ ವರ್ಷ ಬಜೆಟ್ ಆದರೂ, ಅಪೆಂಡಿಕ್ಸ್–ಇ ಬಿಡುಗಡೆ ಆಗಿಲ್ಲವೆಂದರೆ ನಾವು ರಸ್ತೆ ಮಾಡುವುದಾದರೂ ಹೇಗೆ? ಅದಕ್ಕೆ ಉದ್ದೇಶ ಏನು? PWD Minister ಏನು ಮಾಡಿದ್ದಾರೆ ಎಂದರೆ ಅವರ ಕ್ಷೇತ್ರಕ್ಕೆ, ನಾನು ಹೇಳುವುದಕ್ಕೆ ನಾಚಿಕೆಯಾಗುತ್ತದೆ, CRF amount ನಲ್ಲಿ 400 ಕೋಟಿ ರೂ.ಗಳನ್ನು ತೆಗೆದುಕೊಂಡಿದ್ದಾರೆ. ಒಂದು ಸಾವಿರ ಕೋಟಿ ರೂ.ಗಳನ್ನು central Government ನವರು ಕೊಟ್ಟಿದ್ದಾರೆ. Out of that they have taken ₹ 400 crores. Erstwhile Mysuru district, ನಮಗೆ ಎರಡು ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಿಗೆ ನಾಲ್ಕು ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. It is not budgeted amount. It is neither State Budget nor central budget. It is only cess. ನಾವು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಹಾಕುವಂತಹ ಸೆಸ್ ಅನ್ನು ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿದ್ದಾರೆ. ಈ ಬಾರಿ ಚುನಾವಣೆ ಎಂದು ಒಂದು ಸಾವಿರ ಕೋಟಿ ರೂ.ಗಳನ್ನು excess ಕೊಟ್ಟಿದ್ದಾರೆ. ನಾನು ಅದನ್ನು ಸ್ವಾಗತಿಸುತ್ತೇನೆ. ಆದರೆ, it

should be disbursed equally. ಏಕೆ ಅವರು 400 ಕೋಟಿ ರೂ.ಗಳನ್ನು ತೆಗೆದುಕೊಳ್ಳಬೇಕು? ಹಾಗಾಗಿ ಅವರಿಗೆ ಅಪೆಂಡಿಕ್ಸ್-ಇ ಬೇಕಾಗಿಲ್ಲ. ನಮ್ಮಲ್ಲಿ ರಸ್ತೆ ಇಲ್ಲವೆಂದು ಜನರು ದಿನವೂ strike ಮಾಡುತ್ತಾರೆ, college students strike ಮಾಡುತ್ತಾರೆ. ಹಾಗೆಯೇ ಡ್ರೈವರ್‌ಗಳೂ ಸಹ ಸ್ಟ್ರೈಕ್ ಮಾಡುತ್ತಾರೆ. ಕೆಎಸ್‌ಆರ್‌ಟಿಸಿ ಡ್ರೈವರ್ ಒಬ್ಬರು ಏನು ಹೇಳುತ್ತಾರೆಂದರೆ, ರಸ್ತೆ ಈ ರೀತಿಯಾಗಿರುವುದರಿಂದ ಮೈಲೇಜ್ ಬರುತ್ತಿಲ್ಲ. ಆದರೆ, ಮೈಲೇಜ್ ಬರುತ್ತಿಲ್ಲವೆಂದು ನಮ್ಮನ್ನು suspend ಮಾಡುತ್ತಾರೆಂದು ಹೇಳುತ್ತಾನೆ. ಕಳೆದ ವರ್ಷದ ಬಜೆಟ್‌ನ ಹಣವನ್ನು ಯಾರಿಗೆ ಕೊಟ್ಟಿದ್ದೀರಿ? ಆ ಹಣವನ್ನು ನೀವು ಏತಕ್ಕಾಗಿ ಖರ್ಚು ಮಾಡಲಿಲ್ಲ? Then what is your job as PWD Minister? Chief Engineer and Executive Engineer ಗಳಿಗೆ ವರ್ಗಾವಣೆ ಮಾಡುವುದೊಂದೇ ನಿಮ್ಮ ಕೆಲಸವೇ? What is your job? What is your review? ಇವತ್ತಿನ ದಿವಸ ಏನು ಮಾಡಿದ್ದೀರಿ?

ಶ್ರೀ ಬಸವರಾಜ ರಾಯರೆಡ್ಡಿ:- ನೀವು ಯಾರಿಗೆ ಹೇಳುತ್ತಿದ್ದೀರಿ?

ಶ್ರೀ ಎಂ.ಟಿ. ಕೃಷ್ಣಪ್ಪ:- ನಾನು ಅವರಿಗೇ (ಉಪಾಧ್ಯಕ್ಷರಿಗೆ) ಹೇಳಬೇಕು. ನಾನೇನು ಮಾಡುವುದು? ನಾನ್ಯಾರಿಗೆ ಹೇಳುವುದಕ್ಕಾಗುತ್ತದೆ? ಅವರಿಗೇ ಹೇಳಬೇಕು. ಅವರು in turn ಮಂತ್ರಿಗಳಿಗೆ ಹೇಳುತ್ತಾರೆ. Law Minister is there. Revenue Minister, Senior Minister is there. ಅವರು ಹೇಳಬೇಕಾಗುತ್ತದೆ.

ಶ್ರೀ ಲಕ್ಷ್ಮಣ್ ಸಿದ್ದು ಸವದಿ:- ಮಾನ್ಯ ಕೃಷ್ಣಪ್ಪನವರೇ, ನೀವು ಯಾರಿಗೆ ಹೇಳುತ್ತಿದ್ದೀರೆಂದು ಮಾನ್ಯ ರಾಯರೆಡ್ಡಿಯವರು ಕೇಳುತ್ತಿದ್ದಾರೆ. ಹಿರಿಯ ಸಚಿವರಾಗಿರುವ ಮಾನ್ಯ ಕಂದಾಯ ಸಚಿವರು ಮತ್ತು ಮಾನ್ಯ ಕಾನೂನು ಮಂತ್ರಿಗಳು ಇಲ್ಲಿ ಕುಳಿತುಕೊಳ್ಳತಕ್ಕಂಥದ್ದು ಅನಿವಾರ್ಯವಾಗಿದೆ. ಏಕೆಂದರೆ, ಅವರಿಗೆ ಜವಾಬ್ದಾರಿ ಇರುವುದರಿಂದ ಅವರು ಇಲ್ಲಿ ಕುಳಿತುಕೊಂಡಿದ್ದಾರೆ. ಮಧ್ಯದಲ್ಲಿ ಕೈ ಮಾಡಿ ಏನಾದರೂ ಬೈಯುವುದಕ್ಕೆ ಮತ್ತು ನಮ್ಮ ಜೊತೆ ವಾದ

ಮಾಡುವುದಕ್ಕೋಸ್ಕರ ಮಾನ್ಯ ಮೀನುಗಾರಿಕೆ ಸಚಿವರನ್ನು ಇಲ್ಲಿ ಕುಳ್ಳಿರಿಸಿದ್ದಾರೆ. ಅವರೊಬ್ಬರು ಇಲ್ಲಿದ್ದಾರೆ, ಅವರನ್ನು ನೀವು ನೋಡಿಲ್ಲವೆಂದು ಕಾಣುತ್ತದೆ.

ಶ್ರೀ ಎಂ.ಟಿ. ಕೃಷ್ಣಪ್ಪ:- ಮಾನ್ಯ ಮೀನುಗಾರಿಕೆ ಸಚಿವರಿಗೆ ನಾನು disturb ಮಾಡಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ಹೇಳುವುದು ಯಾತ ರೀತಿ ಇದೆ ಎಂದರೆ, ಊದುವ ಶಂಖವನ್ನು ಊದುತ್ತೇನೆ, ಶಿವನ ಪೂಜೆ ಆಗಲಿ ಅಥವಾ ಬಿಡಲಿ ಎನ್ನುವ ರೀತಿಯಲ್ಲಿ ನೀವು ಮಾಡುವುದು ಆಗಿದೆ.

ಶ್ರೀ ಎಂ.ಟಿ. ಕೃಷ್ಣಪ್ಪ:- ಶಂಖ ಕೊಟ್ಟಿದ್ದಾರೆ, ಅದನ್ನು ಊದಲೇ ಬೇಕಾಗಿದೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಉಪಾಧ್ಯಕ್ಷರೆ, ಇವರು ವಾಸ್ತವವಾದಂಥ ಚಿತ್ರಣವನ್ನು ಮುಂದಿಡುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿರುವಂಥ ಚಿತ್ರಣವನ್ನು ಬಹಳ ನಿಖರವಾಗಿ, ನೆಲದ ಹತ್ತಿರದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಬಜೆಟ್ ಮೇಲೆ ಮಾತನಾಡುತ್ತಾ ಸಾಕಷ್ಟು ಅಂಶಗಳ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆ. ಇಲ್ಲಿಯವರೆಗೆ ಒಂದು ಗಲಾಟೆ ಇತ್ತು, ಈಗ ಅದು ಸಹ ಮುಗಿದಿದೆ. ಇವತ್ತಿನ ದಿವಸ ಕಲಾಪ ಸುಗಮವಾಗಿ ನಡೆಯುತ್ತಿದ್ದು, ಗಂಭೀರವಾದಂಥ ಚರ್ಚೆ ನಡೆಯುತ್ತಿರುವಾಗ ಸರ್ಕಾರದೊಳಗೆ ನೋಡಿ ಯಾವ ರೀತಿಯಾಗಿದೆ?

ಉಪಾಧ್ಯಕ್ಷರು:- ಇಷ್ಟು ಹೊತ್ತು ಮಾನ್ಯ ಮಂತ್ರಿಗಳು ಇದ್ದರು. ಈಗ ಆ ಮನೆಗೆ ಹೋಗಿರಬೇಕು.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ನಮಗೇನೂ ತೊಂದರೆ ಇಲ್ಲ. ಏಕೆಂದರೆ, ನಾವು ಮಾತನಾಡುತ್ತೇವೆ, ಹಾಗೆಯೇ ನೀವು ಸಹ ನಮಗೆ ಬೇಕಾದಷ್ಟು ಸಮಯವನ್ನು ಕೊಡುತ್ತಿದ್ದೀರಿ. ನಾವು ಸಹ ಯಾವುದೇ ಅಡೆತಡೆಗಳು ಇಲ್ಲದೆ ಭಾಷಣ ಮಾಡುತ್ತೇವೆ. ಆದರೆ, ಭಾಷಣ ಮಾಡುವ ಹುಮ್ಮಸ್ಸು ನಮಗೆ ಇಲ್ಲ. ಏಕೆಂದರೆ, ಇಲ್ಲಿ ಕೇಳುವವರೇ ಇಲ್ಲ.

ಉಪಾಧ್ಯಕ್ಷರು:- ಮಾನ್ಯ ಕೃಷ್ಣಪ್ಪನವರೇ, ತಾವು ಮುಂದುವರಿಸಿ.

ಶ್ರೀ ಎಂ.ಟಿ. ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಸಿಗುತ್ತಿಲ್ಲ. ನಾನು ಮಾತನಾಡುವಾಗ ಅವರು ಎದ್ದೇಳುತ್ತಾರೆ, ಆನಂತರ ಇವರು ಎದ್ದೇಳುತ್ತಾರೆ. ನಮಗೆ ಬೇರೆ ಸಂದರ್ಭದಲ್ಲಿ ಅವಕಾಶ ಸಿಗುವುದಿಲ್ಲ. ಆದ್ದರಿಂದ, ನಾವು ಇದೇ ಸಂದರ್ಭದಲ್ಲಿ ಬಡ್ಕೋಬೇಕು. ನಾವು ಹೇಳುವುದನ್ನು ಯಾರು ತೆಗೆದುಕೊಳ್ಳುತ್ತಾರೋ, ಯಾರು ಬಿಡುತ್ತಾರೋ ಗೊತ್ತಿಲ್ಲ. ಈಗ ನಾವೇನು ಮಾಡುವುದಕ್ಕೆ ಆಗುತ್ತದೆ? ಮಾನ್ಯ ಉಪಾಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯಲ್ಲಿ ಯಾವ ಕ್ಷೇತ್ರಕ್ಕೂ ಹಣ ಬಿಡುಗಡೆ ಆಗಲ್ಲ. ನಿಮ್ಮ ಕ್ಷೇತ್ರಕ್ಕೆ ಹಣ ಬಿಡುಗಡೆ ಆಗಿದೆಯೇ?

ಉಪಾಧ್ಯಕ್ಷರು:- ಇಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ:- ಮಾನ್ಯ ಶ್ರೀನಿವಾಸ ಪ್ರಸಾದ್‌ರವರೇ, ತಾವು senior most minister ಆಗಿದ್ದೀರಿ, ಹಾಗೆಯೇ Law Minister ಸಹ ಇಲ್ಲಿದ್ದಾರೆ. ನಾನು ಹೇಳುವುದೇನೆಂದರೆ, ಒಂದು ವರ್ಷ ಬಜೆಟ್ ಮಂಡನೆ ಮಾಡಿ, ಸುಮಾರು 15,834 ಕೋಟಿ ರೂಪಾಯಿಗಳನ್ನು ಕೊಟ್ಟು, ರಸ್ತೆಯನ್ನು ಮಾಡದಿದ್ದರೆ, ಯಾವ ಪುರುಷಾರ್ಥಕ್ಕಾಗಿ ಬಜೆಟ್ ಮಂಡನೆ ಮಾಡುತ್ತೀರಿ? Tell me, what do you mean by budget? I want to know. ಬಜೆಟ್ ಎಂದರೇನು? ಏತಕ್ಕಾಗಿ ಮಂಡನೆ ಮಾಡಿ, ನಮ್ಮ ಕೈಯಲ್ಲಿ ಚಪ್ಪಾಳೆ ಹೊಡೆಸಿಕೊಳ್ಳುತ್ತೀರಿ? ಅದರ ಉದ್ದೇಶ ಏನಿದೆಯೋ that has to be implemented or not? ಇವತ್ತು ಅಷ್ಟು ದುಡ್ಡನ್ನು ಕೊಟ್ಟಿದ್ದರೂ, ಇವತ್ತಿನವರೆಗೆ ಅಪೆಂಡಿಕ್ಸ್-ಇ ಬಿಡುಗಡೆ ಆಗಿಲ್ಲವೆಂದು ಮಾನ್ಯ ಜಯಚಂದ್ರರವರ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ದಯಮಾಡಿ ನಾನು ಹೇಳುವುದನ್ನು ಅರ್ಥ ಮಾಡಿಕೊಳ್ಳಿ, ಈ ಸಾರಿ ಎಷ್ಟು ಕೊಟ್ಟಿದ್ದೀರಿ? ಮಾನ್ಯ ಜಯಚಂದ್ರರವರ ಕ್ಷೇತ್ರಕ್ಕೂ ಸಹ ಕೊಟ್ಟಿಲ್ಲ. ಅಲ್ಲಿನ ಜನರು ಸಹ ಬೈಯುತ್ತಾರೆ. ನಾನು ಪ್ರತಿದಿವಸ ನೋಡುತ್ತೇನೆ. ಈ ಸಾರಿ 6 ಸಾವಿರ ಕೋಟಿ ರೂಪಾಯಿ ಕೊಟ್ಟಿದ್ದೀರಿ. ಕಳೆದ

ಸಾಲಿನದು ಮತ್ತು ಈ ಸಾರಿಯ ಹಣ ಸೇರಿ ಸುಮಾರು 11,000 ಕೋಟಿ ರೂಪಾಯಿಯನ್ನು ಈ ಸಾರಿ ಖರ್ಚು ಮಾಡುತ್ತೀರಾ? ಅಂದರೆ, ಕಳೆದ ಸಾರಿಯ ಹಣ ಉಳಿದುಕೊಂಡಿದೆ. ಏಕೆಂದರೆ, ಇನ್ನೂ ಕಳೆದ ಸಾಲಿನ ಅಪೆಂಡಿಕ್ಸ್–ಇ ಬಿಡುಗಡೆ ಆಗಿಲ್ಲ. ಆದ್ದರಿಂದ, ಕಳೆದ ಸಾಲಿನ ಹಣ ಹಾಗೂ ಈ ಸಾರಿಯ ಹಣವನ್ನು ಸೇರಿಸಿ ಖರ್ಚು ಮಾಡುತ್ತೀರಾ? ಇಲ್ಲದಿದ್ದರೆ ಕಳೆದ ಸಾಲಿನದು lapse ಆಗುತ್ತದೆಯೇ? ಒಂದು ವೇಳೆ ಕಳೆದ ಸಾಲಿನದು lapse ಆಗುವುದಾದರೆ, ಬಜೆಟ್ ಮಾಡುವ ಅವಶ್ಯಕತೆ ಏನಿದೆ? ಏನು ನೀವು allot ಮಾಡಿದ್ದೀರೋ ಅದರಲ್ಲಿ ಒಂದು ರೂಪಾಯಿ ಖರ್ಚು ಮಾಡಿಲ್ಲ. ಅವರ ಸ್ನೇಹಿತರು ಯಾರಾದರೂ ಬಂದರೆ, ಅವರಿಗೆ 5054 ನಲ್ಲಿ ಬರೆದುಕೊಡುವ ಕೆಲಸ ಆಗುತ್ತಿದೆ. ಇದೇನು ಅವರ ಸ್ವಂತ ಆಸ್ತಿಯೇ? ನಾವೇನು ಈ ಕಡೆ ಗೆದ್ದು ಶಾಸಕರಾಗಿಲ್ಲವೇ? ನಮಗೆ ಹಣ ಕೊಡುತ್ತಿಲ್ಲ. ನಾವು ಪತ್ರ ಕೊಟ್ಟರೆ 'Please examine and put up' ಎಂದು ಬರೆಯುತ್ತಾರೆ. ಅವರ ಹತ್ತಿರದಲ್ಲಿರುವವರು ಯಾರಾದರು ಬಂದರೆ, 2–3 ಕೋಟಿ ರೂಪಾಯಿ ಬಿಡುಗಡೆ ಮಾಡಿ ಬರೆಯುವುದು. ಈ ರೀತಿಯಾದರೆ ಏನರ್ಥ? ಈ ರೀತಿಯಾದರೆ ಬಜೆಟ್ ಮಾಡುವ ಅವಶ್ಯಕತೆ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅವರಿಗೆ ಎಷ್ಟು ಬೇಕೋ ಅಷ್ಟು ದುಡ್ಡನ್ನು ಇಟ್ಟುಕೊಂಡು, ಅವರಿಗೆ ಬೇಕಾದವರಿಗೆ ಬರೆದುಕೊಡಲಿ. ಆಗ ನಾವು ಕೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನದಿವಸ ತುರವೇಕೆರೆಯಲ್ಲಿ ಓಡಾಡುವುದಕ್ಕೆ ಆಗುತ್ತಿಲ್ಲ. ಅಲ್ಲಿಗೆ first grade ನ ಎರಡು ಕಾಲೇಜನ್ನು ಕೊಟ್ಟಿದ್ದಾರೆ. ಅಲ್ಲಿ ಇವತ್ತಿನದಿವಸ ಏನಾಗಿದೆ ಎಂದರೆ, youths ಎಲ್ಲಾ ಬಂದು ಗಲಾಟೆ ಮಾಡಿ ಬಾಯಿಗೆ ಬಂದ ಹಾಗೆ ಬೈಯುತ್ತಾರೆ. ನಾವೇಕೆ ಬೈಸಿಕೊಳ್ಳಬೇಕು? ನಿಮಗೆ ತಾಖತ್ ಇಲ್ಲದ ಮೇಲೆ PWD ಖಾತೆಯನ್ನು ಏತಕ್ಕೆ ತೆಗೆದುಕೊಂಡಿದ್ದೀರಿ? When you have no guts, implement ಮಾಡತಕ್ಕಂಥವರಿಗೆ ಆ ಖಾತೆಯನ್ನು ಕೊಡಬೇಕಾಗುತ್ತದೆ. ಮಾನ್ಯ ಸಚಿವರಿಗೆ ಮಾತನಾಡುವುದಕ್ಕೆ guts ಇದೆ ಅಷ್ಟೆ. ಅಪೆಂಡಿಕ್ಸ್–ಇ ಇವತ್ತಿನವರೆಗೂ ಸಹ ಬಿಡುಗಡೆ ಆಗಿಲ್ಲ. ಇದು ಏಕೆ ಬಿಡುಗಡೆ ಆಗಿಲ್ಲವೆಂಬ ಬಗ್ಗೆ ನಾವು ಪ್ರಶ್ನೆ

ಮಾಡಬೇಕಲ್ಲವೇ? ಮಾನ್ಯ ಸಚಿವರು ಈಗ ಬಂದಿದ್ದಾರೆ. ಈ ಬಗ್ಗೆ ಅವರು ಉತ್ತರ ಹೇಳಬೇಕು.

ಉಪಾಧ್ಯಕ್ಷರು:- ಅವರು ಕೇಳಿಸಿಕೊಳ್ಳುತ್ತಾರೆ, ತಾವು ಮಾತನಾಡಿ.

ಶ್ರೀ ಎಂ.ಟಿ. ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ, ಕೊನೇಪಕ್ಷ ಜನವರಿ ಅಥವಾ ಫೆಬ್ರುವರಿ ತಿಂಗಳಲ್ಲಿಯಾದರೂ ಕೊಡಲಿ. ಆದರೆ, ಬಜೆಟ್ ಮಂಡನೆ ಆಗಿ ಮಾರ್ಚ್ ತಿಂಗಳ ಕೊನೆ ಆದರೂ ಇನ್ನೂ ಕೊಟ್ಟಿಲ್ಲವೆಂದರೆ ಹೇಗೆ? ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ ಇರುವ ಫೈಲ್ ಏನು ಮಲಗಿಕೊಂಡಿದೆಯೋ, ಅದನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಈ ವರ್ಷದ್ದೂ ಸೇರಿ ಬಿಡುಗಡೆ ಮಾಡಬೇಕು. ನೀವು PWD Minister, not for erstwhile Mysuru district. You are PWD Minister for the State. ಆದ್ದರಿಂದ, ದಯಮಾಡಿ ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಬಜೆಟ್‌ನಲ್ಲಿರುವ ಹಣ ಸರಿಯಾಗಿ ವೆಚ್ಚ ಆಗುತ್ತಿಲ್ಲ. ಕೊನೆಯದಾಗಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ನಮ್ಮಲ್ಲಿ ದೇವರ ಮಕ್ಕಳು ಇದ್ದಾರೆ. ಎಸ್‌ಸಿ:ಎಸ್‌ಟಿ ಜನಾಂಗದವರು ಅಂದರೆ, ಹರಿಜನ-ಗಿರಿಜನರು, ದೇವರ ಮಕ್ಕಳು ಎಂದು ಹೇಳುವುದಕ್ಕೆ ಬಯಸುತ್ತೇನೆ.

ಡಾ॥ ಎಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಅಪೆಂಡಿಕ್ಸ್-ಇ ರೆಡಿ ಇದೆ. ಅದನ್ನು ಬೇಗ approve ಮಾಡುತ್ತೇವೆ.

ಶ್ರೀ ಎಂ.ಟಿ. ಕೃಷ್ಣಪ್ಪ:- ಅದನ್ನು ಬರುವ ವರ್ಷ ಕೊಡುತ್ತೀರಾ? ಯಾವಾಗ ಕೊಡುತ್ತೀರಿ?

ಡಾ॥ ಹೆಚ್.ಸಿ. ಮಹದೇವಪ್ಪ:- ಈ ವರ್ಷ ಕೊಡುತ್ತೇವೆ. ಈಗಲೇ ಕೊಡಬೇಕು.

ಶ್ರೀ ಎಂ.ಟಿ. ಕೃಷ್ಣಪ್ಪ:- ಅಷ್ಟು ಹೊತ್ತಿಗೆ ವರ್ಷವೇ ಮುಗಿದು ಹೋಗುತ್ತದೆ.

ಡಾ॥ ಹೆಚ್.ಸಿ. ಮಹದೇವಪ್ಪ:- ನೀವು ಮೂರ್‍ನಾಲ್ಕು ಬಾರಿ ಈ ಮನೆಯ ಸದಸ್ಯರಾಗಿದ್ದೀರಿ. ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ first time ಅಪೆಂಡಿಕ್ಸ್-ಇ ಅನ್ನು approve ಮಾಡಿ, ಟೆಂಡರ್ ಅನ್ನು ಕರೆದು, work order issue ಮಾಡಿರುವುದು first time in the history of PWD. ಈಗ ಅಪೆಂಡಿಕ್ಸ್-ಇ final list ಆಗಿ ಎಲ್ಲವೂ ಆಗಿದೆ, finance department ಗೆ ಕಳುಹಿಸಿ approve ಆಗುತ್ತದೆ. Anytime it will be approved.

ಶ್ರೀ ಎಂ.ಟಿ. ಕೃಷ್ಣಪ್ಪ:- Atleast by this time, ಆಗಿದ್ದರೆ, we would have been happy. ಮಾನ್ಯ ಮಹದೇಪ್ಪನವರೆ, ನಾನು 2015-16ನೇ ಸಾಲಿನ ಬಜೆಟ್ ಬಗ್ಗೆ ಮಾತನಾಡುತ್ತಿದ್ದೇನೆ. Not on 2014-15 budget, 2015-16 budget. ದಯಮಾಡಿ ತಾವು ಬೇಗನೆ ಕೊಡಿ. ಇನ್ನು ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಮಾತನಾಡುತ್ತೇನೆ. ಇದು very very important ಆಗಿದೆ. 15,834 ಕೋಟಿ ರೂಪಾಯಿಗಳನ್ನು 2014-15ನೇ ಸಾಲಿನ ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ಖರ್ಚಾಗಿದೆ? ಇವತ್ತು ಸಮಾಜ ಕಲ್ಯಾಣ ಸಚಿವರಾದ ಶ್ರೀ ಹೆಚ್. ಆಂಜನೇಯರವರು ಬೆಳಗಾಂನಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ style ನಲ್ಲಿ ಕೂಲಿಂಗ್ ಗ್ಲಾಸ್ ಹಾಕಿಕೊಂಡು ಭಾಷಣ ಮಾಡಿದರು. ಆದರೆ ಇವರು implement ಏನು ಮಾಡಿದ್ದಾರೆ? ತಾವು 15,834 ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಇದರಲ್ಲಿ 6000 ಕೋಟಿ ರೂಪಾಯಿಗಳನ್ನು ತಾವು divert ಮಾಡಿದ್ದೀರಿ 2015ರಲ್ಲಿ 9000 ಕೋಟಿ ರೂಪಾಯಿಗಳು. ಅವರು ಕೊಟ್ಟಿರುವಂತಹ ಹಣವನ್ನು ಏತಕ್ಕಾಗಿ divert ಮಾಡುತ್ತೀರಿ? ಮಾನ್ಯ ಮಹದೇವಪ್ಪನವರೆ, ಹಿಂದಿನ ಸರ್ಕಾರದಲ್ಲಿ 400 ರಿಂದ 500 ಜನಕ್ಕೆ ನಾವು ನೇರ ಸಾಲವನ್ನು ಕೊಡುತ್ತಿದ್ದರು. ಅದರಿಂದಲೇ ನೀವು ಇವತ್ತಿನದಿವಸ ಇಲ್ಲಿಗೆ ಬಂದಿದ್ದೀರಿ. ಆದ್ದರಿಂದ, ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಈ ಸಾರಿ ನೀವು

30ಕ್ಕೆ ಇಳಿಸಿದ್ದೀರಿ. ನೀವು ಸಹ ಅದಕ್ಕೆ ಚೇರ್‌ಮನ್ ಆಗಿದ್ದೀರಿ. 30–35 ಕ್ಕಿಂತ ಹೆಚ್ಚು ಜನರಿಗೆ ನೇರಸಾಲ ಕೊಡುತ್ತಿಲ್ಲ. ನೀವು ಏತಕ್ಕಾಗಿ SC/ST ರೈತರಿಗೆ ನೇರ ಸಾಲವನ್ನು ಕೊಡಬಾರದು? ನಿಮ್ಮ ಉದ್ದೇಶ ಏನು ಸ್ವಾಮಿ? ಬರೀ ನೀವು ಬ್ಯಾಂಕುಗಳಿಗೆ ಕೊಡುತ್ತೀರಿ, ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ನೀವೆಲ್ಲರೂ ಹರಿಜನರಲ್ಲಿ ಅಯ್ಯಂಗಾರ್ ಆಗಬೇಡಿ. ನಾನು ಏತಕ್ಕಾಗಿ ನಿಮಗೆ press ಮಾಡಿ ಹೇಳುತ್ತಿದ್ದೇನೆಂದರೆ, SC/ST ಜನಾಂಗದ ಜನರಲ್ಲಿ ಒಂದು ಗುಂಟೆ ಜಮೀನು ಇರೋದಿಲ್ಲ. ಈ ರೀತಿ ಇರುವಾಗ ಅವರಿಗೆ ಯಾವ ಬ್ಯಾಂಕಿನಲ್ಲಿ ಸಾಲವನ್ನು ಕೊಡುತ್ತಾರೆ ಸ್ವಾಮಿ? They have to depend on ನೇರ ಸಾಲ. ನೀವು ನೇರ ಸಾಲ ಕೊಡುವುದನ್ನು ನಿಲ್ಲಿಸಿದ್ದೀರಿ. ಹೋದ ವರ್ಷವೂ ಕೊಟ್ಟಿಲ್ಲ, ಈ ವರ್ಷವೂ ಸಹ ಕೊಟ್ಟಿರುವುದಿಲ್ಲ. ನೀವು ಮತ್ತೆ ಏನು ಬಜೆಟ್ ಮಾಡುತ್ತೀರಿ? ನೀವು ಮಾತೆತ್ತಿದರೆ SC/ST ಎಂದು ಹೇಳುತ್ತೀರಿ. ಒಂದು ರೂಪಾಯಿಗೆ ಒಂದು ಕೆಜಿ ಅಕ್ಕಿಯನ್ನು ಕೊಡುತ್ತೀರಿ, ಅದು ಅವರ ಅಪ್ಪ ಮತ್ತು ಅವರ ಅವ್ವನಿಗೆ ಆಯಿತು. ಮಕ್ಕಳು ಓದಿ, ಅವರು ಸಹ ನಿಮ್ಮ ಹಾಗೆ ಮಿನಿಸ್ಟರ್ ಮತ್ತು ಅಧಿಕಾರಿಗಳಾಗಬೇಕಲ್ಲಾ. ಅವರು ಅಲ್ಲಿಯೇ ಇರಲಾ? ನೀವು 6000 ಕೋಟಿ ರೂಪಾಯಿಗಳನ್ನು ...

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಕೃಷ್ಣಪ್ಪನವರೇ, ಹರಿಜನರಲ್ಲಿ ಅಯ್ಯಂಗಾರ್ ಎಂದು ತಾವು ಹೇಳಿದಿರಿ. ಆ ಬಗ್ಗೆ ಬಿಡಿಸಿ ಹೇಳಿ, ಅದು ನಮಗೆ ಗೊತ್ತಾಗಲಿಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ:– ನಾವು ಮತ್ತು ನೀವು ಸೇರಿದಾಗ ಈ ಬಗ್ಗೆ ಆಮೇಲೆ ನಿಮಗೆ ಹೇಳುತ್ತೇನೆ. ಏಕೆಂದರೆ, ನೀವು 6000 ಕೋಟಿ ರೂಪಾಯಿಗಳನ್ನು ನೀವು divert ಮಾಡಿಬಿಟ್ಟಿದ್ದೀರಿ. ಇನ್ನು 9000 ಕೋಟಿ ರೂಪಾಯಿಗಳಲ್ಲಿ salary ಗೆ ಎಷ್ಟು ಕೊಟ್ಟಿದ್ದೀರಿ ಸ್ವಾಮಿ? ಅದನ್ನು ಮೊದಲು deduct ಮಾಡಿ. ಉಳಿದ ಹಣದಲ್ಲಿ SC/ST ಗೆ ಏನು development ಆಗಿದೆ? SC/ST ಗೆ ಕೇವಲ 2400 ಕೋಟಿ ರೂಪಾಯಿಗಳು. ಇದರಿಂದ ಏನು

ಉಪಯೋಗ. ಕೇವಲ ಅವರ ಹೆಸರಿನಲ್ಲಿ ಓಟು ಕೇಳುತ್ತಿದ್ದೇವೆ. ನಾವು ಏನು ಮಾಡುತ್ತಿದ್ದೇವೆಂದರೆ, ರೈತರ ಬಗ್ಗೆ ಭಾಷಣ ಮಾಡಿದ್ದಾಗಿದೆ. ಓಟು ತೆಗೆದುಕೊಂಡು ಅಧಿಕಾರಕ್ಕೆ ಬಂದ ಮೇಲೆ ನಾವು ಅದರ ಬಗ್ಗೆ ಮರೆತು ಹೋಗಿಬಿಡುತ್ತೇವೆ. ಮಾನ್ಯ ಮಹದೇವಪ್ಪನವರು ಮತ್ತು ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಹೋರಾಟದ ಹಿನ್ನೆಲೆಯಿಂದಲೇ ಬಂದವರಾಗಿದ್ದಾರೆ. ಅವರು ಕ್ಯಾಬಿನೆಟ್‌ನಲ್ಲಿರುತ್ತಾರೆ. They should prevent. ನೀವು divert ಮಾಡುವುದನ್ನು ನಿಲ್ಲಿಸಬೇಕು. ನೀವು divert ಮಾಡುವುದಕ್ಕಾಗಿ ಏತಕ್ಕಾಗಿ ಬಿಡುತ್ತೀರಿ? ಆಮೇಲೆ ನೀವು ನೇರ ಸಾಲವನ್ನು ಕೊಡಿಸಬೇಕು. ನೀವು ನೇರ ಸಾಲವನ್ನು ಕೊಡದೆ...

ಡಾ॥ ಹೆಚ್.ಸಿ. ಮಹದೇವಪ್ಪ:- ಇದು ಹಿಂದೆ ನಡೆಯುತ್ತಿತ್ತು. ಅದು ಆದ ಮೇಲೆ ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ 2013-14ರಲ್ಲಿ ಒಂದು ಕಾನೂನನ್ನು ಮಾಡಿದ್ದೇವೆ. ಹಿಂದೆ 4-7 ಸಾವಿರ ಕೋಟಿ ರೂಪಾಯಿಗಳನ್ನು maximum ಕೊಡುತ್ತಿದ್ದೆವು. ಜನಸಂಖ್ಯೆ ಅನುಗುಣವಾಗಿ ಹಣ ಇಟ್ಟು non-lapsable grant, non divertible ಆಗಿ ಮಾಡಿದ್ದೇವೆ. ಕಳೆದ ಸಾರಿ 15,380 ಕೋಟಿ ಇತ್ತು. ಮಾನ್ಯ ಕೃಷ್ಣಪ್ಪನವರಿಗೂ ಸಹ ಆ ಆಕ್ಟ್ ಗೊತ್ತಿದ್ದೂ ಸಹ ಹೇಳುತ್ತಿದ್ದಾರೆ. ಇದು historical decision, ಹಿಂದೆ ಯಾರ ಕಾಲದಲ್ಲಿಯೂ ಸಹ ಈ ರೀತಿ ಮಾಡಿರಲಿಲ್ಲ. ಬಹಳ ಜನ ಮಾತನಾಡುತ್ತಿದ್ದರು......

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಮಹಾದೇವಪ್ಪನವರೇ, historical decision ಎಂಬ ಉದ್ದೇಶದಿಂದ ನಾವೆಲ್ಲರೂ ಸಹ ಒಮ್ಮಸ್ಸಿನಿಂದ support ಮಾಡಿದ್ದೇವೆ.

ಡಾ॥ ಹೆಚ್.ಸಿ. ಮಹದೇವಪ್ಪ:- ಹೌದು ಸ್ವಾಮಿ, political conviction ಬೇಕಲ್ಲವೇ ಅದನ್ನು ಮಾಡುವುದಕ್ಕೆ, ನಮ್ಮ ಸಿದ್ಧರಾಮಯ್ಯನವರ ಸರ್ಕಾರ ಮಾಡಿದರೂ naturally ಬೇಡವೆನ್ನುವವರು, ಮಾತನಾಡುವವರೇ ಜಾಸ್ತಿ ಇರುತ್ತಾರೆ. When they were in the policy making chair, why it has not come to their mind? ಬಹಳ ಜನ ಆ ಕಡೆ ಇದ್ದವರು ಇಲ್ಲಿ rule

ಮಾಡಿಲ್ಲವೇ? ಆಗ ಇವೆಲ್ಲಾ ಇರಲಿಲ್ಲವೇ? Why you did not take up the issue?

ಶ್ರೀ ಸಂಜಯ್ ಬಿ. ಪಾಟೀಲ್ (ಬೆಳಗಾವಿ ಗ್ರಾಮೀಣ):- ನಮ್ಮ ಸರ್ಕಾರ ಬಂದ ಮೇಲೆ ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ ಎಂದು ಬಹಳ ಹೆಮ್ಮೆಯಿಂದ ನಮ್ಮ ಸಚಿವರು ಹೇಳುತ್ತಿದ್ದಾರೆ. ಬೆಳಗಾವಿಯ ಅಧಿವೇಶನದಲ್ಲಿ ಒಂದು subject ಬಗ್ಗೆ ಅವರ ಗಮನಕ್ಕೆ ತಂದಿದ್ದೆನು. ಬೆಳಗಾವಿ ಕ್ಷೇತ್ರದಲ್ಲಿ ಮಂಜೂರು ಆಗಿದ್ದ 4.00 ಕೋಟಿ ರೂಪಾಯಿಗಳ ಹಣವನ್ನು ಚಿಕ್ಕೋಡಿ division ನಲ್ಲಿ ಮಾಡುವುದಕ್ಕೆ ಬರುವುದಿಲ್ಲವೆಂದರೂ ಅದನ್ನು transfer ಮಾಡಿದರು. ಅದನ್ನು ಸರಿಮಾಡಿಕೊಡುತ್ತೇವೆಂದು ಹೇಳಿದ್ದರು. ಅದು ಇನ್ನೂ ಆಗಿಲ್ಲ, ಮತ್ತೆ ಅಧಿವೇಶನ ಬಂದರೂ ಇನ್ನೂ ಮಾಡಿಲ್ಲ.

ಡಾ|| ಹೆಚ್.ಸಿ. ಮಹದೇವಪ್ಪ:- ಮಾಡಲಿಕ್ಕೆ ಬರದಿದ್ದರೆ we have to correct it. ಇಲ್ಲದಿದ್ದರೆ audit objection ಆಗುತ್ತದೆ. ನೀವು ನನ್ನ ಗಮನಕ್ಕೆ ತಂದಿದ್ದರೂ, ಮಾಡಲಿಕ್ಕೆ ಬರುವುದಿಲ್ಲವೆಂದರೆ ಮಾಡುವುದಕ್ಕಾಗುವುದಿಲ್ಲ. If it is not permissible in accordance with the provision of law, we will not do it.

ಶ್ರೀ ಸಂಜಯ್ ಬಿ. ಪಾಟೀಲ್:- ಈಗಾಗಲೇ ಮಾಡಿದ್ದೀರಿ ಸರ್, ಸರಿಮಾಡಿಕೊಡಿ, ಇನ್ನೂ ಮಾಡಿಲ್ಲ.

ಡಾ|| ಹೆಚ್.ಸಿ. ಮಹದೇವಪ್ಪ:- ಸರಿ ಮಾಡಲಿಕ್ಕೆ ಸಾಧ್ಯವಿದ್ದರೆ ಸರಿ ಮಾಡಿಕೊಡುತ್ತೇವೆ. ನಾವು ಇಂಥ ಒಂದು ಐತಿಹಾಸಿಕವಾದ ಕಾನೂನು ತಂದಿದ್ದೇವೆ.

ಶ್ರೀ ಸಂಜಯ್ ಬಿ. ಪಾಟೀಲ್:- ಕಾಗದದ ಮೇಲೆ ಕಾನೂನು ಕಾಣಿಸುತ್ತದೆ ಅಷ್ಟೇ ಸರ್ implement ಆಗಿಲ್ಲ.

ಡಾ॥ ಹೆಚ್.ಸಿ. ಮಹದೇವಪ್ಪ:- ಇನ್ನು 10 ವರ್ಷದಲ್ಲಿ we can eradicate poverty of SC/ST people who comprise 24% of the population. ಇಷ್ಟೊಂದು ದೊಡ್ಡ ಕಾನೂನು ಮಾಡಿದ್ದೇವೆ. Not that you are opposing, ಇದಕ್ಕೆ ಶಾಸನವನ್ನು ಮಾಡಿ ಯೋಜನಾ ಗಾತ್ರದಲ್ಲಿ ಜನಸಂಖ್ಯೆಗನುಗುಣವಾಗಿ ಹಣವಿಟ್ಟು lapse ಆಗಬಾರದು, ಖರ್ಚು ಮಾಡದೇ ಇರುವ ಅಧಿಕಾರಿಗಳನ್ನು punishment ಮಾಡಬೇಕೆಂಬ ಒಂದು ಕಾನೂನು ತಂದಿದ್ದೇವೆ. ದೇಶದ ಇತಿಹಾಸದಲ್ಲಿ ಇದು ಮೊದಲನೆಯದು, ಆಂಧ್ರ ರಾಜ್ಯ first, second ನಮ್ಮ ರಾಜ್ಯ.

ಶ್ರೀ ಎಂ.ಟಿ. ಕೃಷ್ಣಪ್ಪ:- ಮಳೆ ಬಿದ್ದ ಮೇಲೆ, agricultural department ನವರು equipments ಅನ್ನು ಬಾಡಿಗೆಗೆ ಕೊಡುತ್ತಾರೆ, ಯಾವಾಗ ಕೊಡುತ್ತೀರಿ ಎಂದರೆ ಅಕ್ಟೋಬರ್, ನವೆಂಬರ್‌ನಲ್ಲಿ, ಆಗ ನಾವೇನು ಬಿತ್ತನೆ ಮಾಡುತ್ತೇವೆಯೇ? ಈಗ already 2014-15ನಲ್ಲಿ you have diverted ₹ 6,000 Crore. We have not received implements for this year nor previous year. Last year 6000 ಕೋಟಿ ರೂಪಾಯಿಗಳನ್ನು divert ಮಾಡಿದ್ದೀರಿ. ಅದನ್ನು ಒಪ್ಪಿಕೊಳ್ಳಿ, ನಿಮ್ಮ rules next 2015-16 ಕ್ಕೆ apply ಆಗುತ್ತದೆ. ನಾನು ಒಪ್ಪುತ್ತೇನೆ. ನೇರ ಸಾಲ ಏಕೆ cut ಮಾಡಿದ್ದೀರಿ? ಆಯಿತು, ನೀವು ಒಂದು ನಿಮಿಷ, I will finish.

ಡಾ॥ ಹೆಚ್.ಸಿ. ಮಹದೇವಪ್ಪ:- ನೋಡಿ, 4-7 ಸಾವಿರ ಕೋಟಿ ಗಿಂತ ಹೆಚ್ಚು ಹಣ ಇಟ್ಟಿದ್ದು, ಈ 67 ವರ್ಷದ ಇತಿಹಾಸದಲ್ಲಿ ನಾವು ನೋಡಲೇ ಇಲ್ಲ. ಈ ಸಾರಿ ಮಾಡಿದಾಗ ಒಂದು ಕಟ್ಟುನಿಟ್ಟಿನ ಕಾನೂನು ಮಾಡಿ, ಇಡೀ ಸದನದಲ್ಲಿ ಒಕ್ಕೊರಲಿನಿಂದ ಬೆಳಗಾವಿ ಅಧಿವೇಶನದಲ್ಲಿ ಅದಕ್ಕೆ approve ಮಾಡಿಕೊಟ್ಟು, ಅದನ್ನು appreciate ಮಾಡಬೇಕಲ್ಲವೇ? ಹಿಂದೆ ಯಾವ ರೀತಿಯಲ್ಲಿ ಇಷ್ಟು ದೊಡ್ಡ ಪ್ರಮಾಣದ ಹಣವನ್ನು SC/ST upliftment ಗೆ ನಿಗದಿ ಮಾಡಲಾಗಿದೆ?

ಶ್ರೀ ಎಂ.ಟಿ. ಕೃಷ್ಣಪ್ಪ:- Next year ನೋಡೋಣ. ಕೇಳಿ, ಮಹದೇವಪ್ಪನವರೆ ನೀವು ನನಗೆ convince ಮಾಡುವ ಅವಶ್ಯವಿಲ್ಲ.

Dr. H.C. MAHADEVAPPA:- No. No. I am not convincing.

SRI M.T. KRISHNAPPA:- I will tell you that you have to convince your own skin people, not for me. ನನಗಲ್ಲ, your skin people. Why you are convincing me? I am better than you. No, no. Wrong.

Dr. H.C. MAHADEVAPPA:- No. No. Knowing fully well you have to throw light and appreciate.

ಶ್ರೀ ಎಂ.ಟಿ. ಕೃಷ್ಣಪ್ಪ:- ನಿಮ್ಮ ಜನ ಎಂದು ನೋಡಿ. ನಿಮ್ಮ skin people ನೋಡಿ. Not for me. ನನಗೆ convince ಮಾಡಿ what is an achievement? ಅದರಲ್ಲಿ achievements ಏನಿದೆ? ಇವತ್ತು ಏನಾಗಿದೆ...

ಉಪಾಧ್ಯಕ್ಷರು:- ಕೃಷ್ಣಪ್ಪನವರೇ conclude ಮಾಡಿ.

ಶ್ರೀ ಎಂ.ಟಿ. ಕೃಷ್ಣಪ್ಪ:- ಸರ್, ಆಯಿತು, ಇನ್ನೆರಡು ನಿಮಿಷ ಮುಗಿಸುತ್ತೇನೆ. ಇವತ್ತು ಏನಾಗಿದೆ ಎಂದರೆ, ಕೃಷಿ ಕ್ಷೇತ್ರಕ್ಕೆ ಕೇವಲ 11% ಬಜೆಟ್ ಕೊಟ್ಟಿದ್ದಾರೆ, ಇದು ಸಾಕಾಗುವುದಿಲ್ಲ. SC/ST ಜನರಿಗೆ ನಾವೇನು ಬಜೆಟ್ allotment ಕೊಟ್ಟಿರುತ್ತೇವೆ, ಈ ಬಗ್ಗೆ ನಾನೇಕೆ ನೊಂದುಕೊಂಡು ಹೇಳುತ್ತೇನೆ ಎಂದರೆ, ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ SC/ST ಜನರು ಇದ್ದಾರೆ. ಒಂದು ಗುಂಟೆ ಭೂಮಿ ಇಲ್ಲದೇ ಇರುವವರು ಇದ್ದಾರೆ, ಅವರಿಗೆ ಯಾರು ಸಾಲ ಕೊಡುತ್ತಾರೆ? ಮಹದೇವಪ್ಪನವರು ಹೇಳುತ್ತಾರಲ್ಲಾ, 37 ಲಕ್ಷ ಜನರು, ಸೊಸೈಟಿಯಲ್ಲಿ ಸಾಲ ತೆಗೆದುಕೊಂಡಿರುವವರು ಇದ್ದಾರೆ ಅಷ್ಟೇ. ಅವರು renewal ಮಾಡುತ್ತಾರೆ. ಹೊಸಬರಿಗೆ ಯಾರಿಗಾದರೂ ಸಿಗುತ್ತೆದಯೇ ಸರ್? SC/ST ಜನರಿಗೆ ಭೂಮಿ ಇದೆಯೇ ಸಾಲ ತೆಗೆದುಕೊಳ್ಳುವುದಕ್ಕೆ? ಯಾವ ಸಾಲ ಅವರಿಗೆ ಕೊಡುತ್ತೀರಿ? ಕೇವಲ ಪೇಪರ್‌ನಲ್ಲಿ statement ಮಾಡಿಕೊಂಡು, ಬಜೆಟ್ ಮಂಡನೆ ಮಾಡಿದರೆ ಏನು ಸಾರ್ಥಕವಾಗುತ್ತದೆ?

Totally what is an achievement? ಅವರಿಗಾಗಿ ಏನು achievements ಮಾಡಿದ್ದೀರಿ? ಅದರ ಬಗ್ಗೆ ನಾವು ಚಿಂತನೆ ಮಾಡಬೇಕಲ್ಲವೇ? That is our concept. ಮಹದೇವಪ್ಪನವರು ನನಗೆ convince ಮಾಡುವುದರಲ್ಲಿ ಅರ್ಥವಿಲ್ಲ. ಜೊತೆಗೆ ಏನು ಇವತ್ತು ಈ ಅರಣ್ಯವಾಸಿಗಳನ್ನು shift ಮಾಡುವುದಕ್ಕೆ ಬಜೆಟ್‌ನಲ್ಲಿ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಬಜೆಟ್ ಎಷ್ಟು ಇಟ್ಟಿದ್ದೀರಿ? ಅದಕ್ಕೆ ಬಜೆಟ್ ಇಟ್ಟಿಲ್ಲ. ಕೊನೆಯ ಪಕ್ಷ ನಮ್ಮ ಬಿಜೆಪಿ ಸ್ನೇಹಿತರು ಹೇಳುತ್ತಿದ್ದರು, ಮೊನ್ನೆ ಒಬ್ಬರು ಪೇಪರ್‌ನಲ್ಲಿ ದೊಡ್ಡ article ಸಹ ಬರೆದಿದ್ದರು. ಅವರಿಗೆಲ್ಲಾ rehabilitation ಮಾಡಲಿಕ್ಕೆ ಸುಮಾರು 400 ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ. ಆದರೆ ಅವರಿಗೆ ಮನೆ ಕಟ್ಟಿಕೊಡಲಿಕ್ಕೆ 1.00 ರೂಪಾಯಿ ಇಟ್ಟಿರುವ ಬಗ್ಗೆ ಈ ಬಜೆಟ್ ಬುಕ್‌ನಲ್ಲಿಲ್ಲ. ಅದಕ್ಕೆ ಏನು ಮಾಡುತ್ತೀರಿ? ಕೇವಲ announcement ಗೆ ಸೀಮಿತವಾಗುವಿರಾ? ಇಲ್ಲವೇ ಅದನ್ನು ಕಾರ್ಯಗತ ಮಾಡುವ ಚಿಂತನೆ ನಿಮ್ಮಲ್ಲಿದೆಯೇ? ಎಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಒಟ್ಟಾರೆ ಹೇಳುವುದಾದರೆ, ಇನ್ನೊಂದು ವಿಷಯ ನಾನು ಹೇಳಬಯಸುತ್ತೇನೆ. ನಮ್ಮ ಸ್ನೇಹಿತರೆಲ್ಲಾ ಅದನ್ನು ಒಪ್ಪುತ್ತಾರೆ. ನಾವು MLA LAD ಗೆ ಜಾಸ್ತಿ ಕೇಳಿದ್ದೇವೆ. ನಮಗೆ ಕೊಡಬೇಕು, ಜನ ನಮ್ಮನ್ನು ಕೇಳುತ್ತಾರೆ. Nominated MLC ಗೂ ಹಣ ಕೊಡುತ್ತೀರಿ, ಅವರನ್ನು ಯಾರು ಕೇಳುತ್ತಾರೆ? ನಮ್ಮ ವಿಧಾನಸೌಧದಿಂದ elect ಆಗಿ ಹೋದವರಿಗೂ ದುಡ್ಡು ಕೊಡುತ್ತೀರಿ, ಅವರನ್ನು ಯಾರು ಕೇಳುತ್ತಾರೆ? ಜನ ನಮ್ಮನ್ನು ಕೇಳುವುದು. ದಯಮಾಡಿ ಅವರಿಗೆ ಕಡಿಮೆ ಮಾಡಿ, ನಮಗೆ ಜಾಸ್ತಿ ಮಾಡಬೇಕು. ಅವರಿಗೆ ಕಡಿಮೆ ಮಾಡಿಬಿಡಿ, ಅದು ನಿಮಗೆ ಬಿಟ್ಟ ವಿಚಾರ nominated MLC ಗೆ ಏಕೆ ನೀವು ಗ್ರಾಂಟ್ ಕೊಡುತ್ತೀರಿ? ವಿಧಾನಸೌಧದಿಂದ elect ಆಗಿ ಹೋದವರಿಗೆ ಏಕೆ ಗ್ರಾಂಟ್ ಕೊಡುತ್ತೀರಿ? ಬೆಳಗಾದರೆ ಜನ ನಮಗೆ ಸ್ವಾಮಿ ದುಂಬಾಲು ಬೀಳುವುದು. ನಮಗೆ ಹೆಚ್ಚಿಗೆ ಮಾಡಬೇಕು, ಪಾರ್ಲಿಮೆಂಟ್‌ನಲ್ಲಿ 5 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ನಮಗೂ 5.00 ಕೋಟಿ ರೂಪಾಯಿಗಳನ್ನು ಕೊಡಬೇಕು. ದಯಮಾಡಿ 5.00 ಕೋಟಿ ರೂಪಾಯಿಗಳನ್ನು

ಕೊಡಿಸಬೇಕೆಂದು ನಾನು Law Minister ಗೆ ಕೇಳಿಕೊಳ್ಳುತ್ತೇನೆ. PWD Minister ಸ್ವಲ್ಪ ಗಮನ ಹರಿಸಬೇಕು. ಮಹದೇವಪ್ಪನವರೆ, ದಯಮಾಡಿ nominated MLC ಗೂ ಗ್ರಾಂಟ್ ಕೊಡುತ್ತಿದ್ದೀರಿ.

ಶ್ರೀ ಬಸವರಾಜ ರಾಯರೆಡ್ಡಿ:- ಅವರಿಗೆ 2.00 ಕೋಟಿ ರೂಪಾಯಿಗಳನ್ನು ಕೊಡುವುದನ್ನು ರದ್ದು ಮಾಡಬೇಕೆಂದು ನಾನು ಮಹದೇವಪ್ಪನವರು ಮಾತನಾಡುತ್ತಿದ್ದೇವೆ.

ಶ್ರೀ ಎಂ.ಟಿ. ಕೃಷ್ಣಪ್ಪ:- ನಾನು ರದ್ದು ಮಾಡಿ ಎಂದೇ ಹೇಳುತ್ತಿರುವುದು. ಅವರಿಗ್ಯಾಕೆ ಕೊಡುತ್ತೀರಿ? ನಮಗೆ 5.00 ಕೋಟಿ ರೂಪಾಯಿಗಳನ್ನು ಕೊಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಸರ್, ಇಲ್ಲಿರುವಂಥ ಎಲ್ಲ ಸದಸ್ಯರುಗಳ ಅಭಿಪ್ರಾಯವೂ ಅದೇ ಆಗಿದೆ. MLA fund ಹೆಚ್ಚು ಮಾಡುತ್ತೇವೆಂದು meeting ನಲ್ಲಿ ಹೇಳಿದರು, ಅದನ್ನು ಮಾಡಲಿಲ್ಲ. ದಯವಿಟ್ಟು ಈ ಬಗ್ಗೆ ಎಲ್ಲರೂ ಒಕ್ಕೊರಲಿನಿಂದ ಹೇಳುತ್ತಿದ್ದಾರೆ. ದಯವಿಟ್ಟು ಇದರ ಬಗ್ಗೆ ತೀರ್ಮಾನ ಮಾಡಬೇಕು.

ಉಪಾಧ್ಯಕ್ಷರು:- Time ಆಯಿತು, ಬೇಗ conclude ಮಾಡಿ.

ಶ್ರೀ ಎಂ.ಟಿ. ಕೃಷ್ಣಪ್ಪ:- ಉಪಾಧ್ಯಕ್ಷರೆ, ಪೊಲೀಸ್ ಇಲಾಖೆಯ ಬಗ್ಗೆ ನಮ್ಮ ಗೋವಿಂದ ಕಾರಜೋಳರವರು ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. ಏತಕ್ಕೆ ಹೇಳುತ್ತೇನೆಂದರೆ, ನಾವು ಶಿಂಷಾ ನದಿಯಲ್ಲಿ ಮರಳು ತುಂಬುತ್ತಾರೆ ನೋಡಿ ಎಂದು ಪೊಲೀಸಿನವರಿಗೆ ಫೋನ್ ಮಾಡುತ್ತೇವೆ. ಆದರೆ ಅವರ ಜೀಪ್ ಅಲ್ಲಿಗೆ ಹೋಗುವುದೇ ಇಲ್ಲ. ಈಗೇನೋ 350 ವೆಹಿಕಲ್ಸ್ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ, Circle ಗೆ, Sub-Inspector ಗೆ, Dy.SP ಗೆ ಒಳ್ಳೆಯ ಗಾಡಿಯನ್ನು ಕೊಡಬೇಕು. ತಳ್ಳೋ ಗಾಡಿಯನ್ನು ಕೊಡುತ್ತಾರೆ. ದಫೇದಾರ್ ತಳ್ಳುವುದು, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಕುಳಿತುಕೊಳ್ಳುವುದು, ಹೀಗಾದರೆ

ಜನ ಹೊರಗಡೆ ನಗುತ್ತಾರೆ. ಅವರನ್ನು ಸಹ ನಾವು ಗೌರವವಾಗಿ ನೋಡಿಕೊಂಡರೆ, ಅವರು ಒಳ್ಳೆಯ ಸೇವೆಯನ್ನು ಮಾಡುತ್ತಾರೆ. ಮಟಕಾ, ಲಾಟರಿ, pick pocket ಇವೆಲ್ಲವೂ ಸಹ ಪೊಲೀಸಿನವರಿಗೆ ಗೊತ್ತಿದೆ. ಅವರನ್ನೆಲ್ಲ ಯಾರೂ ಹಿಡಿಯುತ್ತಿಲ್ಲ. ಇದರ ಹಿನ್ನೆಲೆಯ ಬಗ್ಗೆ ನಾನೇನು ನಿಮಗೆ ಹೇಳಬೇಕಾಗಿಲ್ಲ. ಹಾಗಾಗಿ ಸನ್ಮಾನ್ಯ Home Minister ಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವೆಲ್ಲವನ್ನೂ ಸ್ವಲ್ಪ prevent ಮಾಡಿ. ಇಲ್ಲದಿದ್ದರೆ ಬಹುಶ: ಆಡಳಿತ ಕುಸಿದಿದೆ ಎಂದು ಜನ ಭಾವಿಸುತ್ತಾರೆ. ಇವತ್ತೇನಾಗಿದೆ ಎಂದರೆ, ಹೊರಗಡೆ ದಿವಸ ಆ ಬಗ್ಗೆ ವ್ಯಾಖ್ಯಾನ ನಡೆಯುತ್ತದೆ. ಒಟ್ಟಾರೆ ಈ ಬಜೆಟ್ ದೂರದೃಷ್ಟಿ ಇಲ್ಲದಿರುವ ಬಜೆಟ್. ಇಷ್ಟೆಲ್ಲಾ ಕೊಟ್ಟಿದ್ದೇವೆ. ನೀವು small scale industry ಗೆ ಏನು ಕೊಟ್ಟಿದ್ದೀರಿ? ಅಲ್ಲೇ employment generate ಆಗುವುದು. ಹಳ್ಳಿಯಿಂದ ಬರುವ ಜನರಿಗೆ, ಯಾವುದೋ ಕೂಲಿ ಮಾಡುವವನಿಗೆ, SSLC fail ಆದವನಿಗೆ, ITI ಮಾಡಿಕೊಂಡಿರುವವರಿಗೆ, ಸಣ್ಣಪುಟ್ಟ job oriented course ಮಾಡಿಕೊಂಡಿರುವವರಿಗೆ ಅಲ್ಲಿ job ಸಿಗುತ್ತದೆ. ನೀವು ಅಲ್ಲಿಗೆ ಏನು scope ಕೊಟ್ಟಿದ್ದೀರಿ? ದಯಮಾಡಿ ಅದನ್ನು ಹೆಚ್ಚು generate ಮಾಡಲಿಕ್ಕೆ ನೀವು ಕೊಡುತ್ತಿಲ್ಲ. ಒಟ್ಟಾರೆ ಹೇಳುವುದಾದರೆ ಈ ಬಜೆಟ್ ದೂರದೃಷ್ಟಿ ಇಲ್ಲದಿರುವ ಬಜೆಟ್. ಇದನ್ನು ದೂರದೃಷ್ಟಿ ಬಜೆಟ್ ಎಂದು ಪರಿಗಣಿಸಿದರೆ ಬಹಳ ಖುಷಿಪಡುತ್ತೇನೆ. ಎಲ್ಲಾದರೂ ಒಂದು ರೂಪಾಯಿಗೆ ಅಕ್ಕಿ ಕೊಟ್ಟಿದ್ದೇವೆ, ಎಂಟಾಣೆ ಅಕ್ಕಿ ಕೊಟ್ಟಿದ್ದೇವೆಂದು ಹೇಳಿದರೆ ಅದು ದೊಡ್ಡ ಸಾಧನೆ ಆಗುವುದಿಲ್ಲ. ನೀವು ಸಾವಿರ ಕೋಟಿ ರೂಪಾಯಿಗಳನ್ನು, ಲಕ್ಷ ಕೋಟಿ ರೂಪಾಯಿಗಳನ್ನು ಸಾಲ ಮಾಡಿ, ಆ irrigation ಗೆ ಕೊಡಿ. ಕೋಲಾರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳಿಗೆ ಕುಡಿಯುವ ನೀರಿಗೆ ಹಣ ಕೊಡಿ, ಅದು ಸಾಧನೆಯಾಗಿ ಉಳಿಯುತ್ತದೆ. ಇಲ್ಲದಿದ್ದರೆ ಇವೆಲ್ಲಾ ಏನೂ ಉಪಯೋಗವಾಗುವುದಿಲ್ಲ. ತಾಳಿಭಾಗ್ಯ ಕೊಟ್ಟವರು ಠೇವಣಿ ಕಳೆದುಕೊಂಡಿದ್ದಾರೆ. ಇಂಥ ಬಹಳ ಯೋಜನೆಗಳೆಲ್ಲಾ ಹೋಗಿವೆ, ಯಾವುದೂ ಉಳಿಯುವುದಿಲ್ಲ. ಶಾಶ್ವತವಾದ ಕೆಲಸ ಮಾಡಬೇಕೆನ್ನುವುದು ನನ್ನ ಅನಿಸಿಕೆ. ಹಾಗಾಗಿ ಈ ಬಜೆಟ್ ಒಟ್ಟಾರೆ

ದೂರದೃಷ್ಟಿ ಇಲ್ಲದಿರುವ ಬಜೆಟ್, ರೈತರ ಪರ ಯಾವುದೇ ಚಿಂತನೆ ಇಲ್ಲದಿರುವ ಬಜೆಟ್ ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ತುಂಬಾ ಧನ್ಯವಾದಗಳು.

ಉಪಾಧ್ಯಕ್ಷರು:- ಈಗ ಶಾಸನ ರಚನೆ, ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳೋಣ.

9. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2015

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ):- ಮಾನ್ಯ ಉಪಾಧ್ಯಕ್ಷರೆ, 2015 ನೇ ಸಾಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಉಪಾಧ್ಯಕ್ಷರು:- ವಿಧೇಯಕದ ಬಗ್ಗೆ ವಿವರಿಸಿ.

ಶ್ರೀ ಟಿ.ಬಿ. ಜಯಚಂದ್ರ:- ಉಪಾಧ್ಯಕ್ಷರೆ, ಇದು ಬಹಳ simple ಆಗಿರುವಂಥ ಮಸೂದೆ, ಇಲ್ಲಿ ತಂದಿರುವಂಥ ಒಂದೇ ತಿದ್ದುಪಡಿ ಏನೆಂದರೆ, ಮೊದಲು 60 ಹೆಕ್ಟೇರ್ ಎಂದು ಇತ್ತು. 60 ಹೆಕ್ಟೇರ್‌ಗೆ 150 ಎಕರೆ ಆಗುತ್ತಿತ್ತು. ಆದರೆ ಅಲ್ಲಿ ಭೂಮಿ ಇಲ್ಲದೇ ಇರುವುದರಿಂದ, ಅದನ್ನು 125 ಎಕರೆ ಎಂದು ತಿದ್ದುಪಡಿ ಮಾಡಬೇಕು, ಅಷ್ಟೇ ಇದರಲ್ಲಿ ಇನ್ನೇನೂ ಇಲ್ಲ. ಅದಕ್ಕಾಗಿ ದಯಮಾಡಿ ಈ ತಿದ್ದುಪಡಿ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕು.